
# ಅಶೋಕ ಬಾದರದಿನ್ನಿ

ಡಾ. ವಿಶ್ವನಾಥ ವಂಶಾಕೃತಮಠ

ಅಶೋಕ ಬಾದರದಿನ್ನಿ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಅಶೋಕ ಬಾದರದಿನ್ನಿ

ಡಾ. ವಿಶ್ವನಾಥ ವಂಶಾಕೃತಮಠ

**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**Ashok Badardinni :**
A Monograph in Kannada by **Dr. Vishwanath Vamshakrithimath**
Published by **Mr. Siddaraju**, Registrar, Karnataka Nataka Academy, Kannada Bhavana, J.C.Road, Bengaluru- 560002. Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : viii + ೮೨ = ೯೦
ಬೆಲೆ : ರೂ. ೭೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್
**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
ಸ್ಕ್ಯಾಬ್ ಟೆಕ್ ಪ್ರಿಂಟರ್ಸ್
ಬೆಂಗಳೂರು – ೫೬೦ ೦೨೬
ಮೊ. : ೯೭೩೯೦೬೭೩೫೯

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟಣಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

**ಕ**ರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟಣೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟಣಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ್ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟಣೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟಣೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ಪಾದರಸದಂತಹ ಬಾದರದಿನ್ನಿ**

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಪದವಿ ಪಡೆದು ಬಂದ ನಂತರ ೧೯೮೦–೯೦ರ ದಶಕಗಳಲ್ಲಿ ರಾಜ್ಯದ ಉದ್ದಗಲಕ್ಕೂ ಸಂಚರಿಸಿ ವಿಭಿನ್ನ, ವಿಶಿಷ್ಟ ನಿರ್ದೇಶನದ ಮೂಲಕ ಹವ್ಯಾಸಿ ರಂಗಭೂಮಿಗೆ ಸಂಚಲನ ತಂದವರು ಅಶೋಕ ಬಾದರದಿನ್ನಿ. ಕಾಲೇಜುಗಳಿಗೆ ಅತಿ ಹೆಚ್ಚು ರಂಗ ಶಿಬಿರ ನಡೆಸಿ ದಾಖಲೆಯನ್ನೇ ಸೃಷ್ಟಿಸಿದರು. ಸಾಣೇಹಳ್ಳಿ ಶ್ರೀ ಶಿವಕುಮಾರ ಹವ್ಯಾಸಿ ಕಲಾಸಂಘ ಹಾಗೂ ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಮಠದ ತಂಡದ ಆಧಾರ ಸ್ಥಂಭವಾಗಿ ಚಿತ್ರದುರ್ಗದಲ್ಲಿ ನಲೆನಿಂತಿರುವ ಅವರು ರೂಪಕಗಳ ಜನಕ ಎಂದೂ ಹೆಸರಾಗಿದ್ದಾರೆ.

ಇಲಕಲ್ಲ ಸ್ನೇಹರಂಗದ ಸ್ಥಾಪಕರಲ್ಲೊಬರಾದ ಡಾ॥ ವಿಶ್ವನಾಥ ವಂಶಾಕೃತ ಮಠ ಅವರು ರಂಗನಟ, ಸಂಘಟಕ, ನಿರ್ದೇಶಕರಾಗಿ ರಾಜ್ಯದಲ್ಲಿ ದೊಡ್ಡ ಹೆಸರು ಮಾಡಿದ್ದಾರೆ. ಬಾದರದಿನ್ನಿ ಅವರ ಹೆಜ್ಜೆಯ ಜೊತೆ ಹೆಜ್ಜೆ ಹಾಕುತ್ತ ಬಂದ ವಿಶ್ವನಾಥ ಅವರು ತಮ್ಮ ರಂಗ ಗೆಳೆಯನನ್ನು ಆಪ್ತವಾಗಿ ಪರಿಚಯಿಸಿದ್ದಾರೆ.

ಕತೆಗಾರರೂ ಆಗಿರುವ ವಂಶಾಕೃತ ಮಠ ಅವರ ಬರಹ ಕತೆಯಂತೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

**–ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :

**ಕೆ. ಜಗುಚಂದ್ರ**

**ಉಮೇಶ್ ಸಾಲಿಯಾನ್**

**ಹಾಲ್ಕುರಿಕೆ ಶಿವಶಂಕರ್**

# ಕರ್ನಾಟಕ ನಾಟಕ ಅಕಾಡೆಮಿ

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

| | |
|---|---|
| ರಾಜಪ್ಪ ಕಿರಗಸೂರು | ಉಮೇಶ ಸಾಲಿಯಾನ್ |
| ಕಲ್ಪನಾ ನಾಗನಾಥ್ | ವಿ.ಎನ್.ಅಕ್ಕಿ |
| ಪಿ.ತಿಪ್ಪೇಸ್ವಾಮಿ | ಬಿ.ಎಂ.ರಾಮಚಂದ್ರ |
| ಎಂ.ಎಸ್.ಗುಣಶೀಲನ್ | ಎನ್.ಕೆ.ರಾಮಕೃಷ್ಣ |
| ಮುದ್ದಣ್ಣ ರಟ್ಟೆಹಳ್ಳಿ | ಎ.ವರಲಕ್ಷ್ಮಿ |
| ಅನ್ನಪೂರ್ಣ ಸಾಗರ | ಎಸ್.ಕೆ.ಕೊನೆಸಾಗರ |
| ಗುಡಿಹಳ್ಳಿ ನಾಗರಾಜ | ಹಾಲ್ಕುರಿಕೆ ಶಿವಶಂಕರ್ |
| ಎಚ್.ಷಡಾಕ್ಷರಪ್ಪ ಹೊಸಮನಿ | ಎಲ್.ಎಚ್.ರಂಗನಾಥಪ್ಪ |
| ಶ್ರೀಪಾದ ಭಟ್ | ಕೆ.ಜಗುಚಂದ್ರ |

ರಿಜಿಸ್ಟ್ರಾರ್:
ಸಿದ್ದರಾಜು

ಪ್ರಥಮದರ್ಜೆ ಸಹಾಯಕರು:
ಕೆ.ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಲೇಖಕನಾಗಿ. . . .

ಕಳೆದ ಮೂರುವರೆ ದಶಕಗಳ ಮೇಲ್ಪಟ್ಟು ಹವ್ಯಾಸಿ ಹಾಗೂ ವೃತ್ತಿರಂಗಭೂಮಿಯ ಪರಿಚಾರಕನಾಗಿರುವ ನನಗೆ ಕರ್ನಾಟಕ ನಾಟಕ ಅಕಾಡೆಮಿಯ ೨೦೧೧೩-೧೪ರ ಸಾಲಿನ ಹೊಸ ಕಾರ್ಯಕಾರಿ ಸಮಿತಿಯು 'ರಂಗಸಂಪನ್ನ'ರು ಮಾಲಿಕೆಯ ಕುರಿತಂತೆ ಪುಸ್ತಕ ಒಂದನ್ನು ಬರೆದು ಕೊಡಲು ಕೇಳಿದಾಗ ಅಚ್ಚರಿಪಟ್ಟೆ. ಸನ್ ೧೯೭೮-೮೧ರ ಅವಧಿಯ ನಾಟಕ ಅಕಾಡೆಮಿಯ ಸಹಸದಸ್ಯನಾಗಿ ಮಾಜಿ ಆದ ಮೇಲೆ ೨೩ ವರ್ಷಗಳ ನಂತರ ಅಂದಿನ ಅಧ್ಯಕ್ಷರಾಗಿದ್ದ ಹಿರಿಯ ಗೆಳೆಯ ದಿ. ಆರ್. ನಾಗೇಶ್ ನನಗೆ ಇನ್ನೂ ನಾಟಕ ಅಕಾಡೆಮಿ ಪ್ರಶಸ್ತಿ ದೊರೆಯದಿರುವದನ್ನು ಕೇಳಿ ಖಿಚಿತ ಪಡಿಸಿಕೊಂಡು ಆಶ್ಚರ್ಯಪಟ್ಟು ಅವರ ೨೦೦೫ರ ಅವಧಿಯಲ್ಲಿ ನನಗೆ ಪ್ರಶಸ್ತಿ ದೊರೆಯುವಂತಾಯಿತು.

ಅದಾಗಿ ನಾ....ನೀ... ಎನ್ನುವ ಎಲ್ಲ ಪರಿಚಿತ ಅತೀನಾಮರು ನಾಟಕ ಅಕಾಡೆಮಿಗೆ ಬಂದು ಹೋದರು ಉತ್ತರ ಕರ್ನಾಟಕದ ಲೇಖಕ, ಸಂಘಟಕ, ನಿರ್ದೇಶಕ, ಸಂಘ ಸಂಸ್ಥೆ ಹಾಗೂ ನಮ್ಮಂತಹ ಹಲವರನ್ನು ಕಂಡೂ ಕೇಳಿರದಂತೆ ಅಲಕ್ಷಿಸುತ್ತಲೇ ಬಂದರು, ಅದು ಈಗಲೂ ಜಾರಿಯಲ್ಲಿದೆ. ಇದಕ್ಕೆ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹೊರತಲ್ಲ. ನಮ್ಮ ಭಾಗದವರ ಜಾಯಮಾನವೇ ಇದಾಗಿದೆ. ನಾವೂ ಸ್ವಾಭಿಮಾನದಿಂದ ಕೇಳುವದೂ ಇಲ್ಲ ಅವರು ಕೊಡುವುದೂ ಇಲ್ಲ. ಇದನ್ನೇ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸಿ ಹೇಳುವದಾದರೆ ಅದು ಉತ್ತರ ಕರ್ನಾಟದವರ ದೌರ್ಭಾಗ್ಯ ಅನ್ನಿ, ಇಲ್ಲವೆ ನಮ್ಮ ಸೌಜನ್ಯವೆಂದೂ ಹೇಳಬಹುದು.

ಅದೃಷ್ಟವಶಾತ್ ಈ ಸಲ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಉತ್ತರ ಕರ್ನಾಟಕದವರೇ ಆದ ವೃತ್ತಿ ರಂಗಭೂಮಿಯ ಸಾಹಸಿ ಶೇಖ್ ಮಾಸ್ತರ ಅವರ ನಾಮಕರಣವಾದಾಗ ಅಭಿಮಾನಿಸಿದ್ದೆವು.

ಅಪೂರೂಪದ ಏನಕೇನ ಸಂಬಂಧಗಳಂತೆ ಈ ಕೃತಿಯ ರಚನೆ ನನಗೆ ಒದಗಿ ಬಂತು. ಹವ್ಯಾಸಿ ಹಾಗೂ ವೃತ್ತಿರಂಗಭೂಮಿಯ ಜೀವನಾಡಿಗಳೆನಿಸಿದ ಬಾಗಲಕೋಟ ಹಾಗೂ ವಿಜಯಪುರ ಜಿಲ್ಲೆಗಳ ರಂಗಕರ್ಮಿಯೊಬ್ಬರನ್ನು ಪರಿಚಯಿಸುವುದು ಎಂದಾಗ ಸಹಜವಾಗಿ ಶ್ರೀ ಅಶೋಕ ಬಾದರದಿನ್ನಿ ನಮಗೆ ಎದ್ದು ಕಂಡರು. ಈ ಭಾಗದ

ಹವ್ಯಾಸಿ ರಂಗಭೂಮಿಯ ಸಂಚಲನ ಶಕ್ತಿ ಅವರು. ಇಲ್ಲಿ ಅವರನ್ನು ನಾನು ಕಂಡಂತೆ ಚಿತ್ರಿಸಲು ಪ್ರಯತ್ನಿಸಿರುವೆ. ಅದು ಓದುಗ ದೊರೆಗೆ ಇಷ್ಟವಾದರೆ ನನ್ನ ಶ್ರಮ ಸಾರ್ಥಕ.

ಈ ಕಾರ್ಯಕ್ಕೆ ನನ್ನನ್ನು ಅಣಿಗೊಳಿಸಲು ಕಾರಣರಾದ ನಾಟಕ ಅಕಾಡೆಮಿಯ ಈಗಿನ ಅಧ್ಯಕ್ಷರಾಗಿರುವ ಶ್ರೀ ಶೇಖ್ ಮಾಸ್ತರ ಅವರಿಗೂ ಪ್ರಕಟಣಾ ವಿಭಾಗದ ಹಿರಿಯ ಸ್ನೇಹಿತರಾದ ಶ್ರೀ ಗುಡಿಹಳ್ಳಿ ನಾಗರಾಜ ಮತ್ತು ಸದಸ್ಯ ಗೆಳೆಯರಾದ ಶ್ರೀ ವ್ಹಿ.ಎನ್. ಅಕ್ಕಿ ರಾಯಚೂರು, ಶ್ರೀ ಮುದ್ದಣ್ಣ ರಟ್ಟಿಹಳ್ಳಿ, ಶ್ರೀ ಎಸ್ಕೆ. ಹುನಗುಂದ ಹಾಗೂ ಎಲ್ಲ ನಾಟಕ ಅಕಾಡೆಮಿಯ ಇತರೆ ಈಗಿನ ಸದಸ್ಯರಿಗೂ, ಸಿಬ್ಬಂದಿಗಳಿಗೂ ಅಲ್ಲದೇ ಕೃತಿ ರಚನೆಗೆ ಪ್ರೇರಕರಾಗಿ ಮುಚ್ಚು ಮರೆಯಿಲ್ಲದೆ ಎಲ್ಲ ಬಿಚ್ಚಿಕೊಟ್ಟ ಹಿರಿಯ ರಂಗಕರ್ಮಿ ನಮ್ಮವರೇ ಆದ ಶ್ರೀ ಅಶೋಕ ಬಾದರದಿನ್ನಿ ಹಾಗೂ ಈ ಪುಸ್ತಕ ಪ್ರಕಟಣೆಗೆ ಕಾರಣರಾದ ಕರ್ನಾಟಕ ನಾಟಕ ಅಕಾಡೆಮಿಗೂ ಮತ್ತು ಇಲಕಲ್ಲಿನ ಸ್ನೇಹರಂಗಕ್ಕೂ ಈ ಲೇಖಕ ಕೃತಜ್ಞನಾಗಿದ್ದಾನೆ.

– ಡಾ. ವಿಶ್ವನಾಥ ವಂಶಾಕೃತಮಠ
ಇಲಕಲ್ಲ

# ಅಶೋಕ ಬಾದರದಿನ್ನಿ

**ಪೂರ್ವರಂಗ :**

ಅದು ಹವ್ಯಾಸಿ ರಂಗಭೂಮಿಯ ಆರಂಭ ಯೌವ್ವನದ ಕಾಲ. ದೆಹಲಿ, ಬಂಗಾಲ, ಮಹಾರಾಷ್ಟ್ರಗಳಲ್ಲಿ ಆಗಲೇ ಪ್ರಸಿದ್ಧವಾದ ನಾಟಕಗಳು, ನಿರ್ದೇಶಕರು, ನಟರು, ಅಲ್ಲಿಯ ಅನುಭವಗಳೊಂದಿಗೆ-ಕರ್ನಾಟಕದ ರಂಗಭೂಮಿಯಲ್ಲಿ ಹೊಸ ತುಡಿತಗಳಿಗೆ ಒಗ್ಗಿ ವಿಶಿಷ್ಟವಾದದನ್ನು ಸಾಧಿಸುವ ಬಯಕೆ ಹೊಂದಿದ ದಿನಗಳವು. ಅದರಲ್ಲಿ ಮರಾಠಿ ಅಂಟಿನ ನಂಟು ಪಡೆದ್ದಿದ ವಿಜಾಪುರವು ಹೆಸರಾಗಿದ್ದುದು ಮುಂಬೈ ಕರ್ನಾಟಕದ ಪ್ರಮುಖ ಜಿಲ್ಲಾ ಸ್ಥಳ ಎಂದು. ಹೀಗಾಗಿ ಮರಾಠಿ ಸಾಹಿತ್ಯ, ಸಂಸ್ಕೃತಿ, ನಾಟಕಗಳು ಮತ್ತು ಅವುಗಳ ಸಂಬಂಧಗಳು ಕನ್ನಡ ಮರಾಠೀಕರಣದ ಸಮ್ಮೈಕ್ಯತೆಯಲ್ಲಿ ಒಂದಾಗಿ ವಿಜಾಪುರದಲ್ಲಿ ಪ್ರಕಾಶಿಸುತ್ತಿದ್ದ ಅವಧಿ. ಸ್ವಾತಂತ್ರ್ಯ ಪೂರ್ವದ ಐಕ್ಯತೆಗೆ ನಾಂದಿಹಾಡಿದ ದಿ. ಬಾಲಗಂಗಾಧರ ತಿಲಕ್‌ರ ಗಜಾನನೋತ್ಸವ ಕಾರ್ಯಕ್ರಮಗಳು ಒಂದು ವಾರವಿಡಿ ಸಾಮೂಹಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶ ನೀಡಿದಂತಹ ದಿನಗಳು ವಿಜಾಪುರದಲ್ಲಿ ಸಾಗಿಬಂದಂತಹವು. ಅಂತೆಯೇ ನಾಡಹಬ್ಬಗಳು ಕೂಡಾ. ದಸರೆಯ ನಾಡಹಬ್ಬಗಳು ಮತ್ತು ಈ ಗಜಾನನೋತ್ಸವಗಳು ಬಂದರೆ ವರ್ಷದ ಎರಡೂ ಅವಧಿಗಳು ವಿಜಾಪುರಿಗರಿಗೆ ಸಾಂಸ್ಕೃತಿಕ ರಸದೌತಣಗಳು. ಸಂಗೀತ, ನೃತ್ಯ, ನಗೆನಾಟಕ, ಪ್ರಹಸನ ಜೊತೆಗೆ ತಾಂತ್ರಿಕ ಮೆರಗಿನ ರೂಪಕಗಳು ಮೇಳೈಸಿದ ವಿಶಿಷ್ಟ ಗಣಪತಿ ಮೂರ್ತಿಗಳು, ಗಣೇಶನ ಮುಂದೆ ಮಾಯಾಲೋಕವೇ ತೆರೆದಿಡುವಂತಹ ತಾಂತ್ರಿಕ, ಪೌರಾಣಿಕ ಪರಿಣತಿಯ ಪೌರಾಣಿಕ ಪ್ರಸಂಗಗಳ, ಚಲನಶೀಲ ದೃಶ್ಯಗಳ ರೂಪಕಗಳು ನೋಡುಗರಿಗೆ ಎಲ್ಲ ರೀತಿಯ ಕಣ್ಮನಗಳ ಹಬ್ಬಗಳನ್ನು ಉಂಟು ಮಾಡುತ್ತಿದ್ದವು. ಪಕ್ಕದ ಮಹಾರಾಷ್ಟ್ರದ ಹಾಸ್ಯ ನಾಟಕಗಳು, ಕೆಲವೊಮ್ಮೆ ಕನ್ನಡಕ್ಕೆ ತರ್ಜುಮೆಗೊಂಡು ಏಕಾಂಕಗಳಾಗಿ- ವಿಜಾಪುರದ ರಸಿಕರನ್ನು

ಸಾಂಸ್ಕೃತಿಕ ಕನಸಿನಲೋಕಕ್ಕೆ ಕೊಂಡೊಯ್ಯುತ್ತಿದ್ದವು. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಆಗಲೇ ಪ್ರಸಿದ್ಧವಾಗಿದ್ದ ವೃತ್ತಿನಾಟಕಗಳು ಸಹ ಪ್ರದರ್ಶಿತವಾಗುತ್ತಿದ್ದವು.

ಇಡೀ ವಿಜಾಪುರದಲ್ಲಿ ಓಣಿಗೊಂದರಂತೆ, ಗಲ್ಲಿಗೊಂದರಂತೆ, ಇಂಥಹ, ಗಣೇಶೋತ್ಸವ ತಂಡಗಳು, ವಾರವಿಡೀ ಗಣೇಶನನ್ನಿರಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದವು. ಆಗ ಅಲ್ಲಿ ಉತ್ಸುಕವಾದ ಯುವಕ ಪಡೆ, ಆಸಕ್ತರು ವೈವಿಧ್ಯಪೂರ್ಣವಾದ ಕಾರ್ಯಕ್ರಮಕೊಡಲು ತುದಿಗಾಲಲ್ಲಿ ನಿಂತಿರುತ್ತಿದ್ದರು. ಆ ಮೂಲಕ ತಮ್ಮ ಕಲಾ ಪ್ರದರ್ಶನ, ಪ್ರತಿಭೆ, ನಟನೆಗಳ ಮೂಲಕ ಜನಮಾನಸದಲ್ಲಿ ಸೈ ಎನಿಸಿಕೊಳ್ಳುವ ಉಮೇದು ಅವರಲ್ಲಿ ತುಂಬಿರುತ್ತಿತ್ತು. ಇಂತಹ ಉತ್ಸವಗಳಲ್ಲಿ ಪಾಲ್ಗೊಳ್ಳಲು ಬಾಲಕರು, ಯುವಕರು, ಮಧ್ಯವಯಸ್ಕರು ಆಗಲೇ ತಂಡಗಳನ್ನು ಕಟ್ಟಿಕೊಂಡು ಸಜ್ಜಾಗಿರುತ್ತಿದ್ದರು. ಹಾಗೆ ಇಂಥ ಉತ್ಸವಗಳಲ್ಲಿ ಕೊಟ್ಟ ಪ್ರದರ್ಶನಗಳ ಮೂಲಕ ವಿಜಾಪುರದ ರಸಿಕ ಜನತೆಯ ಕಣ್‌ಬಿಂಬವಾಗುತ್ತಿದ್ದರು.

ಇಂತಹ ಉತ್ಸವಗಳಿಂದಾಗಿಯೇ ಮೂಡಿಬಂದ ಪ್ರತಿಭಾವಂತ ರಂಗ ಕರ್ಮಿಗಳ ಸಾಲು ಸಾಲೇ ವಿಜಾಪುರಕ್ಕೆ ದಕ್ಕಿದೆ. ಸಂಗೀತದ ದಿಗ್ಗಜರು, ಜನಪದ ಶ್ರೇಷ್ಠರು, ವೃತ್ತಿಯ ಪರಿಣಿತರು, ಹವ್ಯಾಸಿಯ ರಂಗನಿಪುಣರು ಇಂತಹ ಉತ್ಸವಗಳ ಮೂಲಕ ವಿಜಾಪುರದಲ್ಲಿ ಮನೆಮಾತಾಗಿದ್ದರು. ಅದರಲ್ಲಿ ಪ್ರಮುಖವಾಗಿ, ಜಾಹಗೀರದಾರ, ಥೀಟೆ ಕುಂಟುಬವು ಸಂಗೀತದಲ್ಲಿ, ಟಕ್ಕಳಕಿ ವಿಠಲರಾಯರು, ಅಪ್ಪಾಸಾಹೇಬ ನದಾಫ್ ಜನಪದದಲ್ಲೂ, ಡಾ. ಬಿ.ಟಿ. ಸಾಸನೂರು, ಡಾ.ನಾಡಗೌಡರು, ಡಾ. ಹಿಪ್ಪರಗಿಯವರು ಸಾಹಿತ್ಯದಲ್ಲೂ ಪ್ರಿ. ಪಿ.ಜೆ. ಮಂಗಲಗಿ, ಪ್ರೊ ಎಸ್.ಆರ್. ಬಿಢೇ, ಶ್ರೀ ಶ್ರೀನಿವಾಸ ತಾವರಗೇರಿಯಂಥವರು ರಂಗಭೂಮಿಯಲ್ಲೂ ತಾವು ಬೆಳೆದು ತಮ್ಮ ಶಿಷ್ಯ ಬಳಗವನ್ನೂ ಬೆಳೆಯಿಸಿ–ಕರ್ನಾಟಕದ ತುಂಬ ಮನೆ ಮಾತಾಗಲು ಕಾರಣರಾದರು. ಅವರಲ್ಲಿ– ಶ್ರೀ ಅಶೋಕ ಬಾದರದಿನ್ನಿ, ಸಂಗು ಪಾಟೀಲ, ಶಿವಾನಂದ ಇಂಗಳೇಶ್ವರ(ಸದ್ಯ ದೆಹಲಿ ಕನ್ನಡ ಸಂಘದ ಕಾರ್ಯದರ್ಶಿ)ಹಾಗೂ– ಈ ಲೇಖಕ ರಂಗಭೂಮಿಯಲ್ಲಿ ಗುರುತಿಸಿಕೊಳ್ಳುವಲ್ಲಿ ಕಾರಣವಾಯಿತು, ಜೊತೆಗೆ ಇನ್ನೂ ಹೆಸರಿಸಲಾಗದಷ್ಟು ಹಲವಾರು ಜನ ಈ ಸಂದರ್ಭದಲ್ಲಿ ಭಾಗಿಯಾಗಿದ್ದನ್ನು ಸ್ಮರಿಸಿಕೊಳ್ಳಬಹುದು.

ಈ ವರ್ತುಳದಲ್ಲಿ ಆನುವಂಶಿಕವಾಗಿ ನಾಟಕ, ಸಾಹಿತ್ಯ, ಸಾಂಸ್ಕೃತಿಕ ಆಸಕ್ತಿಯ ಗೀಳಿಲ್ಲದ, ಶಿಸ್ತು ಬದ್ಧ ಕುಟುಂಬದಲ್ಲಿ ಜನಿಸಿ ನಂತರ ಪರಿಸದ ಮೂಲಕ ರಂಗಾಸಕ್ತಿಯನ್ನು ಮೇಳೈಸಿಕೊಂಡು ಬೆಳೆದ ಪ್ರತಿಭೆಯೇ ಅಶೋಕ ಬಾದರದಿನ್ನಿ.

**ಹುಟ್ಟು–ಬಾಲ್ಯ –ಬೆಳವಣಿಗೆ :**

ಸಾಂಸ್ಕೃತಿಕವಾಗಿ ಸಿರಿವಂತಿಕೆಯನ್ನು ಹೊಂದಿದ ಸಂಗೀತ ಶಿರೋಮಣಿಯಾದ

ಸನಾದಿ ಅಪ್ಪಣ್ಣ, ಶೌರ್ಯ ಸಾಹಸದ ಸಿಂಧೂರ ಲಕ್ಷ್ಮಣ, ನಾಟಕ ಕ್ಷೇತ್ರದ ಕರ್ನಾಟಕದ ಶೆಕ್ಸಪೀಯರ್ ಎಂದೇ ಖ್ಯಾತರಾದ ದಿ. ಕಂದಗಲ್ಲ ಹನಮಂತರಾಯರಂಥವರನ್ನು ನೀಡಿದ ಕೃಷ್ಣಾ ತಟದ ಹೆಗ್ಗಳಿಕೆಯ ಈ ನೆಲ-ಜಲದ ತಾಣವೇ ಬೀಳಗಿ ತಾಲೂಕಿನ ಒಂದು ಗ್ರಾಮ ಬಾದರದಿನ್ನಿ. ಮೂಲತಃ ಬಾದರದಿನ್ನಿ ಪಾಟೀಲ ಮನೆತನದವರು. ಇವರು ಸುಮಾರು ೧೦೦ ವರ್ಷಗಳ ಹಿಂದೆ ಸಿರಿವಂತಿಕೆ, ದರ್ಪ, ಜಬರದಸ್ತ್, ಖಡಕ್ ಇತ್ಯಾದಿ ಶಬ್ದಗಳಿಂದ ಕರೆಸಿಕೊಂಡಿದ್ದ ಈ ಮನೆತನದ ಹಿರಿಯರು-ಗ್ರಾಮರಾಜಕಾರಣದ ಮತ್ತು ಹೊಡೆದಾಟದ ಕಾರಣಗಳಿಂದಾಗಿ ಇದ್ದ ಆಸ್ತಿ, ಪಾಸ್ತಿ, ಮನೆ ಮಠ ಎಲ್ಲವನ್ನು ಅಲ್ಲಿಯೇ ಬಿಟ್ಟು –ಮೊದಲಿಗೆ ಕಡ್ಲಿಮಟ್ಟಿಗೆ ಬಂದು ಅಲ್ಲಿಯೂ ಸೂಕ್ತ ಎನಿಸದೆ ರಂಗ ನಿರ್ದೇಶಕರಾದ ಅಶೋಕ ಬಾದರದಿನ್ನಿಯವರ ಅಜ್ಜ-ಈಗಿನ ಜಾಗೃತ ದೈವವೆಂದು ಉತ್ತರ ಕರ್ನಾಟಕದಲ್ಲಿ ಖ್ಯಾತಿ ಹೊಂದಿದ ಬಯಲ ಬ್ರಹ್ಮಚಾರಿ ಹನಮಂತ ದೇವರ ಶಕ್ತಿಯ ತಾಣವೆಂದು ಖ್ಯಾತಿಯಾದ ಅಚನೂರಿಗೆ ದುಡಿಯುವದಕ್ಕೆಂದು ಬಂದು ನೆಲೆನಿಲ್ಲುತ್ತಾರೆ. ದೈವ ಒಲಿದ ಕಾರಣಕ್ಕೋ, ಶ್ರಮಿಕ ದುಡಿಮೆಯ ಫಲವಾಗಿಯೋ ಒಂದು ನೆಲೆಗೆ ನಿಂತ ಈ 'ಪಾಟೀಲ' ಮನೆತನ ತಮಗಂಟಿದ ಪಾಟೀಲ ಅಡ್ಡಹೆಸರು ತೊರೆದು ತಾವು ಬಂದ ಗ್ರಾಮದ 'ಬಾದರದಿನ್ನಿ' ಹೆಸರಿನ ಮೂಲಕ ಹೊಸ ಅಡ್ಡಹೆಸರು ಪಡೆಯುತ್ತಾರೆ. ಸಾಮಾನ್ಯವಾಗಿ ಉತ್ತರಕರ್ನಾಟಕದ ಕುಟುಂಬಗಳ ಖಾನೇ ಸುಮಾರಿ ಅಡ್ಡ ಹೆಸರುಗಳು ಅವರ ಮೂಲ ಸ್ಥಳದ ಗ್ರಾಮನಾಮಗಳೇ ಅಗಿರುವದನ್ನು ಕಾಣಬಹುದಾಗಿದೆ.

ಹೀಗೆ ಅಂದಿನ ಅವಿಭಜಿತ ವಿಜಾಪುರ ಜಿಲ್ಲೆಯ ಈಗಿನ ಬಾಗಲಕೋಟ ಜಿಲ್ಲೆಯ ಅಚನೂರಿನಲ್ಲಿ ನೆಲೆ ನಿಂತ ಮೂಲ ಪಾಟೀಲ ಮನೆತನದ ಬಾದರದಿನ್ನಿಯವರು ದಿ. ೦೬/೦೨/೧೯೫೧ ರಂದು ಅಚನೂರಿನಲ್ಲಿಯೇ ಜನ್ಮತಳೆಯುತ್ತಾರೆ. ಅದು ಕರಾಳ ಅವರಾತ್ರಿ ಅಮವಾಸ್ಯೆಯ ಮಧ್ಯಾನ ೧೨ ಗಂಟೆಗೆ. ಅಜ್ಜಿ ಮಾಳವ್ವ "ಅಮವಾಸೆಯ ಈ ಗಂಡು ಮನೆತನಕ್ಕೆ ಏನೇನು ತರುತ್ತದೆಯೋ ಯಾರು ಬಲ್ಲರು?" ಎಂದು ಜೋರಾಗಿಯೇ ಅಂದುಕೊಂಡರೆ; ಸಹಾಯಕ ಕೃಷಿಅಧಿಕಾರಿಯಾಗಿದ್ದ ತಂದೆ ರುದ್ರಗೌಡ್ರು-ಹೆಂಡತಿ ಗೌರಮ್ಮನೊಂದಿಗೆ ಅಮವಾಸ್ಯೆ ಕಳೆದ ಮೇಲೆಯೇ ಹುಣ್ಣಿಮೆ ತಾನೇ, ಚಂದಪ್ಪನಂತೆ ನನ್ನ ಮಗ ಬೆಳಗುತ್ತಾನೆ ಬಿಡು ಎಂದೆನ್ನುತ್ತಾರೆ. ನೌಕರಿಯ ಕಾರಣಕ್ಕಾಗಿ ತಂದೆಗೆ ವರ್ಗವಾಗಿದ್ದ ಮುಧೋಳ ತಾಲೂಕಿನ ಯರಝರಿಯಲ್ಲಿ ಅಶೋಕರ ಬಾಲ್ಯ ಕಳೆಯುತ್ತದೆ. ಮುಂದೆ ಏನಕೇನ ಸಂಬಂಧಗಳು ಎನ್ನುವಂತೆ – ಇವರ ತಂದೆಗೆ ಜನಪದ ವೃತ್ತಿರಂಗದ ತವರು ಮನೆ ಎನ್ನಬಹುದಾದ, ಧೀಮಂತ ಕಲಾವಿದ ಅದೃಶ್ಯಪ್ಪನ ತಾಣವಾದ,ಬದಾಮಿ ಹತ್ತಿರದ ಕೆರೂರಿಗೆ ವರ್ಗವಾಗುತ್ತದೆ. ಆಗ ರುದ್ರಗೌಡರು ಕೆರೂರಿಗೆ ಮನೆಯನ್ನು ವರ್ಗಾಯಿಸುತ್ತಾರೆ. ಅಲ್ಲಿಂದಲೇ

ಮನೆಗೆ ಹಿರಿಯಮಗನೆನಿಸಿದ ಎರಡನೇಯವರಾದ ಅಶೋಕರ ಬಾಲ್ಯ ಶಿಕ್ಷಣ ಕೆರೂರಿನಲ್ಲಿಯೇ ಆರಂಭವಾಗುತ್ತದೆ. ಜೊತೆಗೆ ತಮ್ಮ ತಂಗಿಯರು ಅಲ್ಲಿಯೇ ಜೊತೆಯಾಗಿರುತ್ತಾರೆ. ಅಶೋಕರಿಗಿಂತ ಹಿರಿಯವನಾದ ಗಂಡು ಮಗುವೊಂದು ಹುಟ್ಟುತ್ತಲೇ ದೈವಾಧಿನವಾಗಿದ್ದು ಶೋಕ ತಂದಿದ್ದರೆ, ಅಶೋಕ ಮತ್ತು ಇತರೇ ಆರು ಜನ ಮಕ್ಕಳ ದೊಡ್ಡ ಕುಟುಂದ ಖುಷಿಯಲ್ಲಿ ರುದ್ರಗೌಡರು ಗೌರಮ್ಮನವರು ಬೀಗುತ್ತಾರೆ. ಒಂದನೇ ವರ್ಗದಿಂದ ಅವತ್ತಿನ ಮುಲ್ಕಿ ಪರೀಕ್ಷೆ ಅಂದರೆ ಏಳನೇ ವರ್ಗದವರೆ ಇವರ ಶಿಕ್ಷಣ ಕೆರೂರಿನಲ್ಲಿಯೇ ಜರುಗುತ್ತದೆ. ಇವರದೇ ಮುಲ್ಕಿ ಶಿಕ್ಷಣದ ಕೊನೆಯ ತಂಡ ಎಂದು ಅಶೋಕ ಈಗಲೂ ನೆನೆಯುತ್ತಾರೆ.

ಈಗಿನ ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲೂಕಿನ ಕೆರೂರ ವೃತ್ತಿ ಹಾಗೂ ಜಾನಪದ ರಂಗಭೂಮಿಗೆ ಹೆಸರುವಾಸಿಯಾದ ಪ್ರದೇಶ. ಪಕ್ಕದಲ್ಲೇ ಹಂಸನೂರು ಪಕ್ಕಾ ವೃತ್ತಿ ರಂಗಭೂಮಿಯ ಕಲಾವಿದೆಯರ ತವರೂರು. ಇಲ್ಲಿ ಆಗಾಗ ಓಣಿಗಳಲ್ಲಿ, ಗಲ್ಲಿಗಳಲ್ಲಿ, ವೃತ್ತಿರಂಗದ ನಾಟಕಗಳು, ಸಣ್ಣಾಟಗಳು, ದೊಡ್ಡಾಟಗಳು ಏರ್ಪಡುತ್ತಿರುತ್ತವೆ. ಪ್ರದರ್ಶನಕ್ಕಿಂತ ತಿಂಗಳ ಮೊದಲೆ ಅವುಗಳ ತಾಲಿಮು ಅಲ್ಲೆಲ್ಲ ಸಹಜ. ಅದೃಶಪ್ಪ ಇಲ್ಲಿಯ ಹೆಸರಾಂತ ಕಲಾವಿದ. ಈ ಎಲ್ಲ ಚಟುವಟಿಕೆಗಳನ್ನು ಕೆರೂರಿನ ಹಿರಿಯರಾದಿಯಾಗಿ ಚಿಕ್ಕಮಕ್ಕಳು ನೋಡುತ್ತಲೇ ಬೆಳೆಯುತ್ತಾರೆ. ಅದರಲ್ಲಂತೂ ಚಿಕ್ಕಮಕ್ಕಳು ಬಿಡುಗಣ್ಣ ಬಿಟ್ಟು,,,,, ತಾಲಿಮಿನ ಕೊಠಡಿಗಳೆಲ್ಲ ಓಡಾಡುತ್ತಾರೆ. ಮಾತನಾಡುವ ಶೈಲಿ......ಸಂಭಾಷಣೆಯ ರೀತಿಗಳನ್ನು ಆಸ್ಥೆಯಿಂದ ಕೇಳಿ . . . . ತಾವೂ ಹಾಗೆಮಾಡಲು ಹೋಗಿ ನಗಾಡುತ್ತಾರೆ. ಕಲಾವಿದರು ಹೇಳಿದ ಸಣ್ಣ ಪುಟ್ಟ ಕೆಲಸಗಳನ್ನು ಮಹತ್‌ಕಾರ್ಯಗಳಂತೆ ಮಾಡಲು ಹೋಗುತ್ತಾರೆ. ರಂಗ ಪ್ರದರ್ಶನದ ದಿನವಂತೂ ಅರಳುಗಣ್ಣುಗಳಿಂದ ಯಾವುದೋ ಲೋಕ ಪ್ರವೇಶಿಸಿದಂತೆ ಇವರೆಲ್ಲ ಮಂತ್ರ ಮುಗ್ಧರಾಗಿ ಬಿಟ್ಟಿರುತ್ತಾರೆ.

ಈ ಬೆಳವಣಿಗೆಗಳು ಅಶೋಕ ಬಾದರದಿನ್ನಿ ಮತ್ತು ಅವರು ಗೆಳೆಯರ ಮೇಲೂ ಪರಿಣಾಮ ಬೀರಿರುತ್ತವೆ. ಕೆರೂರಿನ ಪ್ರಮುಖ ದೇವಸ್ಥಾನದೆದುರು ಒಂದು ಕಟ್ಟೆ, ಆ ಕಟ್ಟೆಯ ಮೇಲೆ ಈ ಹುಡುಗರ ತಂಡದ ಅಣಕು ಪ್ರದರ್ಶನಗಳು. ನೋಡಿದ ನಾಟಕಗಳ ತಾಲೀಮಿನ ಪ್ರಸಂಗಗಳನ್ನು ಗೆಳೆಯರೊಂದಿಗೆ ಅಭಿನಯಿಸಿದ್ದೂ ಇದೆ. ಅಲ್ಲಿ ಪ್ರೇಕ್ಷಕರೆಂದರೆ ತಮ್ಮ ಸಹೋದರಿಯರು ಮತ್ತು ಉಳಿದ ಚಿಕ್ಕಮಕ್ಕಳು. ಕೆರೂರಿನಲ್ಲಿ ಸಾಮಾನ್ಯವಾಗಿ ಕರ್ನಾಟಕದ ಶೆಕ್ಸಪಿಯರ್ ಎಂದು ಹೆಸರಾಗಿದ್ದ ದಿ. ಕಂದಗಲ್ಲ ಹನುಮಂತರಾಯರು ರಚಿಸಿದ ನಾಟಕಗಳನ್ನು ಆಡುವುದು ಬಹಳ ಸಾಮಾನ್ಯ. ಅಲ್ಲಿಯ ಎಲ್ಲ ತಂಡಗಳು ರಾಯರ ಬೇರೆ ಬೇರೆ ನಾಟಕಗಳನ್ನು ಬೇರೆ ಬೇರೆ ಯಾಗಿಯೇ ಆಡುವುದು ಬಹಳ ಸಾಮಾನ್ಯ. ರಾಯರ ಬಹುಪಾಲು ನಾಟಕಗಳು

ಮಹಾಭಾರತದ, ಪೌರಾಣಿಕ ಆಧಾರದ ಕಥೆಗಳನ್ನು ಒಳಗೊಂಡಂತಹವು. ಹೀಗಾಗಿ ಅಲ್ಲಿ ರಾಜ, ರಾಜಕುಮಾರ, ಸೇವಕರು, ಸಖಿಗಳು ಪಾತ್ರಧಾರಿಗಳಾಗುವದು ಅತ್ಯಂತ ಸಹಜ. ರಾಜ, ರಾಜಕುಮಾರರಿಗೆ ಕಿರೀಟವಂತೂ ಬೇಕೆ ಬೇಕಲ್ಲ. ಅದನ್ನೆಲ್ಲ ನೋಡಿದ ಬಾದರದಿನ್ನಿ ಮತ್ತು ಅವರ ಗೆಳೆಯರು ಕಟ್ಟೆಯ ಮೇಲಿನ ಅಣಕು ಪ್ರದರ್ಶನದಲ್ಲಿ ತಾನು ರಾಜನಂತೆ ಅಭಿನಯಿಸುತ್ತಾ ತಾಯಿಯ ಸೀರೆಯನ್ನು ಬೆನ್ನ ಹಿಂದಿನ ರಾಜನ ಗೌನಿನಂತೆ ಧರಿಸುತ್ತಾ, ಕಿರೀಟವಾಗಿ ಆಗ ಹಳ್ಳಿಗಳಲ್ಲಿ ಊಟಕ್ಕೆ ಇಟ್ಟುಕೊಳ್ಳುತ್ತಿದ್ದ ಅಡ್ಡೋಣಿಗೆ(ಈಗಿನ ತಟ್ಟೆಗಳನ್ನು ಇಟ್ಟುಕೊಳ್ಳುವ ಮಣೆಗಳ ಬದಲು ಆಗ ಕಬ್ಬಿಣದಿಂದ ಇಲ್ಲವೇ ತಾಮ್ರದಿಂದ ಮಾಡಿದ ಮೂರು ಕಾಲಿನ ಒಂದು ಅಡಿ ಎತ್ತರದ ಊಟದ ತಟ್ಟೆ ಇಟ್ಟು ಕೊಳ್ಳಲು ಅನುಕೂಲವಾಗುವಂತೆ ಬಳಕೆ ಮಾಡುವ ಸಾಧನ)ಯನ್ನು ತಲೆಯ ಮೇಲೆ, ತಲೆ ಕೆಳಗು ಮಾಡಿ ಉಲ್ಟಾ ಇಟ್ಟುಕೊಂಡು ಮೂರು ಕಾಲುಗಳು ಮೇಲೆ ಎತ್ತರವಾಗಿ ಕಾಣುವಂತೆ ಕಿರೀಟದ ರೀತಿಯಲ್ಲಿ ಧರಿಸಿಕೊಂಡು ನಾಟಕದ ಮಾತುಗಳನ್ನು ಹೇಳುತ್ತಿದ್ದರು. ಆಗಾಗ ರಜೆಯ ದಿನಗಳಲ್ಲಿ ಕೆರೂರಿಗೆ ಬರುತ್ತಿದ್ದ ಕರ್ನಾಟಕವು ಕಂಡ ಸರಳ ಮುಖ್ಯ ಮಂತ್ರಿ ಶ್ರೀ ಜಗದೀಶ ಶೆಟ್ಟರ ಅವರೂ ಕೂಡಾ ಇಂಥ ರಂಗ ಪ್ರಸಂಗಳಲ್ಲಿ ಭಾಗಿಯಾಗಿ ಆಗಲೇ ರಾಜನ ವೇಷಧರಿಸುತ್ತಿದ್ದರು ಎಂದು ನೆನೆಯುತ್ತಾರೆ ಅಶೋಕ ಬಾದರದಿನ್ನಿಯವರು.

ವರ್ಗದಲ್ಲಿ ಸದಾ ಮೊದಲಿಗನಾಗಿದ್ದು, ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುತ್ತಿದ್ದ, ಎಲ್ಲ ಗುರುಗಳ ಕಣ್ಮಣಿಯಾಗಿ ಶಾಲೆಯಲ್ಲಿ ಯಾವುದೇ ಭಾಷಣ ಕಾರ್ಯಕ್ರಮಗಳಿಗೆ ಸೈ ಎನಿಸಿಕೊಂಡ ಅಶೋಕ ಮುಲ್ಕಿ ಪರೀಕ್ಷೆಯ ವಾರ್ಷಿಕ ಪರೀಕ್ಷೆಗಾಗಿ ಸಮೀಪದ ಬದಾಮಿಗೆ ತೆರಳುತ್ತಾರೆ. ಅಲ್ಲಿ ಅಪ್ಪನಿಗೆ ಗೊತ್ತಾಗದಂತೆ ಅವತ್ತಿನ ಕಾಲದಲ್ಲೂ ಸರಿಯಾದ ರಸ್ತೆ ಇಲ್ಲದ ಕಲ್ಲುಬಂಡೆಗಳಿಂದ ಕೂಡಿದ ನಡೆಯಲು ತೊಡಕಾಗಿದ್ದ ಇಂದಿನ ಜಗತ್‌ಪ್ರಸಿದ್ದಿಯ ಬದಾಮಿಯ ಮೇಣ ಬಸದಿಯನ್ನು ಗೆಳೆಯರೊಂದಿಗೆ ನೋಡಲು ಹೋಗಿ ಒಂದು ಬಹು ದೊಡ್ಡ ಎಡವಟ್ಟು ಮಾಡಿಕೊಳ್ಳುತ್ತಾರೆ. ಸಹಜವಾಗಿ ಹುಡುಗುತನವಿದ್ದದರಿಂದ ಬಂಡೆಯಿಂದ ಬಂಡೆಗೆ ಜಿಗಿಯುವಾಗ ಆಯತಪ್ಪಿ ಕೆಳಗೆಬಿದ್ದು ಪಾದದಿಂದ ಮೇಲೆ ಮೀನಖಂಡದ ಕೆಳಗೆ(ಅಂದರೆ ಹಿಮ್ಮಡಿಯ) ಕಾಲು ಮುರಿದುಕೊಳ್ಳುತ್ತಾರೆ. ಆರಂಭದಲ್ಲಿಯೇ ಹೇಳಿದಂತೆ ಇವರ ತಂದೆ ರುದ್ರಗೌಡರು ಜಬರ್ದಸ್ತ ಇದ್ದು ಮತ್ತು ಖಡಕ ಆಗಿ ಶೀಘ್ರ ಕೋಪಿಗಳಾಗಿದ್ದರು. ಅಲ್ಲ ಸಲ್ಲದ ಇಂತಹ ಬೇಜವಾಬ್ದಾರಿ ಕುಕಾರ್ಯಗಳನ್ನು ಮನೆಯಲ್ಲಿ ಯಾರೇ ಮಾಡಿದ್ದರು ದಂಡಿಸುವುದು ಅವರ ಸ್ವಭಾವವಾಗಿತ್ತು. ತಂದೆಯವರ ಸಿಟ್ಟು, ಅವರು ಶಿಕ್ಷಿಸುವ ರೀತಿಯನ್ನು ಕಂಡುಕೊಂಡಿದ್ದ ಅಶೋಕ ಅವರು ಕಾಲು ಮುರಿದ ಸುದ್ದಿಯನ್ನು ಮನೆಯಲ್ಲಿ ಎಲ್ಲೂ ಹೇಳದೇ, ಹಲ್ಲು ಕಚ್ಚಿ ಆದ ನೋವನ್ನು ಸಹಿಸಿಕೊಂಡು, ನಡೆದ ಸಂಗತಿಯನ್ನು ಹೇಳದೇ ಮುಚ್ಚಿಡುತ್ತಾರೆ.

ಆ ವಾರದಲ್ಲಿಯೇ ಕಾಲು ನೋವು ಬಹಳ ಆಗುತ್ತಿದ್ದರು, ತಂದೆ ಬಂದರೆ ಠಾಕೂ ಠೀಕಾಗಿ ಏನೂ ಆಗಿಲ್ಲವೆಂಬಂತೆ ನಡೆಯುತ್ತ, ತಂದೆ ಮರೆಯಾದೊಡನೆ ಕುಂಟುತ್ತ ಓಡಾಡುವದು ಸಹಜವಾಗಿತ್ತು. ತಾಯಿ ಕೇಳಿದಾಗ ಅವರಿಗೆ ಮನೆಯಲ್ಲಿ ಎಲ್ಲೋ ಬಿದ್ದೆ ಸ್ವಲ್ಪ ಪೆಟ್ಟಾಗಿದೆ ಎಂದು ಸುಳ್ಳು ಹೇಳಿ ಆ ಕ್ಷಣ ಪಾರಾಗುತ್ತಿದ್ದರು.

ಇಷ್ಟರಲ್ಲಿ ಇವರ ತಂದೆಗೆ ಕೆರೂರಿನಿಂದ ಬಸವನ ಬಾಗೇವಾಡಿಗೆ ವರ್ಗವಾಗಿದ್ದರೂ ಮನೆ ಕೆರೂರಿನಲ್ಲಿಯೇ ಇರುತ್ತದೆ. ಪರೀಕ್ಷೆ ಮುಗಿದೊಡನೆ ಸಾಮಾನ್ಯವಾಗಿ ರಜೆ. ರಜೆ ಬಂದರೆ ಸಾಕು ಮಕ್ಕಳೆಲ್ಲ ಅಜ್ಜ-ಅಜ್ಜಿ ಎಂದು ಸರಿಕರ ಊರುಗಳಿಗೆ ರಜೆ ಕಳೆಯಲು ಹೋಗುವುದು ಸಾಮಾನ್ಯ. ಹೀಗಾಗಿ ಅಶೋಕ ಕೂಡ ಅವರ ತಾಯಿವರ ತಂದೆ ಅಂದರೆ ಅಜ್ಜ ನಿಂಗಗೌಡ ಬಿರಾದಾರರು ಉದ್ಯೋಗಕ್ಕಾಗಿ ದಾವಣಗೆರೆಯ ರಹವಾಸಿಗಳಾಗಿರುತ್ತಾರೆ. ನೋವನ್ನು ಸಹಿಸಿಕೊಂಡು ಆಗಾಗ ಊದುತ್ತಿದ್ದ ಕಾಲಿನೊಂದಿಗೆ ಕುಂಟುತ್ತಾ ಹೆಜ್ಜೆ ಹಾಕುತ್ತ ಅಶೋಕ ಅವರ ಅಜ್ಜನ ಮನೆಗೆ ರಜೆಗಾಗಿ ದಾವಣಗೆರೆಗೆ ತೆರಳುತ್ತಾರೆ.

**ಮತ್ತೆ ಹುಟ್ಟಿ ಬಂದ ಅಶೋಕ**

ಒಂದು ವಾರ ದಾವಣಗೆರೆಯ ಅಜ್ಜನ ಮನೆಯಲ್ಲಿ ಕಾಲೆಳೆಯುತ್ತಾ ಕಳೆಯುತ್ತಾರೆ, ಅತೀವ ನೋವಿನಿಂದ ನರಳುತ್ತ ಕಾಲ ಕಳೆದ ಬಾಲಕ ಅಶೋಕಗೆ ಹಿಬಂಡದ ಮೇಲಿನಿಂದ ಅತೀವ ಬಾವ ಕಾಣಿಸಿಕೊಂಡು ಊದತೊಡಗುತ್ತದೆ. ಮೂರ್ನಾಲ್ಕು ದಿನ ಕಳೆವಷ್ಟರಲ್ಲಿ ಆನೆ ಕಾಲ ರೋಗದಂತೆ ಕಾಲು ಬಾತುಕೊಂಡು ಕೀವು ಸೋರತೊಡಗುತ್ತದೆ. ಸುಮ್ಮನೆ ಕಾಲು ಉಳಕಿದ್ದು ಎಂದು ಹೇಳಿಕೊಂಡ ಅಶೋಕಗೆ ಹೇಳಲಾಗದ ಪಡಿಪಾಟಲುಗಳು. ಆದರೂ ಅಜ್ಜ ಅಲ್ಲಲ್ಲಿ ಸಣ್ಣ ಪುಟ್ಟ ವೈದ್ಯರಿಗೆ ತೋರಿಸಿದರು ಅದು ಗುಣವಾಗದೆ ವಿಪರೀತಕ್ಕಿಟ್ಟುಕೊಳ್ಳುತ್ತದೆ.

ಇದ್ದಕ್ಕಿದ್ದಂತೆ ಒಂದು ಬೆಳಗು ಟಿಟ್ಯಾನಸ್ ಆಕ್ರಮಿಸಿ ಅಶೋಕರನ್ನು ನಿಸ್ತೇಜಿತರನ್ನಾಗಿಸಿ ನಿಸ್ಚೇತರನ್ನಾಗಿಸಿಬಿಡುತ್ತದೆ. ಗಡಬಡಿಸಿ ಅಜ್ಜ ನಿಂಗನಗೌಡರು ಅಶೋಕರನ್ನು ವೈದ್ಯರ ಹತ್ತಿರ ಕರೆದುಕೊಂಡು ಹೋಗುತ್ತಾರೆ. ಆ ವೈದ್ಯರು ಈ ಜೀವದ ಆಯುಷ್ಯ ಮುಗಿದು ಹೋಗಿದೆ ಎಂದು ಕೈ ಆಡಿಸಿ ಬಿಡುತ್ತಾರೆ. ಏನು ತೋಚದ ಅಜ್ಜ ನಿಂಗನಗೌಡರು ನಿರ್ವಾಹ ವಿಲ್ಲದೇ ಅಶೋಕರ ತಂದೆ-ತಾಯಿಯರಿಗೆ 'ಅಶೋಕ ಇನ್ನಿಲ್ಲ' ಎಂದು ಸುದ್ದಿ ತಲುಪಿಸುತ್ತಾರೆ. ಆ ಕ್ಷಣ ದಾವಣಗೆರೆಯಲ್ಲಿ ಮೇರೆ ಮೀರಿದ ಆಕ್ರಂದನ, ಹುಡುಗನ ತಂದೆ-ತಾಯಿ ದೂರದ ಊರಲ್ಲಿ, ಒಬ್ಬೊಬ್ಬರದು ಒಂದೊಂದು ಮಾತು; ಅಜ್ಜ ಅಜ್ಜಿಯರಿಗೆ ದಿಕ್ಕು ತೋಚದೆ ತಲೆಯ ಮೇಲೆ ಕೈಹೊತ್ತು ಕುಳಿತು ಕೊಳ್ಳುತ್ತಾರೆ.

ತಕ್ಷಣ ಇನ್ನಿಲ್ಲದಂತೆ ಕೆರೂರಿನಿಂದ, ಬಸವನ ಬಾಗೇವಾಡಿಯಿಂದ, ಹತ್ತಿರದವರು, ಸಂಬಂಧಿಕರು, ನೆರೆ ಹೊರೆಯವರು ಆ ದಿನಗಳಲ್ಲಿ ಸರಿಯಾಗಿ ಬಸ್ಸಿನ ಸೌಕರ್ಯ ಇಲ್ಲದೇ ಇರುವದರಿಂದ ಲಾರಿಗಳಲ್ಲಿ ಧಾವಿಸಿ ಬರುತ್ತಾರೆ. ತಾಯಿಯ ಅಳಲು ಹೇಳ ತೀರದು 'ನನ್ನ ಎರಡನೇ ಮಗನು ಬಿಟ್ಟು ಹೋದನೆ'? ಎಂದು ತಾಯಿ ಗೌರಮ್ಮ ಇನ್ನಿಲ್ಲದಂತೆ ರೋದಿಸತೊಡಗುತ್ತಾರೆ. ಬಂದಿದ್ದ ಜನ ಎಲ್ಲ ಪರಿತಪಿಸುವರೇ.

ಮೊದಲೇ ಗಂಭೀರ ಮುಖದ ಮುದ್ರೆಯ ತಂದೆ ರುದ್ರಗೌಡರು 'ಆದದ್ದು ಆಯಿತು ಅವನ ಆಯುಷ್ಯ ಅಷ್ಟೇ ಇರಬೇಕು. ಎಂದು ಎಲ್ಲರನ್ನು ಲೋಕ ರೂಢಿಯಲ್ಲಿ ಸಮಾಧಾನಿಸುತ್ತಾರೆ. ಊರಿಂದ ಬಂದ ಜನ ಶವದಂತೆ ಮಲಗಿದ್ದ ಅಶೋಕರಿಗೆ ಹಾರ ಹಾಕಿ ಗೌರವಾರ್ಪಣೆ ಮಾಡುವುದು ನಡೆದೇ ಇರುತ್ತದೆ. ಮಿಸುಕದ ಸ್ಪಂದನವಿಲ್ಲದ ರೀತಿಯ, ಉಸಿರು ಹೊರ ಹೊಮ್ಮದ ಅಶೋಕರಿಗೆ ಹಾರಹಾಕಲು ಮೂಲತಃ ಬಸವನಬಾಗೇವಾಡಿಯವರೇ ಆಗಿದ್ದ ಆಗ ಹುಬ್ಬಳ್ಳಿಯಲ್ಲಿ ಇರುತ್ತಿದ್ದ, ಅಶೋಕರ ತಂದೆಯೊಡನೆ ಗಳಸ್ಯ ಕಂಠಸ್ಯರಾಗಿದ ಜನಪ್ರಿಯ ವೈದ್ಯ ಡಾ. ಆರ್.ಬಿ.ಪಾಟೀಲರು (ಪದ್ಮಶ್ರೀ ಪುರಸ್ಕೃತರಾಗಿ ಹುಬ್ಬಳ್ಳಿಯ ಕ್ಯಾನ್ಸರ್ ಆಸ್ಪತ್ರೆಯ ಸ್ಥಾಪಕರಾಗಿದ್ದವರು) ಸ್ನೇಹಿತನ ಮಗ ಎಂದು ಬಂದವರು ಹಾರ ಹಾಕಲು ಹೋಗಿ ಸಹಜವಾಗಿ ಹುಡಗನ ಮೈದಡವುತ್ತಾರೆ. ಅವರ ಸ್ಪರ್ಶಕ್ಕೆ ಏನೊ ಸಂವೇದನೆ ಎನಿಸಿ ದಡಕ್ಕನೇ ಕೈ ಹಿಂತೆಗೆದುಕೊಂಡು 'ಏ. . . . . ಗೌಡಪ್ಪ. . . . . ಹುಡುಗನ ಮೈ ಇಷ್ಟೋತ್ತಾಗಿದ್ದರು ಇನ್ನು ಬಿಸಿಯೈತೋ.. .., ನನಗ ಏನೋ. . . . ಆಕ್ಸಿಜನ್ ಕೊಟ್ಟು ಉಪಚರಿಸಿದರೇ ಹುಡುಗ ಮತ್ತೆ ಬದುಕಬಹುದು ಎಂದು ಅನಿಸುತ್ತದೆ'. ಎಂದು ಅವರು ಹೇಳಿದ ಕೂಡಲೇ ಕೂಡಿದ ಜನರಲ್ಲಿ ಅದೇನೋ ಸಂಚಲನ. ಗದ್ದಲವೊ ಗದ್ದಲ ಎಲ್ಲರೂ ಒಂದೊಂದು ಮಾತನಾಡುವವರೇ, . . . .

ವೈದ್ಯ ಪಾಟೀಲರ ಮಾತು ಕೇಳಿ ಅಶೋಕರ ತಂದೆ ರುದ್ರಗೌಡರು ಗಡಬಡಿಸಿ ತಕ್ಷಣ ಡಾವಣಗೆರೆಯ ಖಾಸಗಿ ಅಸ್ಪತ್ರೆಗೆ ಅಶೋಕ ಅವರನ್ನು ಸೇರಿಸುತ್ತಾರೆ. ವೈದ್ಯೋಪಚಾರ ಆರಂಭವಾಗಿಬಿಡುತ್ತದೆ. . . . ಏನಾಶ್ಚರ್ಯ! ಆಕ್ಸಿಜನ್ ಹಚ್ಚಿದ ಹಲವು ನಿಮಿಷಗಳಲ್ಲಿಯೇ ಹೃದಯ ಬಡಿತ. . . ಉಸಿರಾಟ . . . ಆರಂಭವಾಗಿಬಿಡುತ್ತದೆ.

ಯಮನ ಪಾದ ಸೇರಿದ ಅಂದುಕೊಂಡ ಅಶೋಕ ಮತ್ತೆ ಸತ್ಯವಾನನಾಗಿ ಮರು ಹುಟ್ಟು ಪಡೆದುಬಿಡುತ್ತಾರೆ. ಇದೇ ಅಲ್ಲವೇ ವಿಧಿಯಾಟ ಎನ್ನುವದು. ತಾನು ಒಂದು ಬಗೆದರೆ ದೈವದಾಟವೇ ಬೇರೆ ಅನ್ನುವದು. ಕೂಡಿದ ಜನರ ಮುಖದಲ್ಲೆಲ್ಲಾ ರೋಮಾಂಚನ, ಹರ್ಷದ ವಾತಾವರಣ.

ಅಶೋಕ ಇನ್ನಿಲ್ಲ ಎಂದ ವೈದ್ಯ ಯಾರು? . . . ಆಸ್ಪತ್ರೆ ಯಾವುದು?

ಎಂದು ಕೂಡಿದ ಜನ ಗದ್ದಲ ಎಬ್ಬಿಸತೊಡಗಿದಾಗ ವೈದ್ಯ ಪಾಟೀಲರಾದಿಯಾಗಿ ರುದ್ರಗೌಡರು ಜನರ ಅವೇಶವನ್ನು ತಗ್ಗಿಸಿ ಮೃದುಗೊಳಿಸುತ್ತಾರೆ. "ಆಗಿದ್ದು ಆಗಿ ಹೋಯಿತು, ಯಾವ ಮುಹೂರ್ತದಲ್ಲಿ ಅವರು ಹಾಗೆ ಹೇಳಿದರೋ ಏನೋ. . ., ಈಗ ನನ್ನ ಮಗನಂತೂ ಬದುಕಿ ಉಳಿದು ಬಂದನಲ್ಲ ಸಾಕು". ಎಂದು ರುದ್ರಗೌಡರು ಕೂಡಿದ ಜನರನ್ನು ಸಮಾಧಾನಿಸುತ್ತಾರೆ. ಮೊದಲೇ ಗ್ರಾಮೀಣ ಪರಿಸರದ ಜನ, ಲಾರಿಗಳಲ್ಲಿ ಬಂದು ಇಳಿದಿದ್ದರು. ಅಶೋಕ ಮತ್ತೆ ಹುಟ್ಟಿ ಬಂದುದಕ್ಕಾಗಿ ಅವರಜ್ಜನಿದ್ದ ಮನೆಯ ಓಣಿಯಲ್ಲೆಲ್ಲಾ ಹಬ್ಬದ ವಾತಾವರಣ ಮೂಡಿ ಹುಗ್ಗಿ, ಹೋಳಿಗೆ ಮಾಡಿಸಿ ಎಲ್ಲರಿಗೂ ಉಣಬಡಿಸಿ ಹರ್ಷಿಸುತ್ತಾರೆ.

ಆದ ವೈಪರೀತ್ಯವನ್ನು, ವೈದ್ಯ ಪಾಟೀಲರಾದಿಯಾಗಿ ಚರ್ಚಿಸಿ ಹಿಂಬಡದ ಮೇಲಿನ ಮೂಳೆ ಮುರಿದಿದ್ದು, ಅದಕ್ಕೆ ವೈದ್ಯೋಪಾಚಾರ ಮಾಡಲು ಹೇಳಿ ಮತ್ತೆ ಮರಣ ಗೆದ್ದು ಹಿಂದಿರುಗಿ ಬಂದ ಅಶೋಕರನ್ನು ಅಭಿನಂದಿಸಿ ಎಲ್ಲ ಜನ ತೆರಳುತ್ತಾರೆ. ಸಾವು ಬದುಕಿನ ಬಣ್ಣದಾಟ ತೋರಿ ಮುಂದಿನ ರಂಗದಾಟ ತೋರಲಿಕ್ಕೆ ಬಾಲ್ಯದಲ್ಲಿಯೇ ಅಶೋಕ ಹೀಗೆ ಸಿದ್ಧರಾದರೇನೋ? ಎಂದು ಈ ಘಟನೆಯನ್ನು ಕೇಳಿದಾಗ ಮತ್ತು ಬರೆಯುವಾಗ ಅನಿಸುತ್ತದೆ.

### ಜನ್ಮಕ್ಕಂಟಿದ ಅಂಗ ವೈಕಲ್ಯ

ಡಾವಣಗೆರೆಯ ವೈದ್ಯರು ಅಶೋಕರ ಕಾಲಿನ ಉಪಚಾರ ಮಾಡಿ ಇದು ಗುಣವಾಗುವುದು ಅಸಾಧ್ಯ. ಕಾಲು ಕತ್ತರಿಸ ಬೇಕಾಗುತ್ತದೆ. – ದಿನದಿಂದ ದಿನಕ್ಕೆ ಬಾವು ಬಂದು ತುಂಬಾ ಕೀವು ಬರುತ್ತಿದೆ, ಉಪಶಮನ ಸಾಧ್ಯವಿಲ್ಲ ಎಂದು ಕೈಚೆಲ್ಲುತ್ತಾರೆ. ಆಗ ಅಶೋಕರ ತಂದೆ ಮತ್ತೆ ವೈದ್ಯ ಆರ್.ಬಿ. ಪಾಟೀಲರ ಮೊರೆಹೋಗುತ್ತಾರೆ.

"ಅದೆಂತಾ ವೈದ್ಯರೂರೀ. .. . ಅವರು. . . ., ಕಾಲಿಗೆ ಏನಾಗಿದೆ ಎಂದು ಶಸ್ತ್ರ ಚಿಕಿತ್ಸೆ ಮಾಡುವುದು ಬಿಟ್ಟು, ಅದೇನು ಹಾಡು ಹಾಡುತ್ತಾರೆ ಅವರು" ಎಂದು ಅಶೋಕರನ್ನು ಹುಬ್ಬಳ್ಳಿಗೆ ಕರೆತರಲು ಸೂಚಿಸುತ್ತಾರೆ.

ಹುಬ್ಬಳ್ಳಿಯಲ್ಲಿ ಸಾದ್ಯಂತವಾಗಿ ಅಶೋಕರನ್ನು ಪರೀಕ್ಷಿಸಿದ ವೈದ್ಯರು ಮೂಳೆ ಮುರಿದದ್ದಷ್ಟೇ ಅಲ್ಲ, ಸೂಕ್ತ ಕಾಲದಲ್ಲಿ ಔಷಧೋಪಚಾರ, ವೈದ್ಯೋಪಚಾರ ನಡೆಯದೇ ಇರುವದರಿಂದ ಎಲುಬಿನ ಆ ಭಾಗ ಸಂಪೂರ್ಣ ಕೊಳೆತು ಹೋಗಿದೆ. ಸತ್ತು ಹುಟ್ಟಿ ಬಂದವನು ಎನ್ನುತ್ತೀರಿ; ಮುಂದೆ ಅವನ ದೈವ ಹೇಗಿದೆಯೋ ಯಾರಿಗೂ ತಿಳಿದಿಲ್ಲ. ಅವನ ದೈವ ಅವನ ಹಿಂದೆ ಎಂದು ವೈದ್ಯರಾಗಿದ್ದರೂ ದೇವರ, ದೈವದ

ಮಾತು ಹೇಳಿ ಪೂರ್ಣ ಕೊಳೆತ ಮೂಳೆ ಅಷ್ಟನ್ನೇ ಕತ್ತರಿಸಿ ತೆಗೆದು.. ಸ್ವಲ್ಪ ಚೂಪಾಗಿ ಕೊಡಲಿಯ ರೀತಿ ಒಂದಿಷ್ಟು ಎಲುಬನ್ನೂ ಮೊಳಕೆಯಂತೆ ಮುಖ ಮಾಡಿಬಿಡೋಣ. ಆತನ ದೈವ, ಎಲುಬಿನ ಶಕ್ತಿ ವೃದ್ಧಿಸಿದರೇ ವರ್ಷ, ಎರಡು ವರ್ಷದಲ್ಲಿ ಸರಿಹೋಗಬಹುದು; ಇನ್ನಿಲ್ಲದೇ ಹೋದರೆ ಕುಂಟು ಶಾಶ್ವತ. ಕೋಲೂರಬೇಕು ಎಂದು ಹೇಳಿ ಕಾಲಿನ ಆ ಎಲುಬನ್ನು ತುಂಡರಸಿ ಶಸ್ತ್ರಚಿಕಿತ್ಸೆ ಮಾಡುತ್ತಾರೆ. ಅದರ ಪರಿಣಾಮ ಬಾಲಕನಿಗೆ ಕಾಲೂರಲು ಸಾಧ್ಯವೇ ಇಲ್ಲ. ಕುಂಟಲೇಬೇಕು ಇಲ್ಲವೇ ಬಗಲಕೋಲು ಸಹಾಯ ಪಡೆಯಬೇಕು ಅಥವಾ ಅವನ ಹಿಂದೆ ಶಾಶ್ವತವಾಗಿ ಒಂದು ಆಳು ಬೇಕು ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ. ಅಷ್ಟರಲ್ಲಿ ಏಳನೇ ವರ್ಗದ ಮುಲ್ಕಿಯ ಪರೀಕ್ಷೆಯಲ್ಲಿ ಬಾಲಕ ಅಶೋಕ ಮೊದಲ ವರ್ಗದಲ್ಲಿಯೇ ಪಾಸಾಗಿರುತ್ತಾರೆ. ಇದೇ ಅಲ್ಲವೇ ವಿಚಿತ್ರ ವಿಧಿಯ ಆಟ.

ಅಶೋಕರಿಗಾಗಿ ತಂದೆ ಒಂದು ಆಳನ್ನು ಗೊತ್ತುಪಡಿಸುತ್ತಾರೆ. ಪ್ರತಿ ನಿತ್ಯ ಬಾಲಕ ಅಶೋಕರನ್ನು ಹೆಗಲಮೇಲೆ ಹೊತ್ತುಕೊಂಡು ಶಾಲೆಗೆ ಕರೆದುಕೊಂಡು ಹೋಗಲು ಮತ್ತು ಮನೆಗೆ ಕರೆತರುವ ಹೊಣೆಗಾರಿಕೆ ಈ ಆಳಿನದು. ನಡುವೆ ಒಂದಾ.. ಎರಡಾ... ಬಂದರೇ ಎಲ್ಲವೂ ಫಜೀತಿ. ಹಾಗೇ ಆಗಿದ್ದು ಉಂಟು ಎಂದು ಆ ಸಂದರ್ಭವನ್ನು ನೆನೆದು ಮುಜಗರವಿಲ್ಲದೇ ಹೇಳುತ್ತಾರೆ ಅಶೋಕ. ಕೆಲವು ಸಂದರ್ಭಗಳಲ್ಲಿ ಅಲ್ಲಿಯೇ ಮುಂದಿನ ವರ್ಗದಲ್ಲಿ ಓದುತ್ತಿದ್ದ ಅಕ್ಕ ಮತ್ತು ಅಕ್ಕನ ಗೆಳತಿಯರು ಬಗಲಲ್ಲಿ ಎತ್ತಿಕೊಂಡು ಹೋಗಿ ನೆರವಾದದ್ದು ಇದೆ ಎಂದು ನೆನಪಿಸಿಕೊಳ್ಳುತ್ತಾರೆ.

**ದಿ.ಪ್ರಧಾನಿ ಜವಹರಲಾಲ್ ನೆಹರು ಕಂಡಾಗ..,**

ಹೀಗೆ ಅಶೋಕರನ್ನು ಹೆಗಲ ಮೇಲೆ ಹೊತ್ತು ವೈದು ಕರೆದುತರುವ ಪರಿಪಾಟದಲ್ಲಿ ಕೆರೂರಿಗೆ ಆಗ ಅಂದಿನ ಪ್ರಧಾನಿ ಜವಹರಲಾಲ್ ನೆಹರು ಬರುತ್ತಾರೆ. ಅವರನ್ನು ನೋಡುವ ತವಕ ಬಾಲಕನಿಗೆ, ಹೇಗೂ ವಿದ್ಯಾರ್ಥಿಗಳ ಪ್ರಭಾತ್ ಪೇರಿ ಮತ್ತು ಮಾರ್ಚ ಫಾಸ್ಟ್‌ನ ಗೌರವಾರ್ಪಣೆ ಇದ್ದೇ ಇರುತ್ತದೆ. ಇದನ್ನು ತಿಳಿದ ಅಶೋಕರು ಆಳಿಗೆ ಹೇಗೋ ಹೇಳಿ ಪುಸಲಾಯಿಸಿ ಹುಡುಗರ ತಂಡ ಸೇರಿಬಿಡುತ್ತಾರೆ. ಕುಂಟ ಕಾಲಿನ ನೆಪದಲ್ಲಿ ಪಕ್ಕದ ಗೆಳೆಯನ ನೆರವು ಪಡೆದು ಹೆಗಲಾಸರೆಯಾಗಿ ಮುಂದಿನ ಸಾಲಿನಲ್ಲಿ ಕಾಲು ಮೇಲೆ ಎತ್ತಿ ನಿಲ್ಲುತ್ತಾರೆ. ಕೆಂಪು ಸೇಬು ಬಣ್ಣದ, ಅಜಾನುಭಾಹು, ಧೀರೋದಾತ್ತ ನಿಲುವಿನ ಮಂದಸ್ಮಿತ ನೆಹರೂ ಅವರನ್ನು ಅತೀ ಸಮೀಪದಿಂದ ಅಂತಹ ವೈಕಲ್ಯದ ನಡುವಿನ ಸ್ಥಿತಿಯಲ್ಲಿಯೂ ಕಂಡ ಹೆಮ್ಮೆಯ ನೆನಪನ್ನು ಅಶೋಕ ಇಂದೂ ಸ್ಮರಿಸುತ್ತಾರೆ.

ಇದೇ ಸಂದರ್ಭದಲ್ಲಿ ಬಸವನಬಾಗೇವಾಡಿಯಿಂದ ಅಶೋಕರ ತಂದೆಗೆ ಕಲಬುರ್ಗಿ ಜಿಲ್ಲೆಯ ಆಳಂದಕ್ಕೆ ವರ್ಗವಾಗುತ್ತದೆ. ಆಳಂದಕ್ಕೂ ಕೆರೂರಿಗೂ ಬಹಳ ದೂರವಿರುವದರಿಂದ ಕೆರೂರಿನ ಮನೆಯನ್ನು ಆಳಂದಕ್ಕೆ ಸ್ಥಳಾಂತರಿಸಲಾಗುತ್ತದೆ. ಯಥಾ ಪ್ರಕಾರ ಅಶೋಕರನ್ನು ಶಾಲೆಗೆ ಸೇರಿಸಿ ಹೊತ್ತು ಕೊಂಡು ಹೋಗುವ ತರುವ ಕಾಯಕ ಇಲ್ಲಿಯೂ ಮುಂದುವರೆದಿರುತ್ತದೆ. ಈ ಎಲ್ಲ ನೋವುಗಳ ನಡುವೆ ಓದಿನಲ್ಲಿ ಮುಂದೆ ಇದ್ದ ಅಶೋಕ ಅವರು ಅಂತು ಇಂತು ಕಾಲೂರಲಾಗದೆ. . .ಊರುತ್ತಲ್ಲೇ. . . ಒಂಭತ್ತನೇಯ ವರ್ಗವನ್ನು ಪೂರೈಸುವಷ್ಟರಲ್ಲಿ ಹಾಗೂ ಹೀಗೂ ಸಂಪೂರ್ಣ ಕಾಲೂರುವದರಲ್ಲಿ ಯಶಸ್ವಿಯಾಗುತ್ತಾರೆ. ಆದರೆ ನಡಿಗೆಯ ಸಂದರ್ಭದಲ್ಲಿ ಕುಂಟು ತನ್ನ ನಂಟಸ್ತಿಕೆಯನ್ನು ಉಳಿಸಿಕೊಂಡು ಬಿಟ್ಟಿರುತ್ತದೆ. ಹೀಗಾಗಿ ಅಶೋಕ ಅವರು ನಡೆಯುವಾಗ ಬಲಗಾಲು ಕುಂಟಿದಂತೆ ಇರುತ್ತದೆ. ಏನೇ ಇರಲಿ, ಏನೇ ಆಗಲಿ, ಇಷ್ಟಾದರೂ ಮಗನು ನಡೆಯುವಂತಾಯಿತಲ್ಲ ಎಂದು ಅಶೋಕರ ತಂದೆ ತಾಯಿಯಂದಿರು ಸಮಾಧಾನ ಪಟ್ಟುಗೊಂಡು ಸಂತೋಷಿಸುತ್ತಾರೆ. ಅಂತೂ ವೈದ್ಯರು ಹೇಳಿದಂತೆ ಚೂಪ ಕೊಡಲಿ ಹಾಗೆ ಬಿಟ್ಟ ಆ ಎಲುಬಿನ ಮುಖ ಎರಡು ವರ್ಷಗಳಲ್ಲಿ ಬೆಳೆದು ಪರಿಣಾಮ ಬೀರಿ ಎಲುಬು ಕೂಡಿಕೊಂಡು, ಬಾಲಕ ಕುಂಟುತ್ತ ನಡೆಯಲು ಅನುವಾಗುವಂತೆ ಅದು ಪ್ರೇರೇಪಿಸಿತ್ತು. ಎರಡನೇ ಸಲವೂ ದೈವ ಅಶೋಕರನ್ನು ಕೈ ಹಿಡಿದಿತ್ತು.

**ಆರನೇ ರ್‍ಯಾಂಕಿನೊಂದಿಗೆ ಮ್ಯಾಟ್ರಿಕ್. . .**

ದೈಹಿಕವಾಗಿ ಅಂಗ ವೈಕಲ್ಯಹೊಂದಿದ್ದರೂ ಬೌದ್ಧಿಕವಾಗಿ, ಮಾನಸಿಕವಾಗಿ ಹೆಚ್ಚು ಗಟ್ಟಿಮುಟ್ಟಾಗಿದ್ದ ಅಶೋಕ ಅವರು ಕಲಬುರ್ಗಿ ಜಿಲ್ಲೆಯ ಆಳಂದದ ಮ್ಯಾಟ್ರಿಕ್ ಎಂದರೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಆರನೇ ರ್‍ಯಾಂಕ್ ಗಳಿಸಿ ಎಲ್ಲರ ಕಣ್ಮಣಿಯಾಗುತ್ತಾರೆ. ತಂದೆ–ತಾಯಿಯಂತು ಹಿಗ್ಗಿ ಹಿರೇಕಾಯಿಯಾಗಿ ಅಭಿನಂದಿಸುತ್ತಾರೆ. ಅಷ್ಟರಲ್ಲಿಯೇ ತಂದೆ ರುದ್ರಗೌಡರಿಗೆ ಪದೋನ್ನತಿಯಾಗಿ ಯಾದಗಿರಿಗೆ ವರ್ಗವಾಗುತ್ತದೆ. ಇಷ್ಟೆಲ್ಲ ಬೆಳವಣಿಗೆಗಳ ನಡುವೆ ರುದ್ರಗೌಡರು ವಿಜಾಪುರದಲ್ಲಿ ಎರಡು ಮನೆಗಳನ್ನು ಖರೀದಿಸಿರುತ್ತಾರೆ. ಹೀಗಾಗಿ ಮನೆಯೇನೋ ಆಳಂದದಿಂದ ವಿಜಾಪುರಕ್ಕೆ ಸ್ಥಳಾಂತರವಾಗಿರುತ್ತದೆ. ಆದರೆ ಅಶೋಕ ಅವರು ಕಲಬುರ್ಗಿಯ ವಿಜ್ಞಾನ ಕಾಲೇಜಿನಲ್ಲಿ ಪಿ.ಯು.ಸಿಗೆ ಸೇರುತ್ತಾರೆ. ತಂದೆ ಯಾದಗಿರಿಯಲ್ಲಿ; ಮನೆ ವಿಜಾಪುರದಲ್ಲಿ, ಅಶೋಕರು ಕಲಬುರ್ಗಿಯಲ್ಲಿ, ಪ್ರತಿ ನಿತ್ಯ ಆಗಿನ ಕಾಲದಲ್ಲಿ ಹೀಗೆ ಹಳ್ಳಿಯಿಂದ ಪಟ್ಟಣಕ್ಕೆ ಕಲಿಯಲು ಬಂದ ವಿದ್ಯಾರ್ಥಿಗಳಿಗೆ ಮನೆಯಿಂದ ಬರುತ್ತಿದ್ದ ಊಟವು ಬುತ್ತಿಯ ರೂಪದಲ್ಲಿ ಡಬ್ಬಿಯೊಂದಿಗೆ ಬುತ್ತಿಡಬ್ಬಿಯಾಗಿ ಬಸ್ಸಿನ ಮೂಲಕ ಪಟ್ಟಣದಲ್ಲಿ ಇದ್ದ ವಿದ್ಯಾರ್ಥಿಗಳ ಕೈಸೇರುತ್ತಿದ್ದವು. ಹೀಗೆ ಪ್ರತಿನಿತ್ಯ ಕಲಬುರ್ಗಿಗೆ

ತಂದೆಯವರಿದ್ದ ಆಳಂದದಿಂದ ಅಶೋಕರ ಬುತ್ತಿಯ ಪಯಣ ಸಾಗಿರುತ್ತಿತ್ತು. ಹೇಳುವವರು, ಕೇಳುವವರು ಯಾರು ಇಲ್ಲದೇ ಇರುವದರಿಂದ ವಿದ್ಯಾರ್ಥಿ ಸ್ನೇಹಿತರ ಟೀಮ್ ದಿಂದ ಸ್ವತಂತ್ರ ವಾತಾವರಣದಿಂದ ಉಡಾಳ ಮನೋಭಾವ ರೂಢಿಸಿಕೊಂಡ ಅಶೋಕ ಪಿ.ಯು.ಸಿಯಲ್ಲಿ ಡುಮಕಿ ಹೊಡೆಯುತ್ತಾರೆ. ಮುಂದೆ ತಂದೆಯ ಸಿಡುಕು, ಮನೆಯವರ ನಿಟ್ಟುಸಿರಿನ ನೋಟ, ಸಹವರ್ತಿಗಳ ನಿರ್ಲಕ್ಷ್ಯ, ಆಗ ಯಾದಗಿರಿಯಿಂದ ಕಲಬುರ್ಗಿಗೆ ನಿತ್ಯ ಪಯಣ. ತಂದೆಯ ಕಟ್ಟು ನಿಟ್ಟಿನ ಉಸ್ತುವಾರಿಯಲ್ಲಿ, ಅವರ ಸುರ್ಪದಿಯಲ್ಲಿ ಮತ್ತೆ ಪಿ.ಯು. ವಿಜ್ಞಾನ ಪರೀಕ್ಷೆ ತೆಗೆದುಕೊಂಡು ಅಂತು ಇಂತು ಪಿ.ಯು.ಸಿ ಪಾಸಾಗುತ್ತಾರೆ. ಅಷ್ಟರಲ್ಲಿ ಅಶೋಕರ ತಂದೆ ರುದ್ರಗೌಡರಿಗೆ ಯಾದಗಿರಿಯಿಂದ ವಿಜಾಪುರ ಜಿಲ್ಲೆಯ ಸಿಂದಗಿಗೆ ವರ್ಗವಾಗಿ ಬಿಡುತ್ತದೆ. ಆಗ ಮತ್ತೆ ಅಶೋಕ ತಮ್ಮ ಮೂಲ ಸ್ಥಾನ ವಿಜಾಪುರಕ್ಕೆ ಬಂದು ಆಗಲೇ ಖ್ಯಾತಿಯನ್ನು ಹೊಂದಿದ ವಿಜಾಪುರದ ಕೆ.ಸಿ.ಪಿ. ವಿಜ್ಞಾನ ಕಾಲೇಜಿಗೆ ಬಿಎಸ್ಸಿಗೆ ಮೊದಲ ವರ್ಷಕ್ಕೆ ಸೇರುತ್ತಾರೆ.

ವಿಜಾಪುರದಲ್ಲಿ ತಾಯಿಯ ಉಸ್ತುವಾರಿ, ತಂದೆ ಸಿಂದಗಿಯಲ್ಲಿ. ಅಶೋಕ ಎಗ್ಗಿಲ್ಲದೇ ತನ್ನ ಓರಿಗೆಯ ಮಿತ್ರರೊಂದಿಗೆ ವಿಜಾಪುರದ ಗಲ್ಲಿಗಲ್ಲಿಗಳಲ್ಲಿ ಉಡಾಳ ಹುಡುಗರ ಟೀಮಿನೊಂದಿಗೆ ಪ್ರಸಿದ್ಧರಾಗುತ್ತಾರೆ. ಸಿಗರೇಟನ್ನು ವಿಶಿಷ್ಟ ಶೈಲಿಯಲ್ಲಿ ಸೇದುವ ಚಟ ಬೇರೆ ಸೇರಿಕೊಂಡು ಬಿಡುತ್ತದೆ. ಇವರಿಂದ ಗೋಡಬೋಲೆ ಮಾಳಾದ ಗಲ್ಲಿಯ ಹೆಣ್ಣು ಹುಡುಗಿಯರಂತು ಅಶೋಕರ ಟೀಮಗೆ ಬೈಗಳುಗಳ ಸುರಿಮಳೆಯನ್ನೇ ಸುರಿಸುತ್ತಿದ್ದರು. ಹೀಗೆ ಉಡಾಳರ ಗುಂಪಿನ ಉಂಡಾಡಿ ಗುಂಡರಾಗಿದ್ದ ಅಶೋಕರನ್ನು ತಹಬಂದಿಗೆ ತರಲು ತಾಯಿ ಗೌರಮ್ಮನವರು ಪ್ರೀತಿಯ ಕಕ್ಕುಲಾತಿಯಿಂದ ಪ್ರಯತ್ನಿಸುತ್ತಲೇ ಇದ್ದರು. ತಂದೆ ಊರಿಗೆ ಬಂದಾಗಲೊಮ್ಮೆ ಅಶೋಕರ ಸಾಹಸದ ಸುದ್ದಿಕೇಳುತ್ತಿದ್ದ ಅವರು ಅಶೋಕರನ್ನು ಚೆನ್ನಾಗಿಯೇ ಚಮಕಾಯಿಸುತ್ತಿದ್ದರು. ಹೀಗೆ ಉಡಾಳರಾಗಿ ತಿರುಗುತ್ತಿದ್ದ ಅಶೋಕ ಮುಂದೆ ಆ ಉಡಾಳತನದ ಪ್ರತೀಕವಾದ ಗೂಳಿಯಂತೆ ರಂಗಭೂಮಿಗೆ ಪರಕಾಯ ಪ್ರವೇಶಮಾಡುತ್ತಾರೆ ಎನ್ನುವ ಕಲ್ಪನೆ ಆಗ ಮೂಡದೇ ಹೋಗುವದು.

**ಚತುರ್ಭುಜರಾಗಿ ಸಂಸಾರಿಯಾಗಿ ರಂಗಕ್ಕೆ**

ಈ ನಡುವಿನ ವೇಳೆ ಬಿ.ಎಸ್ಸಿಗೆ ಸೇರಿದ ನಂತರ ಸಿಂದಗಿಯಲ್ಲಿ ಇದ್ದ ಸೋದರ ಸೊಸೆಯೊಂದಿಗೆ ಮದುವೆ ನಿಶ್ಚಿತವಾಗಿ ಶ್ರೀಮತಿ ಅನುಸೂಯಾ ಅವರು ಅಶೋಕ ಅವರ ಧರ್ಮಪತ್ನಿಯಾಗಿ ಬಾಳ ಅಂಬುದಿಯನ್ನು ಪ್ರವೇಶಿಸುತ್ತಾರೆ. ಮದುವೆಯಾಗಿ ಸಂಸಾರಿಯಾಗಿದ್ದರೂ ಉಡಾಳ ಗುಂಪಿನ ನಾಯಕರಾಗಿದ್ದ ಗಂಡನ ಅಟಾಟೋಪವನ್ನು

ಸರಿದಾರಿಗೆ ತರಲು ಅತ್ತೆ ಗೌರಮ್ಮನವರ ಪ್ರೀತಿಯ ರೀತಿಯಲ್ಲಿಯೇ ಅಶೋಕರ ಧರ್ಮಪತ್ನಿ ಅನಸೂಯಮ್ಮನವರೂ ಕುಟುಂಬದ ಲಕ್ಷ್ಮಣ ರೇಖೆಯಲ್ಲಿ ಅಶೋಕರನ್ನು ತಂದಿಡುವ ಸಾಹಸವನ್ನು ಮಾಡುತ್ತಲೇ ಇರುತ್ತಾರೆ.

ಈ ಎಲ್ಲ ಮೇಳೈಕೆಗಳ ನಡುವೆ ಅಶೋಕ ಹಾಗೂ ಇತರ ಮಿತ್ರತ ಟೀಂ- ಏಕಾಂಕ ನಾಟಕಗಳಿಂದ ಅಕರ್ಷಿತವಾಗುತ್ತದೆ. ಅದಕ್ಕೆ ಕಾರಣ ಅಂದು ವಿಜಾಪುರದಲ್ಲಿಯ ಸಾಂಸ್ಕೃತಿಕ ವಾತಾವರಣ, ಆರಂಭದ ಪುಟಗಳಲ್ಲಿ ಹೇಳಿದಂತೆ ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಇವತ್ತಿನವರೆಗೂ ಗಣೇಶ ಉತ್ಸವ ಮತ್ತು ದಸರೆಯೆ ನಾಡಹಬ್ಬದ ಸಂದರ್ಭದಲ್ಲಿ ಅತ್ಯದ್ಭುತ ಎನ್ನುವರೀತಿಯಲ್ಲಿ ಒಂದೊಂದು ಗಲ್ಲಿ ಯಿಂದಲೂ ಒಂದೊಂದು ಮಿತ್ರಮಂಡಳಿಗಳು ರಚನೆಯಾಗಿ ಗಣೆಶೋತ್ಸವದ ಸಂದರ್ಭದಲ್ಲಿ ಒಂದರಿಂದ ಹನ್ನೊಂದು ದಿನ, ದಸರೆಯ ನವರಾತ್ರಿ ಉತ್ಸವ ಕಾರ್ಯಕ್ರಮ ಒಂಭತ್ತು ದಿನ ಹೀಗೆ ವೈವಿಧ್ಯಪೂರ್ಣವಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

ಇಲ್ಲಿ ಅದೇ ಗಲ್ಲಿಯ ಯುವಕರಿಗೆ, ಸಂಘಸಂಸ್ಥೆಗಳಿಗೆ, ಸಂಗೀತ, ನೃತ್ಯ, ನಾಟಕ, ಪ್ರಹಸನ, ಹಾಸ್ಯ ಏಕಾಂಕಗಳಿಗೆ ಹಾಗೂ ವೃತ್ತಿ ತಂಡಗಳ ಪ್ರದರ್ಶನಗಳಿಗೆ ಅವಕಾಶವಿದ್ದು, ತಮ್ಮ ಪ್ರತಿಭೆಯ ಮೂಲಕ ಜನರ ಕಣ್ಮಣಿಯಾಗುವದರೊಂದಿಗೆ ಆ ಖರ್ಚುವೆಚ್ಚಗಳಿಗೆ ಆಯಾ ಮಿತ್ರಮಂಡಳಿಗಳು ಕೊಡುವ ನಿರ್ವಹಣಾ ಧನ ನೆರವಾಗುತ್ತಿದ್ದಿಲ್ಲ. ಪ್ರದರ್ಶನವಾಗುವ ನಾಟಕಗಳನ್ನು ನೋಡಿದ ಅಶೋಕ ಮತ್ತು ಗೆಳೆಯರು 'ಅಶೋಕ ಮಿತ್ರಮಂಡಳಿ' ರಚಿಸಿಕೊಂಡು ಅವತ್ತು ಮರಾಠಿ ಪ್ರಭಾವದಿಂದ ಮರಾಠಿ ಹಾಸ್ಯ ನಾಟಕಗಳ ಅನುವಾದ ಇಲ್ಲವೇ ಸ್ವತಂತ್ರವಾಗಿ ಕನ್ನಡದಲ್ಲಿ ಆರಿಸಿಕೊಂಡು ತಾವೇ ರಚಿಸಿದ ನಾಟಕಗಳಿಗೂ ಇಂತ ಉತ್ಸವಗಳಲ್ಲಿ ಪ್ರದರ್ಶನ ಕೊಡುವ ಉಮೇದು ಆರಂಭವಾಗುತ್ತದೆ. ಅವುಗಳಲ್ಲಿ ಅಶೋಕ ಬಾದರದಿನ್ನಿ ಅವರೇ ರಚಿಸಿ ನಿರ್ದೇಶಿಸಿದ 'ರೇಖಾಗೆನಮಸ್ಕಾರ', 'ಕೈ ಮುಗಿತಿನಿ ಕೊಲ್ಬೇಡಿ', ಮುಂತಾದ ಏಕಾಂಕಗಳನ್ನು ಮೊದಲು ಕಾಲೇಜಿನಲ್ಲಿಯೂ ನಂತರ ಇಂತಹ ಉತ್ಸವಗಳಲ್ಲಿ ಪ್ರದರ್ಶಿಸುವ ಮೂಲಕ ನಾಟಕದ ಆಸಕ್ತಿಯ ಮೊಳಕೆ ಮೂಡಿ- ಬೀಜವಾಗುತ್ತದೆ. ಅಷ್ಟರಲ್ಲಿಯೇ ವಿಜಾಪುರದಲ್ಲಿ ದಿ. ಶ್ರೀನಿವಾಸ ತಾವರಗೆರಿಯವರ ತಂಡ ಇಂತಹ ನಾಟಕಗಳಿಗೆ ಪ್ರಸಿದ್ಧವಾಗಿರುತ್ತದೆ. ಅವರಿಂದಲೂ ಆಕರ್ಷಿತರಾದ ಅಶೋಕ ಮತ್ತು ತಂಡ ಅವರ ಮಾರ್ಗದರ್ಶನದಲ್ಲೂ ಮುಂದುವರೆಯುತ್ತಾರೆ. ಇಂಥ ಸಾಂಸ್ಕೃತಿಕ ಉತ್ಸವಗಳಲ್ಲಿ ಮರಾಠಿ, ಕನ್ನಡ, ಹಾಸ್ಯ ಏಕಾಂಕ, ಮತ್ತು ಅಲ್ಪಾವಧಿ ನಾಟಕಗಳನ್ನು ಸಂಯೋಜಿಸಿ, ಸಂಘಟಿಸಿ ಪ್ರದರ್ಶಿಸುತ್ತಿದ್ದ ತಾವರಗೆರಿ ಅವರ ತಂಡವು ಶ್ರೀ ಭೀಮರಾವ್ ಗೋಡಖಿಂಡಿ ಅವರ ನಿರ್ದೇಶನದಲ್ಲಿ

ಗಿರೀಶ್‌ಕಾರ್ನಾಡರ 'ಹಯವದನ' ನಾಟಕವನ್ನು ಅಭಿನಯಿಸಲು ಕೈಗೆತ್ತಿಕೊಳ್ಳುತ್ತಾರೆ. ತಮ್ಮ ವಲಯದಲ್ಲಿ ಬಂದ ಬಾದರದಿನ್ನಿಯವರಲ್ಲಿ ವಿಶೇಷ ಪ್ರತಿಭೆ, ಆಸಕ್ತಿ ಇದೆ ಎಂದು ಗಮನಿಸಿದ ತಾವರಗೆರೆಯವರು ಈ ನಾಟಕದಲ್ಲಿ ದೇವದೂತ ಪಾತ್ರವನ್ನು ಅಶೋಕರಿಗೆ ಕೊಡುತ್ತಾರೆ. ಹೀಗೆ–ನವೀನ ನಾಟಕದಲ್ಲಿ ಪ್ರಧಾನ ಪಾತ್ರ ವಹಿಸುವ ಮೂಲಕ ಮೊದಲಬಾರಿಗೆ ವಿಜಾಪುರದಲ್ಲಿ ಈ ನಾಟಕದ ಮೂಲಕ ಬಾದರದಿನ್ನಿ ಯಶಸ್ವಿಯಾಗುತ್ತಾರೆ. ಈ ನಾಟಕ ಮನೆ ಮಾತಾಗಿ ಎಲ್ಲರನ್ನು ಆಕರ್ಷಿಸಿ– ವಿಜಾಪುರದ ಸಾಂಸ್ಕೃತಿಕ ಲೋಕ ಖುಷಿ ಪಡುತ್ತದೆ. ಈ ನಾಟಕದ ಮೂಲಕ ಅಶೋಕ ಅವರು ಹೊಸ ರಂಗ ಆಯಾಮಕ್ಕೆ ತೆರೆದುಕೊಳ್ಳುತ್ತಾರೆ.

ಒಂದಡೆ ಈ ನಾಟಕದ ಹುಚ್ಚು, ಇನ್ನೊಂದೆಡೆ ನಾಟಕದ ನಂತರ ಸಾಮಾನ್ಯವಾಗಿದ್ದ ಕುಡಿತದ ಗೀಳು, ಇಸ್ಪೇಟ, ಸಿಗರೇಟು ಎಲ್ಲ ಕೂಡಿ ಓಣಿಯಲ್ಲಿ ಅಶೋಕ ಕುಪ್ರಸಿದ್ಧತನಕ್ಕೆ ಹೆಸರಾಗಿ, ಇಷ್ಟು ದೊಡ್ಡವರಾಗಿಯೂ ಸಂಸಾರಿಯಾದ ಮೇಲೂ ತಮ್ಮ ಇಂತಹ ಕೃತ್ಯಗಳಿಂದಾಗಿ ತಂದೆಯಿಂದ ಸಿಟ್ಟು ಬೈಗುಳಗಳಿಗೆ – ಆಗಾಗ ಒಳಗಾಗುತ್ತಿರುತ್ತಾರೆ.

'ಹಯವದನ' ನಾಟಕದ ಪ್ರಭಾವವು ಅಶೋಕ ಅವರನ್ನು ಪೂರ್ಣಪ್ರಮಾಣದಲ್ಲಿ ರಂಗಭೂಮಿಯತ್ತ ಸೆಳೆಯುತ್ತದೆ. ಆದರೆ ಆ ನಾಟಕದ ಆಳ. . . ಉದ್ದ. . . ಅರ್ಥವಂತಿಕೆ ಅವರಿಗೆ ಸಾಧ್ಯವಾಗುವದಿಲ್ಲ. ಈ ಕುರಿತಂತೆ ಶ್ರೀನಿವಾಸ ತಾವರಗೆರಿ ಅವರೊಂದಿಗೆ ಚರ್ಚಿಸುತ್ತಾರೆ. ಈ ರೀತಿಯ ನಾಟಕಗಳನ್ನು ತಾವು ಅರ್ಥೈಸಿಕೊಂಡ ರೀತಿ; ಬೀರುವ ಪರಿಣಾಮ ಮುಂತಾದವುಗಳ ಕುರಿತು, ತಾವರಗೆರಿ ಅವರು ವಿವರಿಸುತ್ತಾರೆ. ಆದರೆ ಬಾದರದಿನ್ನಿ ಅವರಿಗೆ ಸಮಾಧಾನವಾಗುವುದಿಲ್ಲ. ನಾಟಕದ ನಿರ್ದೇಶಕರಾದ ಶ್ರೀ ಭೀಮರಾವ್ ಗೋಡಖಿಂಡಿ, ಪ್ರೊ.ಮಂಗಲಗಿ, ಭಿಡೆ, ಮತ್ತಿತರರೊಂದಿಗೆ ಚರ್ಚಿಸಿ–ತೃಪ್ತರಾಗದೇ ಹೋದಾಗ. . . ; ತಮ್ಮ ಗ್ರಂಥಮಾಲೆ ಸದಸ್ಯತ್ವ ಮತ್ತು ಪುಸ್ತಕ ಮಾರಾಟಕ್ಕಾಗಿ ರಾಜ್ಯ, ಸುತ್ತುತ್ತಿದ್ದು ಖ್ಯಾತ ನಾಟಕಕಾರ ಹಾಗೂ ಪ್ರಕಾಶಕರಾಗಿದ್ದ ಶ್ರೀ ಜಿ.ಬಿ. ಜೋಶಿ ವಿಜಾಪುರಕ್ಕೆ ಪ್ರೊ ಮಂಗಲಗಿ ಅವರ ಹತ್ತಿರ ಬಂದಾಗ. . . . ನಾಟಕದ ಪ್ರಕಾಶಕರು. . . ಲೇಖಕರನ್ನು ಹತ್ತಿರದಿಂದ ಬಲ್ಲ. ಜೋಶಿ; ಅವರೊಂದಿಗೆ ಇಡೀ ತಂಡವು ಇಂಥಹ ನಾಟಕಗಳ ಕುರಿತಂತೆ ಆಪ್ತವಾಗಿ ಚರ್ಚಿಸುತ್ತದೆ. ತನ್ಮೂಲಕ ಬಾರದದಿನ್ನಿ ಅವರು ಜಿ.ಬಿ. ಜೋಶಿ ಅವರೊಂದಿಗೆ ಸಂಪರ್ಕದಲ್ಲಿ ಬರುತ್ತಾರೆ! ಸನ್‌೧೯೭೨–೧೯೭೩ರಲ್ಲಿ ಬಿ.ಎಸ್.ಸಿ. ಪದವಿಯನ್ನು ಉಚ್ಛ ವರ್ಗದಲ್ಲಿ ತೇರ್ಗಡೆಯಾಗುತ್ತಾರೆ. ಮುಂದೆ ಅಶೋಕ ಅವರಿಗೆ ನಾಟಕರಂಗವೇ ಜೀವಾಳವಾಗುತ್ತದೆ. ತಮ್ಮ ಅಶೋಕ ಮಿತ್ರಮಂಡಳಿ ಮತ್ತು ಶ್ರೀನಿವಾಸ ತಾವರಗೆರಿ ಅವರ ನೂತನ ಕಲಾ ಮಂಡಳಿ ಶ್ರೀ ಗುರುಬಸಪ್ಪ ತಾಳಿಕೋಟಿ(ಗುಬ್ಬಾ) ಅವರ ಶ್ರೀ

ರಾಘವೇಂದ್ರ ಗಜಾನನ ಮಂಡಳಿಗಳ ಮೂಲಕ ಹವ್ಯಾಸಿ ನಾಟಕಗಳಲ್ಲಿ, ಹಾಸ್ಯ ಏಕಾಂಕಗಳಲ್ಲಿ, ಉತ್ಸವದ ನಾಟಕಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಪೂರ್ಣ ಪ್ರವಹಾಣದಲ್ಲಿ ಅಶೋಕ ಬಾದರದಿನ್ನಿ ಯವರು ರಂಗಭೂಮಿಗೆ ತೆರೆದುಕೊಳ್ಳುತ್ತಾರೆ.

ಈ ನಡುವೆ ಇವರ ತಂದೆ ರುದ್ರಗೌಡ್ರಗೆ ಅನಾರೋಗ್ಯ ಕಾಡತೊಡಗಿ ಅದು ಕ್ಯಾನ್ಸರ್ ಎಂದು ಗೊತ್ತಾಗಿ ಹುಬ್ಬಳ್ಳಿಯಲ್ಲಿ ಔಷಧೋಪಚಾರ ನಡೆದು ಆರೋಗ್ಯದಲ್ಲಿ ಪ್ರಗತಿ ಅಸಾಧ್ಯ ಎಂದು ಹುಬ್ಬಳ್ಳಿಯಿಂದ ಮರಳಿ ವಿಜಾಪುರಕ್ಕೆ ಬರುವಾಗ. . . . ಕೊಣ್ಣೂರ ಹತ್ತಿರ ರುದ್ರಗೌಡ್ರು ಅಶೋಕ ಅವರಿಗೆ ತಮ್ಮ ಕೈಯ್ಯಲ್ಲಿ ಕಟ್ಟುತ್ತಿದ್ದ ವಾಚನ್ನು ತೆಗೆದುಕೊಡುತ್ತಾ "ಮಗನೇ, . . . ಇಷ್ಟ ದಿನ ನಾನಿದ್ದೆ. . . ಏನೋ ನಡೆದು ಹೋಯಿತು. . . . ನೀನು ಬರೀ ಬೆಳೆದೆ ವಿನಃ ಜವಾಬ್ದಾರಿ ನಿನ್ನ ತಲೆಗೆ ಹತ್ತಲಿಲ್ಲ. ನೀನು ಜವಾಬ್ದಾರಿ ಅರಿತುಕೊಂಡು; ನಿನ್ನ ಕಾಲ ಮೇಲೆ ನೀನು ನಿಂತಾಗ ಈ 'ವಾಚ'ನ್ನು ಕಟ್ಟಿಕೋ" ಎಂದು ಹೇಳಿ ಅಶೋಕರಿಗೆ ತಮ್ಮ ವಾಚನ್ನು ಕೊಡುತ್ತಾರೆ. ಈ ಸಂದರ್ಭದಲ್ಲಿ 'ವಾಚಿ'ನ ಪ್ರಸಂಗ ಗಮನಿಸಿದಾಗ ಮುಂದೆ ಅಶೋಕ ಅವರು 'Watch' ಈ ಪದದ ಪ್ರತಿ ಅಕ್ಷರಕ್ಕೆ ಅನ್ವಯವಾಗುವ ಹಾಗೆ 'Watch' their words ಅಂದರೆ ರಂಗಭೂಮಿಯಲ್ಲಿಯ ನಾಟಕದ ಪಾತ್ರಧಾರಿಯ ತಪ್ಪಿಲ್ಲದ ಅಸ್ಖಲಿತ ಶಬ್ದಗಳ ಉಚ್ಚಾರಣೆಯ ಪ್ರಭಾವ ನಂತರದ ಅಕ್ಷರದಂತೆ watch their action, ಈ ಪಾತ್ರಧಾರಿಯ ಪರಕಾಯ ಪ್ರವೇಶದ ನಟನೆಯ ಅದ್ಭುತವಂತಿಕೆ ನಂತರದ ಅಕ್ಷರದ watch their talent, ಅರ್ಥದಂತೆ ಆ ನಟನಾ ಪಾತ್ರಧಾರಿಯ ವಿಶಿಷ್ಟ ಪ್ರತಿಭೆ ಮತ್ತು ಸಾಮರ್ಥ್ಯ. ತದನಂತರದ ಅಕ್ಷರ ಅರ್ಥೈಸುವಂತೆ watch their character, ಅಂದರೆ ಪಾತ್ರಧಾರಿಯಾಗಿ ಆ ನಟನ ಪಾತ್ರದಲ್ಲಿಯ ಗುಣವಿಶೇಷಗಳು, ಗುಣಶೀಲಗಳು ಆ ಪಾತ್ರದಲ್ಲಿ ವ್ಯಕ್ತವಾಗಬೇಕು ಎನ್ನುವಂತೆ; ಮುಂದುವರೆದು ಕೊನೆಯ ಅಕ್ಷರದಂತೆ watch their heart ಇದು ಹೇಳುವಂತೆ ಪಾತ್ರಧಾರಿಯು ಹೃದಯವಂತಿಕೆ ಮೆರೆದು ಪ್ರೇಕ್ಷಕರ ಹೃದಯಲ್ಲಿ ನೆಲೆನಿಂತು, ಅವರನ್ನು ಸಂಮ್ಮೋಹನಗೊಳಿಸಿ ಅವರ ವ್ಯಕ್ತಿತ್ವದಲ್ಲಿ ಮಾರ್ಪಾಡು ತರುವ ಹೃದಯವಂತಿಕೆ ಮೆರೆಯಬೇಕು ಎನ್ನುವ ಈ ಪಂಚ ಸೂತ್ರಗಳ ಅಧಿಪತ್ಯಸ್ಥಾನವಾದ ರಂಗಭೂಮಿಯ ನಿರ್ದೇಶಕ ಈ ರೀತಿಯ ನಾಟಕಗಳ ಮೂಲಕ ಸಮಾಜಮುಖಿಯಾಗಿ ಸಮಾಜವನ್ನು ಪರಿವರ್ತಿಸುವ ಮಹತ್ವದ ಕಾರ್ಯದಲ್ಲಿ ತೊಡಗಬೇಕು ಎನ್ನುವ ಅರ್ಥನೀಡುವಂತೆ ಇಂತಹ ಮಹತ್ತರವಾದ ಜವಾಬ್ದಾರಿಯನ್ನು ತನ್ನ ಮಗ ಮುಂದೆ ವಹಿಸಿಕೊಳ್ಳುತ್ತಾನೆ ಎಂದು ಅಶೋಕ ಅವರ ತಂದೆಗೆ ಆ ಸಂದರ್ಭದಲ್ಲಿ ಅನಿಸಿ ಮಗನಿಗೆ ತಮ್ಮ ವಾಚನ್ನೇ ಕೊಟ್ಟು ಮುಂದೆ ನೀನು ರಂಗಭೂಮಿಯನ್ನು ಆಳು ಎಂದು ಆ

ಸಂದರ್ಭದಲ್ಲಿ ಮೌನವಾಗಿ ಹರಿಸಿದರೇನೋ ಎಂದು ಈ ಚಿತ್ರಣವನ್ನು ಕೊಡುವಾಗ ನಮಗೆ ಅನಿಸದೇ ಇರದು. ಮುಂದೆ ಅವರೆಲ್ಲ ಹತ್ತು ಕಿಲೋಮೀಟರು ಕ್ರಮಿಸುವಷ್ಟರಲ್ಲಿ ಅಶೋಕ ಅವರ ತಂದೆ ರುದ್ರಗೌಡರು ದಾರಿಯಲ್ಲಿ ಕೊನೆಯುಸಿರೆಳೆಯುತ್ತಾರೆ.

ಅಶೋಕ ತಂದೆಯ ಸಾವಿನ ನೋವನ್ನು ಮರೆಯಲು ವಿವಿಧ ರೀತಿಯಲ್ಲಿ ಪ್ರಯತ್ನಿಸುತ್ತ ಸಾಧ್ಯವಾಗದೇ ಮತ್ತೆ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಮನಸ್ಸು ಮಾಡುತ್ತಾರೆ. ಹೊಸ ಅಲೆಯ ರಂಗಭೂಮಿ ಕುರಿತಂತೆ ಮೊದಲಬಾರಿಗೆ ೧೯೭೦ರಲ್ಲಿ ವಿಜಾಪುರಕ್ಕೆ ಗಿರೀಶ ಕಾರ್ನಾಡ್ ಮತ್ತು ಬಿ.ವ್ಹಿ. ಕಾರಂತ ಇಬ್ಬರೂ ಸೇರಿ ಬರುತ್ತಾರೆ. ಈ ಮೊದಲು ಆಸಕ್ತಿ ಮೂಡಿಸಿ ಅರ್ಥವಾಗದೇ ಹೋಗಿದ್ದ ಹಯವದನ ನಾಟಕದ ವಾಚನಕ್ಕಾಗಿ ಪ್ರೊ ಎಸ್.ಆರ್. ಭೀಡೆ ಅವರ ಮನೆಯಲ್ಲಿ ರಂಗಾಸಕ್ತರು ಸೇರಿರುತ್ತಾರೆ. ತಲೆ ಬುಡ ಅರ್ಥವಾಗದೇ ಚರ್ಚೆ ಸಾಗುತ್ತದೆ. ಅದನ್ನೆಲ್ಲಾ ಅರ್ಥೈಸಿಕೊಳ್ಳುವ ಪ್ರಯತ್ನದಲ್ಲಿ ಅಶೋಕ ಮಿತ್ರಮಂಡಳಿ ತೊಡಗಿರುತ್ತದೆ. ಅಷ್ಟರಲ್ಲಿ ಬಾಗಲಕೋಟೆಯಲ್ಲಿ ಕೆರೂರ ವಾಸುದೇವಾಚಾರ್ಯರ ವಾಸುದೇವ ವಿನೋದಿನಿ ನಾಟ್ಯ ಸಭಾ. . . ವಿಜಾಪುರಕ್ಕಿಂತ ಒಂದು ಹೆಜ್ಜೆ ಮುಂದಿದ್ದು. . . ಇಂಥ ನಾಟಕಗಳ ರಂಗಭೂಮಿಗೆ ಅಲ್ಲಿ ಭೂಮಿ ಹದವಾಗಿರುತ್ತದೆ. ಮುಂದೆ ಪ್ರೊ ಮಂಗಲಗಿ ಅವರ ಮನೆಯಲ್ಲಿ ಹಯವದನದ ನಂತರ 'ಸತ್ತವರ ನೆರಳು' ನಾಟಕದ ವಾಚನ ನಡೆದು ವಿಜಾಪುರದ ರಂಗಭೂಮಿ ಆಸಕ್ತರಲ್ಲಿ ಹೊಸ ಅಲೆ ನಾಟಕದ ಬಗ್ಗೆ ಸ್ಪಷ್ಟ ಅರಿವು ಮೂಡುತ್ತದೆ. ಜೊತೆ ಜೊತೆಗೆ– ತಾವರಗೇರಿ ಅವರ ಆಸಕ್ತಿ. . . . ಪ್ರಯತ್ನ. . . . ಸಂಘಟನೆಗಳ ಫಲವಾಗಿ ಕಾರಂತರ ಸತ್ತವರ ನೆರಳು, ರಂಗ ಸಂಪದದಿಂದ ಶ್ರೀ ರಂಗರ ಸಮಗ್ರ ಮಂಥನ, (ಶ್ರೀರಂಗರು ಆಗ ನಾಟಕ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕದಲ್ಲಿ ಹೆಚ್ಚು ರಂಗಭೂಮಿಯ ಕುರಿತಂತೆ ಪ್ರಭುತ್ವ ಪೂರ್ಣವಾಗಿ ಮಾತನಾಡುವ ವ್ಯಕ್ತಿತ್ವ ಹೊಂದಿದ್ದವರು. ಇವರು ವಿಜಾಪುರದವರು ಎನ್ನವದು ಗಮನಾರ್ಹ. ಹವ್ಯಾಸಿ ರಂಗಭೂಮಿ ಮತ್ತು ಹೊಸ ಅಲೆಯ ನಾಟಕಗಳ ರಚನೆಯಲ್ಲಿ ಶ್ರೀರಂಗರ ಹೆಸರು ಸ್ಥಿರವಾದದ್ದು) ಕಲಬುರ್ಗಿಯ ರಂಗ ಮಾಧ್ಯಮದ 'ಹಕ್ಕಿ ಹಾರುತಿದೆ ನೋಡಿದಿರಾ' ಮುಂತಾದ ನಾಟಕಗಳು ವಿಜಾಪುರದಲ್ಲಿ ಪ್ರದರ್ಶಿತವಾಗಿ ಜನರ ಗಮನಸೆಳೆದು ಹೊಸ ಅಲೆಯ ನಾಟಕಗಳ ಗುಂಗು ಹಿಡಿಸುವಲ್ಲಿ ಇವೆಲ್ಲ ಯಶಸ್ವಿಯಾಗಿದ್ದವು. ಅಶೋಕರಾದಿಯಾಗಿ ಒಂದು ಯುವ ಪಡೆ ತಾವರಗೇರಿ ಅವರ ನೇತೃತ್ವದಲ್ಲಿ ಇಂಥ ನಾಟಕಗಳಿಗಾಗಿ ಟೊಂಕಕಟ್ಟಿ ನಿಂತಿತ್ತು.

ಆಗ ಪ್ರೊ ಎಸ್. ಆರ್.ಭಿಡೆ ಅವರು ತಾವರಗೇರಿ ಮತ್ತು ಅವರ ಆಸಕ್ತ ತಂಡಕ್ಕೆ ವಿಜಾಪುರದಲ್ಲಿ ಇಂಥ ನಾಟಕಗಳ ಆಯೋಜನೆಗಾಗಿ ಹಾಗೂ ಸಂತ

ನಾಟಕಗಳ ಪ್ರದರ್ಶನಕ್ಕಾಗಿ ಒಂದು ಸಂಸ್ಥೆಯ ಪ್ರಾರಂಭದ ಅವಶ್ಯಕತೆಯನ್ನು ಪ್ರಸ್ತಾಪಿಸುತ್ತಾರೆ.

**ಮರಾಠಿ ವಿದ್ಯಾಲಯ ಮತ್ತು ಕಲಾಮಾಧ್ಯಮ**

ಮರಾಠಿ ವಿದ್ಯಾಲಯಲದಲ್ಲಿ ಉದ್ಯೋಗಿಯಾಗಿದ್ದ ಶ್ರೀ ಶೀನಿವಾಸ ತಾವರಗೆರಿಯವರು ಪ್ರೊ. ಭಿಡೆ ಅವರ ಸಲಹೆಯ ಮೇರೆಗೆ ಈಗಾಗಲೇ ತಮಗೆ ಭರವಸೆ, ವಿಶ್ವಾಸ ಮೂಡಿಸಿದ್ದ ಶ್ರೀ ಅಶೋಕ ಬಾದರದಿನ್ನಿ, ಸುಧೀಂದ್ರ ಜಹಗೀರದಾರ ಸುಧೀಂದ್ರ ಕಲ್ಲೋಳ, ಶ್ರೀ ಜಿ.ಎನ್. ದೇಶಪಾಂಡೆ ಅನೀಲ ದೇಸಾಯಿ ಮುಂತಾದ ಹೊಸ ಗೆಳೆಯರ ತಂಡದೊಂದಿಗೆ ೧೯೭೩ರಲ್ಲಿ ಕಲಾ ಮಾಧ್ಯಮ ಸ್ಥಾಪಿತವಾಯಿತು.

ಮರಾಠಿ ವಿದ್ಯಾಲಯದ ಆಡಳಿತ ಮಂಡಳಿ ಈ ನಾಟಕಗಳ ಪ್ರಭಾವ, ಹಾಗೂ ಮರಾಠಾ ರಂಗಭೂಮಿಯ ಪ್ರಾಮುಖ್ಯತೆಯನ್ನು ಅಂದಿನ ಸಂದರ್ಭದಲ್ಲಿ ಮನಗಂಡಿತ್ತು. ಇಂಥ ಚಟುವಟಿಕೆಗಳ ಮೂಲಕ ಜನರನ್ನು ಬೇಗ ತಲುಪುವುದು ಸುಲಭ ಎಂದುಕೊಂಡ ಈ ಶಿಕ್ಷಣ ಸಂಸ್ಥೆ ತಾವರಗೆರಿ ಅವರ ಬೇಡಿಕೆಗಳನ್ನು ಪೂರೈಸುತ್ತದೆ. ಮರಾಠಿ ವಿದ್ಯಾಲಯದಲ್ಲಿ ನಾಟಕಗಳ ಪ್ರದರ್ಶನಕ್ಕೆ ಯೋಗ್ಯವಾದ ರೀತಿಯಲ್ಲಿ ಬಯಲು ರಂಗಮಂದಿರವನ್ನು ಸಿದ್ಧಪಡಿಸಿಕೊಡುವದರೊಂದಿಗೆ ಕಲಾ ಮಾಧ್ಯಮದ ಚಟುವಟಿಕೆಗಳನ್ನು ಪ್ರೋತ್ಸಾಹಿಸಿತು.

ಕಲಾ ಮಾಧ್ಯಮದ ಮೊದಲ ನಾಟಕಗಳನ್ನು ನಿರ್ದೇಶಿಸುವ ಗುರುತರ ಜವಾಬ್ದಾರಿ ಅಶೋಕರ ಮೇಲೆ ಬದ್ದಿತ್ತು. ಚಂದ್ರಕಾಂತ ಕುಸನೂರರ 'ವಿದೂಷಕ' ಮತ್ತು 'ಮನೆ' ಎನ್ನುವ ಎರಡು ಅಸಂಗತ ನಾಟಕಗಳನ್ನು ಮೊದಲಿಗೆ ಪೂರ್ಣ ಪ್ರಮಾಣದಲ್ಲಿ ನಿರ್ದೇಶಿಸಿದರು. ಇವು ಪ್ರದರ್ಶನದಲ್ಲಿ ಸೈ ಎನಿಸಿಕೊಂಡು ವಿಜಾಪುರದ ಜನ ತುಂಬ ಮೆಚ್ಚಿಕೊಂಡರು. ರಂಗಾಸಕ್ತರ ಪ್ರಯತ್ನ ಕೈಗೂಡಿ ವಿಜಾಪುರದಲ್ಲಿ ಗಟ್ಟಿಯಾದ ಹವ್ಯಾಸಿ ರಂಗ ಹೆಜ್ಜೆಗಳು ಮೂಡಲು ಆರಂಭವಾದವು, ಅಶೋಕ ಒಬ್ಬ ಗಟ್ಟಿ ನಿರ್ದೇಶಕರಾಗಿ ತಮ್ಮ ಆರಂಭಿಕ ಪ್ರಯತ್ನಗಳಲ್ಲಿಯೇ ಯಶಸ್ವಿಯಾಗಿ ಹೊರ ಹೊಮ್ಮಿದರು.

ಮರಾಠಿ ವಿದ್ಯಾಲಯವು ಹವ್ಯಾಸಿಗಳಿಗೆ ಮೂಲತಾಣವಾಗಿ ಜಿಲ್ಲೆಯ, ರಾಜ್ಯದ, ಬಹಳಷ್ಟು ರಂಗತಂಡಗಳು ಇಲ್ಲಿ ನಾಟಕಗಳನ್ನು ಪ್ರದರ್ಶಿಸಿದವು, ಕಲಾ ಮಾಧ್ಯಮ– 'ಪ್ರೇಕ್ಷಕ ಸದಸ್ಯತ್ವ'ಎನ್ನುವ ಹೊಸ ಪ್ರಯೋಗವನ್ನು ಚಲಾವಣೆಯಲ್ಲಿ ತಂದಿತು. ವರ್ಷಕ್ಕೆ ಕನಿಷ್ಠ ನಾಲ್ಕು ನಾಟಕ ಪ್ರದರ್ಶನ ಕೊಡುವದು ಪ್ರತಿಯಾಗಿ ವರ್ಷಕ್ಕೆ ಸದಸ್ಯತ್ವದ ಹಣಪಡೆದು ಅವರಿಗೆ ನಾಟಕಗಳನ್ನು ಪ್ರದರ್ಶಿಸುವದು. ಆ ಮೂಲಕ

ನಾಟಕ ಪ್ರದರ್ಶನದ ಖರ್ಚು ವೆಚ್ಚಗಳಿಗೆ ಒಂದು ಸೂಕ್ತ ಉಪಾಯದ ಹಾದಿಯನ್ನು ಕಂಡುಕೊಂಡಿತು.

ಈ ಲೇಖಕ ಸ್ಥಾಪಿಸಿದ ಇಲಕಲ್ಲಿನ ಸ್ನೇಹರಂಗ ಸಂಸ್ಥೆ ಕೂಡಾ ಈ ಪ್ರೇರಣೆಯೊಂದಿಗೆ ಪ್ರೇಕ್ಷಕ ಸದಸ್ಯತ್ವದ ಮೂಲಕ ಯಶಸ್ವಿಯಾದದ್ದಲ್ಲದೇ ತನ್ನ ಪ್ರಮುಖ ನಾಟಕಗಳನ್ನು ಕೂಡಾ ವಿಜಾಪುರ ಮರಾಠಿ ವಿದ್ಯಾಲಯದ ರಂಗಮಂಚದಲ್ಲಿ ಪ್ರದರ್ಶಿಸಿ–ಕರ್ನಾಟಕದ ರಂಗ ತಂಡಗಳಲ್ಲಿ ಒಂದಾಗಿ ಮುಂದೆ ಶ್ರೀ ಅಶೋಕ ಅವರ ಹಲವು ನಾಟಕಗಳನ್ನು ಇಲಕಲ್ಲಿನ ಸ್ನೇಹರಂಗ ತಂಡಕ್ಕಾಗಿ ನಿರ್ದೇಶಿಸಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳವುದು ಹೆಚ್ಚು ಔಚಿತ್ಯ ಎನ್ನಬಹುದು.

ಈ ಮೂಲಕ ಅಶೋಕ ಬಾದರದಿನ್ನಿ ನಿರ್ದೇಶಕರಾಗಿ ಆರಂಭದ ಯಶಸ್ಸು ಪಡೆದುಕೊಳ್ಳುವದರೊಂದಿಗೆ ತಾವರಗೇರಿ ಅವರ ನಾಟಕ ನಿರ್ದೇಶನದ ಮೂಲಕ ಬೆಂಗಳೂರಿಗೂ– ಪರಿಚಿತರಾಗಿ–ಅಲ್ಲಿಯ ನಾಟಕ–ತಾಲೀಮು ಪ್ರಯೋಗಗಳಿಗೆ, ಪ್ರೇಕ್ಷಕರಾಗಿ. . . ನಂತರ ಸ್ವಯಂ ಕಾರ್ಯಾಚರಣೆಯಲ್ಲಿ ತೊಡಗಿ ಯಶಸ್ವಿಯಾದದ್ದು ಒಂದು ಇತಿಹಾಸ.

### ಸಂಗೀತದ ಸುರ ಸಿಂಗಾರ

ಆಗ ವಿಜಾಪುರದಲ್ಲಿ ಈ ಹೊಸ ಅಲೆಯ ನಾಟಕಗಳಂತೆ ಸಂಗೀತದ ಪ್ರಭಾವವು ಅದ್ಭುತವಾಗಿತ್ತು. ನಾಡಿನ ಖ್ಯಾತ ರಾಷ್ಟ್ರೀಯ, ಅಂತರಾಷ್ಟ್ರೀಯ ಸಂಗೀತಗಾರರೆಲ್ಲ ತಮ್ಮ ಸಂಗೀತ ಕಛೇರಿಯನ್ನು ಕೊಡಲು ವಿಜಾಪುರಕ್ಕೆ ಧಾವಿಸಿಬರುತ್ತಿದ್ದರು. ರಾಜಧಾನಿಗರೂ ನಾಟಕಗಳನ್ನು ಪ್ರದರ್ಶಿಸಲು ಹೇಗೆ ವಿಜಾಪುರಕ್ಕೆ ಧಾವಿಸಿಬರುತ್ತಿದ್ದರೋ ಹಾಗೆಯೆ ಸಂಗೀತ ದಿಗ್ಗಜರು ಇಲ್ಲಿ ಸಂಗೀತ ಕಛೇರಿಗಳನ್ನು ನಡೆಸಿಕೊಡುವುದು ಸಾಮಾನ್ಯವಾಗಿತ್ತು. ನಾಟಕಗಳಿಗಾಗಿ ಕಲಾ ಮಾಧ್ಯಮದ ಪ್ರೇಕ್ಷಕ ಸದಸ್ಯತ್ವದಂತೆ ಸಂಗೀತದ ರಸದೌತಣಕ್ಕಾಗಿ "ಸುರ ಸಿಂಗಾರ" ಎನ್ನುವ ಸಂಗೀತ ಆರಾಧಕರ ಸಂಸ್ಥೆ ವಿಜಾಪುರದಲ್ಲಿತ್ತು. ಇಲ್ಲಿಯೂ ಅದೇ ಪ್ರೇಕ್ಷಕ ಸದಸ್ಯತ್ವ, ರಂಗಭೂಮಿಯ ಬಹಳಷ್ಟು ಜನ, ಅದೇ ಆಸಕ್ತರೂ ಈ ಸಂಸ್ಥೆಯಲ್ಲಿಯೂ ಪ್ರಧಾನವಾಗಿದ್ದರು. ತಾವರಗೇರಿ ಮತ್ತು ಅವರ ಗೆಳೆಯರ ಜೊತೆಗೆ ಬಾದರದಿನ್ನಿ ಮತ್ತು ಅವರ ತಂಡವೂ ಇಲ್ಲೂ ಪ್ರಧಾನವಾಗಿತ್ತು. ಆಗ ಪ್ರಸಿದ್ಧ ಸಂಗೀತ ವಿದ್ವಾಂಸ ಶ್ರೀ ಅಲ್ಲಾರಖಾ ಹಾಗೂ ಶ್ರೇಷ್ಠ ಸಿತಾರ ವಾದಕ ರವಿಶಂಕರ ಅವರನ್ನು ಸುರ ಸಿಂಗಾರವು ವಿಜಾಪುರ್ರಕ್ಕೆ ಆಹ್ವಾನಿಸಿತ್ತು. ರಾಷ್ಟ್ರ ಪ್ರಸಿದ್ಧಿಯ ಈ ಸಂಗೀತಗಾರರನ್ನು ವಿಜಾಪೂರ ಜನತೆಗೆ ಪರಿಚಯಿಸಲು ಹಿಂದಿನ ಲೋಕಸಭಾ ಸದಸ್ಯ ಹಿಂದಿ ಚಿತ್ರರಂಗದ ಶಾಟ್ ಗನ್ನ ಎಂದೇ ತಮ್ಮ ವಿಶಿಷ್ಟ ಶೈಲಿ ಸಂಭಾಷಣೆ ಮತ್ತು ಗಂಡು ಧ್ವನಿಯ

ಮೂಲಕ ಹೆಸರುವಾಸಿಯಾಗಿದ್ದ ಈಗಿನ ಹಿಂದಿ ಚಿತ್ರರಂಗ ಖ್ಯಾತ ಅಭಿನೇತ್ರಿ ನಾಯಕಿ ಸೋನಾಕ್ಷಿ ಸಿನ್ಹಾ ಅವರ ತಂದೆ ಶತ್ರುಘ್ನ ಸಿನ್ಹಾ ಅವರು ವಿಜಾಪುರಕ್ಕೆ ಬಂದಿದ್ದು, ಅವರ ಆತಿಥ್ಯದ ಮತ್ತು ಆ ಸಂದರ್ಭದ ಸಂಯೋಜನೆಯ ಜವಾಬ್ದಾರಿ ಬಾದರದಿನ್ನಿಯವರ ಮೇಲೆ ಇದ್ದುದ್ದು ಈ ಕಾರಣ ಮುಂದಿನ ನಾಟಕಗಳಿಗೆ ವೈವಿಧ್ಯಪೂರ್ಣವಾದ ಸಂಗೀತದ ಸಂಯೋಜನೆಗೆ ಈ ಸುರ ಸಿಂಗಾರದ ಸಾಮಿಪ್ಯವೂ ಕಾರಣವಾಗಿತ್ತು ಎಂದು ಬಾದರದಿನ್ನಿ ನೆನಪಿಸಿಕೊಳ್ಳುತ್ತಾರೆ.

ಹೀಗೆ ಅಶೋಕ ಬಾದರದಿನ್ನಿ ಮತ್ತು ಅವರ ಸ್ನೇಹಿತರ ಉತ್ಸಾಹ, ಛಲ, ಕನಸುಗಳಲ್ಲಿ ಅಪರಿಮಿತ ಭರವಸೆ, ವಿಶ್ವಾಸ ಹೊಂದಿದ್ದ ತಾವರಗೇರಿ ಅವರು ಅಶೋಕರಿಗೆ ಬಿ.ಎಸ್ಸಿ ಮುಗಿಸಿ –ಖಾಲಿ ಏಕೆ ಕುಳಿತಿರುವೆ? ಈಗ ಹೆಚ್ಚು ಪ್ರಚಲಿತವಿರುವ ದೆಹಲಿಯ ರಂಗಭೂಮಿ ಡಿಪ್ಲೋಮ ಪದವಿ(NSD) ಯನ್ನು ನೀನು ಏಕೆ ಅಭ್ಯಸಿಸಬಾರದೆಂದು ಪ್ರೋತ್ಸಾಹಿಸುತ್ತಾರೆ.

ಆರ್ಥಿಕ ಪರಿಮಿತಿಯಿಂದಾಗಿ ಆಕ್ಷಣ ಹಿಂಜರಿಕೆ ಕಂಡರೂ ಕೊನೆಗೆ ಶ್ರೀ ಅಶೋಕ ಬಾದರದಿನ್ನಿ ದೆಹಲಿಗೆ ಹೋಗಲು ಸಜ್ಜಾಗುತ್ತಾರೆ. ೧೯೭೬ರಲ್ಲಿ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಪದವಿಗಾಗಿ ಶ್ರೀನಿವಾಸ ತಾವರಗೇರಿ ಮತ್ತು ವಿಜಾಪುರದ ರಂಗಭೂಮಿ ಗೆಳೆಯರ ಪ್ರೋತ್ಸಾಹದಿಂದ ದೆಹಲಿಗೆ ತೆರಳುತ್ತಾರೆ. ಆಗ ರಾಷ್ಟ್ರೀಯ ನಾಟಕ ಶಾಲೆಯ ನೇತೃತ್ವವನ್ನು ಅಂತರಾಷ್ಟ್ರೀಯ ಖ್ಯಾತಿಯ ಕನ್ನಡದ ರಂಗ ನಿರ್ದೇಶಕರಾದ ಶ್ರೀ ಬಿ.ವ್ಹಿ.ಕಾರಂತರು ವಹಿಸಿಕೊಂಡಿರುತ್ತಾರೆ. ರಾಷ್ಟ್ರದ ರಂಗಾಸಕ್ತ ಯುವಕರ ದಂಡೇ ಅಲ್ಲಿ ಇರುತ್ತದೆ. ಒಂದೊಂದು ರಾಜ್ಯದಿಂದ ಒಬ್ಬೊಬ್ಬರಂತೆ ಎಲ್ಲ ರಾಜ್ಯಗಳಿಂದ ದೆಹಲಿ ನಾಟಕ ಶಾಲೆಗೆ ವಿದ್ಯಾರ್ಥಿಗಳ ಪ್ರಾತಿನಿಧ್ಯವಿದ್ದರೂ ಕೆಲ ರಾಜ್ಯಗಳ ವಿದ್ಯಾರ್ಥಿಗಳ ಕೊರತೆಯಿಂದ ಆಗ ಅಲ್ಲಿ ಒಟ್ಟು ಹದನೈದು ಜನ ವಿದ್ಯಾರ್ಥಿಗಳಿದ್ದರು. ಕರ್ನಾಟಕದಿಂದ ಹಿಂದಿನ ಒಂದೆರಡು ಅವಧಿಯಲ್ಲಿ ಯಾವ ವಿದ್ಯಾರ್ಥಿಗಳೂ ಹೋಗದಿರುವದರಿಂದ ಆ ವರ್ಷ ೧೯೭೬ರಲ್ಲಿ ಕರ್ನಾಟಕದಿಂದ ಅಶೋಕ ಬಾದರದಿನ್ನಿ ಸೇರಿ ಒಟ್ಟು ನಾಲ್ಕು ಜನ ವಿದ್ಯಾರ್ಥಿಗಳು ದೆಹಲಿಯ ನಾಟಕ ಶಾಲೆಯ ತರಬೇತಿಗಾಗಿ ತೆರಳಿದ್ದರು. ಅಲ್ಲಿ ಕಾರಂತರ ನೇತೃತ್ವ ಬೇರೆ ಕೇಳಲಾದಿತೇ!?

## ಡಿಪ್ಲೋಮ (NSD) ಪದವಿ

ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಸಾಂಸ್ಕೃತಿಕ ಆಸಕ್ತಿಯ ಫಲವಾಗಿ ೧೯೫೯ರಲ್ಲಿ ರಂಗಭೂಮಿ ತರಬೇತಿಗಾಗಿ ರಾಷ್ಟ್ರೀಯ ನಾಟಕ ಶಾಲೆಯು ದೆಹಲಿಯಲ್ಲಿ ಆರಂಭವಾಗಿತ್ತು. ದುಬೈಯಲ್ಲಿದ್ದ ಅಂತರಾಷ್ಟ್ರೀಯ ಖ್ಯಾತಿಯ

ರಂಗನಿರ್ದೇಶಕ ಇಬ್ರಾಹಿಂಅಲ್‌ಕಾಜಿ ಅವರನ್ನು ಸ್ನೇಹದ ಒತ್ತಡದಿಂದ ನೆಹರು ಅವರು ಕರೆತಂದು ಈ ಶಾಲೆಯ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಟ್ಟಿದ್ದರು. ಮೂರು ವರ್ಷಗಳ ನಾಟಕದ ಡಿಪ್ಲೋಮ ಪದವಿ ಅದು. ೧೯೬೧ಕ್ಕೆ ಬಿ.ವ್ಹಿ. ಕಾರಂತರೂ ಈ ಸಂಸ್ಥೆಯನ್ನು ಸೇರಿ ೧೯೭೭ರಲ್ಲಿ ಅದರ ನೇತೃತ್ವವನ್ನು ಹೊತ್ತುಕೊಂಡು ಸಮರ್ಥವಾಗಿ ಮುನ್ನಡೆಸಿಕೊಂಡು ಹೊರಟಿದ್ದರು.

ಅಶೋಕ ಬಾದರದಿನ್ನಿಯವರೊಂದಿಗೆ ಬೆಂಗಳೂರಿನ ಶ್ರೀ ಶ್ರೀನಿವಾಸ ಪ್ರಭು, ಶ್ರೀ ಸುರೇಂದ್ರನಾಥ, ಶ್ರೀಮತಿ ಕೆ.ಎನ್. ಭಾರತಿ ಹೀಗೆ ನಾಲ್ಕು ಜನ ಕರ್ನಾಟಕದಿಂದ ತರಬೇತಿ ಪಡೆಯುತ್ತಿದ್ದರು. ಆರಂಭದಲ್ಲಿ ಶ್ರೀ ಶ್ರೀರಾಮ ಲಾಗು ನಟಿಸಿದ 'ಹಿಮಾಲಯಚಾ ಸಾವಳಿ', ಮತ್ತು 'ನೀಲೂಫೂಳೆ ಅವರ ನಾಟಕ, ವಿಜಯ ತೆಂಡೂಲ್ಕರ ಅವರ 'ಘಾಸಿರಾಮ ಕೋತ್ವಾಲ' ನಾಟಕಗಳ ನಿರ್ಮಾಣ, ನೇಪಥ್ಯ ಮುಂತಾದವುಗಳ ಅನುಭವ ಮೊದಲ ವರ್ಷ ಇವರಿಗೆಲ್ಲ ದಕ್ಕಿತ್ತು. ತರಬೇತಿಗೆ ಸೇರಿದ ಪ್ರತಿ ವಿದ್ಯಾರ್ಥಿ ಪ್ರತಿ ವರ್ಷ ದೆಹಲಿಯಲ್ಲಾಗಲಿ, ದೆಹಲಿಯ ಶಾಲೆಯಲ್ಲಾಗಲಿ, ಇಲ್ಲವೇ ತಾವು ಬಂದ ಪ್ರದೇಶದಿಂದಾಗಲಿ ಒಂದು ನಾಟಕವನ್ನು ಸಿದ್ಧಗೊಳಿಸಿ, ಸಾದರಪಡಿಸಿ ಆ ವರದಿಯನ್ನು ಎನ್.ಎಸ್.ಡಿ.ಗೆ ಕೊಡಬೇಕಿತ್ತು.

ಆ ಮೇರೆಗೆ ೧೯೭೭ರಲ್ಲಿ ಮಧ್ಯಂತರ ರಜೆಗಾಗಿ ವಿಜಾಪುರಕ್ಕೆ ಬಂದಾಗ ಈ ನಾಟಕದ ಯೋಜನೆಯ ಹಿನ್ನೆಲೆಯಲ್ಲಿ ಕಲಾ ಮಾಧ್ಯಮ ಸಂಸ್ಥೆಗೆ ಚಂದ್ರಶೇಖರ ಪಾಟೀಲರ 'ಅಪ್ಪ' ಮತ್ತು 'ಟಿಂಗರ ಬುಡಣ್ಣ' ಹೀಗೆ ಎರಡು ನಾಟಕಗಳನ್ನು ವಿಜಾಪುರದ ಖ್ಯಾತ ದರ್ಬಾರ ಹೈಸ್ಕೂಲಿನ ವಿದ್ಯಾರ್ಥಿಗಳನ್ನು ಕಲಾವಿದರನ್ನಾಗಿ ಬಳಸಿಕೊಂಡು ಈ ಎರಡು ನಾಟಕಗಳನ್ನು ಪ್ರಯೋಗಿಸುತ್ತಾರೆ.

ಕೇವಲ ಮೂರು ಪಾತ್ರಗಳ 'ಅಪ್ಪ'ನಾಟಕದಲ್ಲಿ ಮೂವತ್ತು ಕಲಾವಿದರನ್ನು ತೊಡಗಿಸಿ ಪ್ರೇಕ್ಷಕರು ಮಂತ್ರ ಮುಗ್ಧರಾಗುವಂತೆ ನಾಟಕವನ್ನು ಸಿದ್ಧಪಡಿಸಿದ್ದರು ಬಾದರದಿನ್ನಿ. ಲೇಖಕರಾದ ಪಾಟೀಲರೇ ಸ್ವತಃ ಮೂವತ್ತು ಕಲಾವಿದರೊಂದಿಗೆ ಈ ನಾಟಕವನ್ನು ಹೀಗೂ ಪರಿಣಾಮಕಾರಿಯಾಗಿ ಮಾಡಬಹುದೇ? ಎಂದು ಅಚ್ಚರಿಪಟ್ಟರಂತೆ.

ನಾಟಕಗಳು ಅದ್ಭುತ ಯಶಸ್ಸು ಹಾಗೂ ಹೊಸ ತಂತ್ರಗಾರಿಕೆಯೊಂದಿಗೆ ಗಮನ ಸೆಳೆದು ಆಗಲೇ ಕರ್ನಾಟಕದ ಹಲವಾರು ಸ್ಥಳಗಳಲ್ಲಿ ಮುರು ಪ್ರದರ್ಶನಗೊಂಡಿದ್ದವು. ಜೊತೆಗೆ 'ಟಿಂಗರ ಬುಡಣ್ಣ' ತನ್ನ ವಿಶಿಷ್ಟತೆಯಿಂದಾಗಿ ಯಶಸ್ಸು ಪಡೆದು ಕಲಾಮಾಧ್ಯಮದ ಮೂಲಕ ಈ ಜೋಡಿ ನಾಟಕಗಳು ಎಲ್ಲೆಡೆ ಪ್ರದರ್ಶಿತವಾಗಿ ಅಶೋಕ ಅವರಿಗೆ ಆರಂಭದ ರಂಗ ಹೆಜ್ಜೆಗಳನ್ನು ಗಟ್ಟಿಗೊಳಿಸಿದ್ದವು.

ಒಂದೆಡೆ ಹೀಗೆ ರಂಗಭೂಮಿಯಲ್ಲಿ ಭವಿಷ್ಯ ಅರಸತೊಡಗಿದ ಅಶೋಕ ಅವರಿಗೆ ಆರಂಭದ ದಿನಗಳಲ್ಲಿ ಚಲನಚಿತ್ರ ರಂಗದ ಆರಂಗ್ರೇಟಮ್ ಕೂಡಾ ನಡೆಯಿತು. ಆ ದಿನಗಳಲ್ಲಿ ಪ್ರಶಸ್ತಿ ವಿಜೇತ ಕನ್ನಡ ಚಲನಚಿತ್ರ ರಂಗದ ನಿರ್ಮಾಪಕ, ನಿರ್ದೇಶಕ ಎಂದು ಹೆಸರು ಮಾಡಿದ್ದ ಶ್ರೀ ಟಿ.ಎಸ್. ರಂಗಾ ಅವರಿಗೆ ವಿಜಾಪುರದ ನಂಟು. ಶ್ರೀನಿವಾಸ ತಾವರಗೇರಿ ಮತ್ತು ಅವರ ಸ್ನೇಹಿತರ ಗೆಳೆತನವು ಅವರೆಲ್ಲರ ನಡುವೆ ಫೆವಿಕಾಲ್ ಗಂಮ ತರಹ ಇತ್ತು. ಅಂದು ಹೆಚ್.ಜಿ. ಸೋಮಶೇಖರ ಅವರೊಂದಿಗೆ ಈ ಗೆಳೆಯರೆಲ್ಲಾ ಸೇರಿ ಖಾನಾಪೂರ ಅರಣ್ಯದಲ್ಲಿ ದಿ. ಕೃಷ್ಣ ಆಲನಹಳ್ಳಿ ಅವರ 'ಗೀಜಗನ ಗೂಡು' ಪ್ರಯೋಗಾತ್ಮಕ ಚಿತ್ರದಲ್ಲಿ ತೊಡಗಿಸಿಕೊಂಡಿದ್ದರು. ಹೀಗೆ ಅಶೋಕ ಅವರಿಗೆ ಹಿರಿತೆರೆಯ ಅ,ಆ,ಇ,ಈ, ಕಲಿಕೆ ಕೂಡಾ ಈ ಸಂದರ್ಭದಲ್ಲಿ ಮೈಗೂಡುತ್ತದೆ. ಜೊತೆಗೆ ಚಿತ್ರವೂ ಯಶಸ್ವಿಯಾಗಿ ಪ್ರಶಸ್ತಿಯೂ ದೊರೆಯುತ್ತದೆ. ಎನ್.ಎಸ್.ಡಿ ಜೊತೆ ಜೊತೆಗೆ ಚಲನಚಿತ್ರ ರಂಗದಲ್ಲೂ ತೊಡಗಿಸಿಕೊಳ್ಳುವತ್ತ ಇವರ ಪ್ರಯತ್ನ ಸಾಗಿರುತ್ತದೆ.

ಕಾರಂತರ ಶಿಸ್ತಿನ ಗರಡಿಯಲ್ಲಿ ಪಳಗತೊಡಗಿದ್ದ ಇವರಿಗೆ ಎರಡನೇ ವರ್ಷ ಹೆಸರಾಂತ ರಂಗ ನಿರ್ದೇಶಕ ಫ್ರೀಡ್ಜ್ ಬೆನ್‌ವ್ಹಿಡ್ಜ್ ಅವರೊಂದಿಗೆ ಕೆಲಸ ಮಾಡುವ ಯೋಗಾಯೋಗ ದೊರಕುತ್ತದೆ. ಎನ್.ಎಸ್.ಡಿ ವಿದ್ಯಾರ್ಥಿಗಳಿಗಾಗಿ ನಾಟಕ ಒಂದರ ನಿರ್ದೇಶಕ್ಕಾಗಿ ಬಂದ ಇವರಿಗೆ ಬಾದರದಿನ್ನಿ ಸಹಾಯಕರಾಗಿರುತ್ತಾರೆ. ಹೀಗಾಗಿ ಅಶೋಕ ಅವರಿಗೆ ಜರ್ಮನ್ ರಂಗ ವಿಶೇಷಗಳನ್ನು ಅರಿಯಲು ಹೆಚ್ಚು ಹೆಚ್ಚು ಸಹಾಯಕವಾಗುತ್ತದೆ. ಜರ್ಮನಿಯಲ್ಲಿ ಒಂದು ನಾಟಕದ ಸಿದ್ಧತೆಯೇ ವರ್ಷ, ಎರಡು ವರ್ಷ ಮೊದಲೇ ಆರಂಭವಾಗಿ ಪೂರ್ವ ತಯ್ಯಾರಿ ವ್ಯವಸ್ಥಿತವಾಗಿರುತ್ತದೆ. ನಾಟಕ ಕೃತಿಯೊಂದರ ಆಯ್ಕೆಯಿಂದ ಹಿಡಿದು ರಂಗ ವಿನ್ಯಾಸ, ವಸ್ತ್ರವಿನ್ಯಾಸ, ನೇಪಥ್ಯ ಕಾರ್ಯಗಳೆಲ್ಲ ಹೇಗಿರಬೇಕೆಂದು ಮುಖ್ಯ ನಿರ್ದೇಶಕರ ಸಹಾಯಕರು ವರ್ಷ ಮುಂಗಡವೇ ಸಿದ್ಧತೆ ಮಾಡಿಕೊಳ್ಳುತ್ತಾರಂತೆ. ಮತ್ತು ಮುಖ್ಯ ನಿರ್ದೇಶಕರು ಬೇರೆ ಬೇರೆ ದೇಶಗಳಲ್ಲಿ ಇದ್ದರೇ ಅಲ್ಲಿಗೆ ಈ ಸಹಾಯಕರೂ ಪ್ರಯಾಣ ಬೆಳೆಸಿ ಮುಖ್ಯ ನಿರ್ದೇಶಕರಿಗೆ ನಾಟಕದ ವಿನ್ಯಾಸಗಳನ್ನು ತೋರಿಸಿ ಚರ್ಚಿಸಿ ಅಂತಿಮಗೊಳಿಸುವುದನ್ನು ಕಾಣಬಹುದಂತೆ. ಹೀಗೆ ಬೆನ್‌ವ್ಹಿಡ್ಜ್ ಅವರೊಂದಿಗೆ ಅಶೋಕ ಅವರು ಇಲ್ಲಿ ಸಹಾಯಕರಾಗಿದ್ದಾಗ ಜರ್ಮನಿಯಿಂದ ಬರುತ್ತಿದ್ದ ಈ ನಿರ್ದೇಶಕರ ಸಹಾಯಕರು ಬೆನ್‌ವ್ಹಿಡ್ಜ್‌ರೊಂದಿಗೆ ಮಾಡುತ್ತಿದ್ದ ವಿವಿಧ ಬಗೆಬಗೆಯ ಚರ್ಚೆಗಳನ್ನು ಕಾಣುತ್ತಿದ್ದೆ. ಅದು ನನಗೆ ಎಷ್ಟೋ ಕಲಿಯಲು ವಿಶೇಷವಾಯಿತು ಎಂದೆನ್ನುತ್ತಾರೆ ಬಾದರದಿನ್ನಿ.

ಎರಡನೇಯ ವರ್ಷವೂ ಯಥಾ ಪ್ರಕಾರ ಎನ್.ಎಸ್.ಡಿಯ ವಿದ್ಯಾರ್ಥಿಗಳ

ನಾಟಕಗಳ ಯೋಜನೆಯ ವರದಿಗಾಗಿ ಮತ್ತೆ ವಿಜಾಪುರದ ಕಲಾ ಮಾಧ್ಯಮಕ್ಕೆ ಅದೇ ಚಂದ್ರಶೇಖರ ಪಾಟೀಲರ 'ಗೋಕರ್ಣದ ಗೌಡಶ್ಯಾನಿ'ನಾಟಕವನ್ನು ನಿರ್ದೇಶಿಸುತ್ತಾರೆ. ಈ ನಾಟಕವೂ ಕೂಡಾ ಅಲ್ಲಿ ಅಳವಡಿಸಿದ ರಂಗ ತಂತ್ರ, ನಟನೆ, ವಿಶೇಷತೆಗಳ ಜೊತೆಗೆ ಲೇಖಕ ಚಂಪಾ ಅವರ ವ್ಯಂಗ ಪೂರ್ಣಲವಲವಿಕೆಯ ಹರಿತ ಸಂಭಾಷಣೆಗಳಿಂದ ನಾಟಕವು ವಿಜಾಪುರದ ಪ್ರೇಕ್ಷಕರಿಗೆ ಹುಚ್ಚು ಹಿಡಿಸುತ್ತದೆ.

ದೆಹಲಿಯ ಕಲಿಕೆಯಲ್ಲಿ ನಾವು ಮಾಡಿದ ಕಿತಾಪತಿಗಳಿಂದಾಗಿ, ರವಿವಾರದ ವೀಕ್ ಎಂಡ್‌ಗಳಿಂದ, ಕುಡಿತಗಳಿಂದಾಗಿ, ಕಾರಂತರಿಂದ ಶಿಕ್ಷೆ, ಬೈಗಳೂ, ಒದೆತಗಳು ನಮ್ಮನ್ನು ಪರಿಪೂರ್ಣರನ್ನಾಗಿಸಲೂ ಕಾರಣವಾದವು ಎನ್ನುತ್ತಾರೆ. ೧೯೭೭-೮೦ರ ಅವಧಿಯಲ್ಲಿ ರೂಪಾಯಿ ೩೦೦ ವಿದ್ಯಾರ್ಥಿ ವೇತನದಲ್ಲಿ ದೆಹಲಿ ಅಂತಹ ರಾಜಧಾನಿಯಲ್ಲಿ, ನಾಟಕ ಕಲಿತದ್ದು ಒಂದು ರೋಚಕ ಅನುಭವ. ಅವತ್ತು ಅಲ್ಲಿ ಕಾರಂತರು ಇರದೇ ಇದ್ದರೆ.ಇಲ್ಲಿ ತಾವರಗೇರಿ ಮತ್ತು ಇತರ ಗೆಳೆಯರ ಸಹಾಯವಿಲ್ಲದೇ ಹೋಗಿದ್ದರೆ ಎನ್.ಎಸ್.ಡಿ ನನಗೆ ಗಗನ ಕುಸುಮವಾಗುತ್ತಿತ್ತು. ನಮ್ಮ ಎಲ್ಲಾ ತಂಟೆ ತರಲೆಗಳನ್ನು ಸಹಿಸಿಕೊಂಡು ನಮ್ಮ ಹತ್ತಿರ ಹಣವಿಲ್ಲದಿದ್ದಾಗ ಹಣಕ್ಕಾಗಿ ಅವರನ್ನು ಕಾಡುತ್ತಲಿದ್ದರೂ- ಅದಕ್ಕಾಗಿ ದೆಹಲಿಯಲ್ಲಿ ಅವರಿರುವ ಮನೆಗೆ ಹೋದರೆ.- ಪ್ರೀತಿಯಿಂದ ಕರೆದು ಊಣಬಡಿಸಿ, ಅದೇ ಪ್ರೀತಿಯಿಂದ ಬೈದು ಬುದ್ಧಿ ಹೇಳಿ ಹಣವನ್ನು ಕೊಟ್ಟು ಕಳುಹಿಸುತ್ತಿದ್ದ ದಿ.ಬಿ.ವ್ಹಿ..ಕಾರಂತರ ಮಾನವೀಯ ಮುಖವನ್ನು ಕಂಡು ನಾವೆಲ್ಲರೂ ಮೂಕರಾಗುತ್ತಿದ್ದೆವು ಎಂದು ಆ ಸನ್ನಿವೇಶವನ್ನು ಅಶೋಕ ನೆನಪಿಸಿಕೊಂಡು ಆರ್ದ್ರರಾಗುತ್ತಾರೆ. ಅಂತಹ ಧೀಮಂತ ಕಾರಂತರಿದ್ದದ್ದಕ್ಕೆ ನಮ್ಮಂತಹ ಗುಂಡು ಗೋವಿ ಶಿಷ್ಯರು ಒಂದು ನೆಲೆ ಕಾಣಲು ಸಾಧ್ಯವಾಯಿತು ಎಂದು ಅರಹುತ್ತಾರೆ.

೧೯೮೦ರಲ್ಲಿ ಯಶಸ್ವಿಯಾಗಿ ಎನ್.ಎಸ್.ಡಿ. ಪದವಿ ಪಡೆದು ನಾವು ನಮ್ಮ ಭವಿತವ್ಯವನ್ನು ಅರಸುತ್ತ ನಮ್ಮ ಮೂಲ ನೆಲೆಗೆ ಅಂದರೆ ರಾಜಧಾನಿ ಬೆಂಗಳೂರಿಗೆ ಬಂದೆವು. ಅತ್ತ ಕಾರಂತರೂ ನಮ್ಮದೇ ಬ್ಯಾಚ್‌ನ ಕೊನೆಯೊಂದಿಗೆ ಎನ್.ಎಸ್.ಡಿ ಯನ್ನು ತೊರೆದು ಭೂಪಾಲದ ರಂಗ ಮಂಡಲದ ರೇಪರ್ಟರಿಯ ನೇತೃತ್ವನ್ನು ವಹಿಸಿಕೊಳ್ಳಲು ತೆರಳುತ್ತಾರೆ ಎಂದರು ಅಶೋಕ ಬಾದರದಿನ್ನಿಯವರು.

**ರಾಜಧಾನಿಯಲ್ಲಿ ಭವಿಷ್ಯವನ್ನು ಅರಸುತ್ತಾ. . . . .**

ಹೀಗೆ ೧೯೮೦ರಲ್ಲಿ ನಾಟಕ ತರಬೇತಿಯಲ್ಲಿ ನಾಟಕದಲ್ಲಿ ಪದವಿಯನ್ನು ಪಡೆದು ಬೆಂಗಳೂರಿಗೆ ಹಿಂತಿರುಗಿದಾಗ ಅವರನ್ನು ಈ ತರಬೇತಿಗಾಗಿ ಕಳುಹಿಸಿ ಮೂರು ವರ್ಷಗಳ ಕಾಲವು ಪ್ರೋತ್ಸಾಹಿಸಿದ ಗುರು ದಿ. ಶ್ರೀನಿವಾಸ ತಾವರಗೇರಿ ಅವರು ದೆಹಲಿಯಿಂದ ಹಿಂತಿರುಗುತ್ತಿದ್ದ, ಕನಸುಗಳಿಂದ ತುಂಬಿದ್ದ ಶಿಷ್ಯನನ್ನು

ಮನದುಂಬಿ ಸ್ವಾಗತಿಸಲು ಹೂ ಹಾರ ಹಿಡಿದುಕೊಂಡು ಗೆಳೆಯರೊಂದಿಗೆ ವಿಮಾನ ನಿಲ್ದಾಣಕ್ಕೆ ತೆರಳಿ ಹೃದಯತುಂಬಿ ಬರಮಾಡಿಕೊಳ್ಳುತ್ತಾರೆ. ಅದರಲ್ಲೂ, ಅಶೋಕರಲ್ಲೂ, ಅವರ ಗೆಳೆಯರೆಲ್ಲರಲ್ಲೂ ಅದೇನೋ ಯುದ್ಧ ಗೆದ್ದ ಭಾವ. – ಮುಖದಲ್ಲಿ ಸಂತಸ ನೂರ್ಮಡಿಯಾಗಿ.– ಅಪರಿಮಿತವಾದುದನ್ನು ಸಾಧಿಸಿದ ದೃಢತೆ ಎದ್ದು ಕಾಣುತ್ತಿತ್ತು. ಇನ್ನು ಕನಸುಗಳ ಚಿತ್ತಾರದ ರಂಗವಲ್ಲಿಯನ್ನು ಬಿಡಿಸುವದಷ್ಟೇ ಬಾಕಿ ಇತ್ತು. ಆಗ ಶ್ರೀನಿವಾಸ ತಾವರಗೇರಿ ಅವರು " ನಿನ್ನಿಂದ ರಂಗಭೂಮಿಯಲ್ಲಿ ಆಗುವುದು ಬಹಳವಿದೆ" ಎಂದು ಶಿಷ್ಯನ್ನು ಮೈದಡವಿ ಆಲಂಗಿಸಿಕೊಂಡು ಹರಸುತ್ತಾರೆ.

ನಾಲ್ಕಾರು ದಿನಗಳ ಕಾಲ ದೆಹಲಿಯಿಂದ ಹಿಂತಿರುಗಿದ ಅಶೋಕ ಬಾದರದಿನ್ನಿ ಹಾಗೂ ತಾವರಗೇರಿ ಅವರು ರಂಗಭೂಮಿಯ ಕೇಂದ್ರಬಿಂದು ಎನಿಸಿಕೊಂಡಿದ್ದ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ಹಾಗೂ ಅಲ್ಲಿಯ ತಾಲೀಮು ಕೊಠಡಿಗಳು, ಚಹಾ ಕೂಟಗಳಲ್ಲಿ, ನಾಟಕಾಸಕ್ತರಲ್ಲಿ ವಿವಿಧ ನಾಟಕಗಳ ಕುರಿತಂತೆ ಚರ್ಚೆ ವಿಚಾರಗಳು ವೈವಿಧ್ಯ ಪೂರ್ಣವಾಗಿ ಹೊರ ಹೊಮ್ಮುತ್ತಿರುವಾಗ ಆಗಲೇ ಪ್ರಸಿದ್ಧಿ ಪಡೆದ ಸಮುದಾಯ ನಾಟಕ ತಂಡದಿಂದ ರಾಮಚಂದ್ರ ದೇವ ಅವರು ಕನ್ನಡಿಸಿದ ವಿಲಿಯಮ್ ಶೇಕ್ಸಪಿಯರ್‌ರ 'ಮ್ಯಾಕ್‌ಬೆಥ್' ನಾಟಕವು ಪ್ರಸನ್ನ ಅವರ ನಿರ್ದೇಶನದಲ್ಲಿ ಕಲಾ ಕ್ಷೇತ್ರದಲ್ಲಿ ಪ್ರರ್ದಶನಗೊಳ್ಳುವುದನ್ನು ತಿಳಿದು ಅಲ್ಲಿ ರಂಗಾಸಕ್ತರು ತುಂಬಿಕೊಂಡಿದ್ದರು. ಅದಕ್ಕೆ ಇವರೂ ಹೊರತಾಗಿರಲಿಲ್ಲ. ವಿಜಾಪುರಕ್ಕೆ ಹೋಗುವದನ್ನು ಬಿಟ್ಟು ಗುರು ಶಿಷ್ಯ ಮತ್ತು ಗೆಳೆಯರು ಈ ನಾಟಕ ನೋಡಲು ನಿಂತುಕೊಂಡಿದ್ದರು.

ಈ ನಾಟಕದಲ್ಲಿ ಹೆಸರಾಂತ ನಟ ಜಿ.ಕೆ. ಗೋವಿದರಾವ್ ಅವರು ಮ್ಯಾಕ್‌ಬೆಥ್ ಪಾತ್ರದಲ್ಲೂ ಹಾಗೂ ಶ್ರೀಮತಿ ಪ್ರೇಮಾ ಕಾರಂತ ಅವರು ಲೇಡಿ ಮ್ಯಾಕ್‌ಬೆಥ್ ಪಾತ್ರದಲ್ಲಿಯೂ ಅಭಿನಯಿಸಿದ್ದರು. ನಾಟಕವೇನೋ ಯಶಸ್ವಿಯಾಗಿತ್ತು ಆದರೆ ಅದರ ಚರ್ಚೆಗಳು ಕಲಾಕ್ಷೇತ್ರದ ಅಂಗಣವನ್ನು ದಾಟಿಕೊಂಡು ಚದುರಿದ್ದವು.

ಯಥಾಪ್ರಕಾರ ಹೊಸ ನಾಟಕ ಪ್ರದರ್ಶನದ ನಂತರ ಸರ್ವೇ ಸಮಾನ್ಯವಾಗಿ ರಂಗಾಸಕ್ತರಲ್ಲಿ ಆ ನಾಟಕ ಕುರಿತಂತೆ ಚರ್ಚೆಗಳು ಮುಂಖಾನು ಮುಂಖಿವಾಗಿ ಬಣ್ಣ ಬಣ್ಣಗಳಿಂದ ಅರಳುತ್ತಿದ್ದವು. ಗುಂಡಿನ ಸಭೆಗಳಲ್ಲಂತೂ ಹೇಳುವುದೇ ಬೇಡ. – ಮನಸೋ –ಯಥೇಚ್ಚ–ನಾಟಕದ ಪಾತ್ರಧಾರಿ, ನಿರ್ದೇಶಕ, ತಂಡ, ಹೀಗೆ ಎಲ್ಲರ ಬಗೆಗೂ ಚರ್ಚೆಗಳೂ ಹೂ ಮತಾಪಿನಂತೆ ಬಣ್ಣ ಬಣ್ಣವಾಗಿ ಅರಳುತ್ತಿದ್ದವು. ಅಂದು ಆಗಿದ್ದುದು ಅದೇ. ಸಾಮಾನ್ಯವಾಗಿ ತಾವರಗೇರಿ ಅವರು ಬೆಂಗಳೂರಿಗೆ ಬಂದರೆ ಮಿನರ್ವಾ ವರ್ತುಳದ 'ನ್ಯೂ ಮಾಡರ್ನ ಹೋಟಲ್' (ಎನ್.ಎಮ್.ಹೆಚ್.)ದಲ್ಲಿ ತಂಗುತ್ತಿದ್ದರು. ಅವರೊಂದಿಗೆ ಬೆಂಗಳೂರಿನ ಕೆಲ ಆಸಕ್ತರು, ರಂಗ ತಂಡಗಳ

ಮುಖ್ಯಸ್ಥರು ಇರುತ್ತಿದ್ದುದು ಸಹಜವಾಗಿತ್ತು. ಏಕೆಂದರೆ ರಾಜಧಾನಿಗೂ ದೂರದ ವಿಜಾಪುರ, ಬಾಗಲಕೋಟೆ, ಇಲಕಲ್ಲಗಳಲ್ಲಿ ಈ ಬೆಂಗಳೂರಿನ ತಂಡಗಳ ನಾಟಕಗಳ ಮರು ಪ್ರದರ್ಶನಗಳಿಗೆ ತಾವರಗೇರಿ ಅವರು ಪ್ರೇರಣೆ ಒದಗಿಸಿ ಅಲ್ಲಲ್ಲಿ ಸಂಯೋಜಿಸಲು ನೆರವಾಗುತ್ತಿದ್ದರು. ಹೀಗಾಗಿ ಬೆಂಗಳೂರಿನ ಬಹಳಷ್ಟು ರಂಗ ಪ್ರಮುಖರು ಅವರೊಂದಿಗೆ ಆಗ ಇರುವುದು ಸಹಜವಾಗಿತ್ತು.

ಮ್ಯಾಕ್‌ಬೆಥ್ ಪ್ರದರ್ಶನದ ಆ ರಾತ್ರಿ ಮತ್ತು ಮರುದಿನದ ರಾತ್ರಿ ಎನ್.ಎಮ್.ಹೆಚ್.ದಲ್ಲಿ ರಂಗಪ್ರಿಯ ಸಮಾನ ಮನಸ್ಕರ ಗುಂಡು ಸಮಾರಾಧನೆ ಸಾಗಿತ್ತು. ಮ್ಯಾಕ್‌ಬೆಥ್ ನಾಟಕದ ಚರ್ಚೆಗಳು ಸಾಗಿತ್ತು. ನಾಟಕವನ್ನು ಇನ್ನೂ ಚನ್ನಾಗಿ ಮಾಡಬಹುದಿತ್ತು ಎನ್ನುವ ಅಭಿಪ್ರಾಯ ಅಲ್ಲಿ ವ್ಯಕ್ತವಾಗಿತ್ತು. ಅಲ್ಲಿ ಅದೇ ಆಗ ರಂಗಪದವಿ ಮುಗಿಸಿ ಬಂದ ಬಾದರದಿನ್ನಿಯವರನ್ನು ಅಲ್ಲಿ ಕೂಡಿದವರೆಲ್ಲ ಇದಕ್ಕೆ ನಿಮ್ಮ ಅಭಿಪ್ರಾಯವೇನು? ನೀವೂ ಆಗಿದ್ದರೆ ಏನು ಮಾಡುತ್ತಿದ್ದಿರಿ? ಎಂದು ಪ್ರಶ್ನಿಸಿದಾಗ ಬಾದರದಿನ್ನಿ ಅವರು ಅದೇ ಆತ್ಮವಿಶ್ವಾಸದ ಖಚಿತವಾದ ಧ್ವನಿಯಲ್ಲಿ 'ಇದಕ್ಕಿಂತ ಉತ್ಕೃಷ್ಟವಾಗಿ ನಾಟಕವನ್ನು ಮಾಡಬಹುದಿತ್ತು' ಎನ್ನುತ್ತಾರೆ. ಆಗ ಚರ್ಚೆಯಲ್ಲಿಯೇ ಇದ್ದ 'ಮ್ಯಾಕ್ ಬೆಥ್' ಕನ್ನಡಿಸಿದ ಲೇಖಕ ರಾಮಚಂದ್ರದೇವ ಅವರು 'ಆ ನಾಟಕವನ್ನು ಇನ್ನೂ ಚನ್ನಾಗಿ ಮಾಡಬಹುದ್ದಿತ್ತು ಅನ್ನುವದಾದರೇ, ಶೆಕ್ಸಪೀಯರ್‌ನ ಇನ್ನೊಂದು ನಾಟಕದ ಕನ್ನಡಾನುವಾದ ನನ್ನ ಹತ್ತಿರವಿದೆ, ಅದನ್ನು ತೆಗೆದುಕೊಂಡು ಮಾಡಿ ತೋರಿಸಿ ಹಾಗಾದ್ರೆ' ಎನ್ನುವ ಆಹ್ವಾನ ನೀಡುತ್ತಾರೆ.

ಅಲ್ಲಿ ಕೂಡಿದವರಲ್ಲಿ ಮೊದಲೆ ಪರಿಚಯವಿದ್ದ ಟಿ.ಎಸ್.ರಂಗಾ, ಸುರೇಶ, ಮುಂತಾದವರು ಈ ಆಹ್ವಾನವನ್ನು ಸ್ವೀಕರಿಸುವಂತೆ ಮಾತನಾಡುತ್ತಾರೆ. ತಾವರಗೇರಿ ಅವರು ಪ್ರೋತ್ಸಾಹಿಸುತ್ತಾರೆ. ಸರಿ ಹಾಗಾದರೆ ನಾಟಕ ತಂಡ ಯಾವದು ಅಂತ ಪ್ರಶ್ನೆ ಎದ್ದು ನಿಲ್ಲುತ್ತದೆ. ಆಗ ಟಿ.ಎಸ್.ರಂಗಾ ಅವರು ಬಿ.ವ್ಹಿ.ಕಾರಂತರು ಕಟ್ಟಿ ಬೆಳೆಸಿದ 'ಬೆನಕ' ತಂಡಕ್ಕೆ ಮಾಡಬಹುದು ಎನ್ನುತ್ತಾರೆ. ಆಗ ಬೆನಕ ತಂಡದ ಉಸ್ತುವಾರಿ ಅವರದ್ದೇ ಆಗಿರುತ್ತದೆ. ಹೀಗಾಗಿ ಅವರು ಸಹಜವಾಗಿ ಬೆನಕ ತಂಡವನ್ನು ಸೂಚಿಸುತ್ತಾರೆ. ರಾಮಚಂದ್ರ ದೇವ ಅವರ ಅಹ್ವಾನ, ಹ್ಯಾಮ್ಲೆಟ್ ನಾಟಕದೊಂದಿಗೆ ಬೆನಕ ನಾಟಕ ತಂಡದ ಆಯ್ಕೆ ಅಂತಿಮವಾಗುತ್ತದೆ. ಆಗ ಅಶೋಕ ಬಾದರದಿನ್ನಿ ಅವರು ನಾಟಕದಲ್ಲಿಯ ಪಾತ್ರಗಳ ಮತ್ತು ಪಾತ್ರಧಾರಿಗಳ ಆಯ್ಕೆಯಲ್ಲಿ ನಿರ್ದೇಶಕನಾದನಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು, ಹಾಗೂ ನಾಟಕ ತಂಡದವರು ನಿರ್ದೇಶಕನ ಮೇಲೆ ಏನನ್ನೂ ಒತ್ತಾಯಪೂರ್ವಕ ಹೇರಕೂಡದು. ಸಂಪೂರ್ಣ ಜವಾಬ್ದಾರಿಯನ್ನು ನಿರ್ದೇಶಕನಾದ ನನಗೆ ಬಿಡಬೇಕು, ಅದಕ್ಕೆ ಪೂರಕವಾಗಿ ನಿಮ್ಮ ಸಲಹೆಗಳನ್ನು ನಾನು ಪಡೆಯುತ್ತೇನೆ ಎಂದು ಅಶೋಕ ಬಾದರದಿನ್ನಿ ಈ ಸಂದರ್ಭದಲ್ಲಿ

ಹೇಳುತ್ತಾರೆ. ಅದಕ್ಕೆ ಬೆನಕ ನಾಟಕ ತಂಡ ಸದಸ್ಯರು ಒಪ್ಪಿ ಒಟ್ಟು 'ಹ್ಯಾಮ್ಲೆಟ್' ನಾಟಕದ ನಿರ್ದೇಶನ ಜವಾಬ್ದಾರಿ ಅಶೋಕ ಅವರ ಪಾಲಾಗುತ್ತದೆ. ಮುಂದೆ ಕೆಲವು ದಿನ ನಾಟಕಗಳ ವಾಚನ ಸಾಗಿ,- ಪಾತ್ರಧಾರಿಗಳ ಆಯ್ಕೆಯ ವಿಚಾರಕ್ಕೆ ಬಂದು ನಿಂತಾಗ ಬಾದರದಿನ್ನಿ ಅವರು ನಾಟಕದ ಹ್ಯಾಮ್ಲೆಟ್ ಪಾತ್ರಕ್ಕೆ ತಮ್ಮೊಂದಿಗೆ ಎನ್.ಎಸ್.ಡಿ ಅಧ್ಯಯನ ಪಡೆದಿದ್ದ ಗೆಳೆಯ ಶ್ರೀ ಶ್ರೀನಿವಾಸ ಪ್ರಭು ಅವರನ್ನು ಆಯ್ಕೆ ಮಾಡುತ್ತಾರೆ.

ಸಾಮಾನ್ಯವಾಗಿ ಬೆಂಗಳೂರಿನ ರಂಗ ತಂಡಗಳಲ್ಲಿ ಕೊಡುಕೊಳ್ಳುವಿಕೆ ಇದ್ದಾಗಲೂ ಪ್ರಮುಖ ತಂಡಗಳಲ್ಲಿ ಆ ದಿನಗಳಲ್ಲಿ ವಿಶೇಷ ಸ್ಪರ್ಧೆ ಇರುವುದು ಸಹಜವಾಗಿತ್ತು. ೧೯೭೦-೧೯೮೦ರ ದಶಕದಲ್ಲಿ ಒಬ್ಬೊಬ್ಬ ಪ್ರಮುಖ ನಿರ್ದೇಶಕರ, ನಟರ, ಸಂಘಟಕರ ಒಂದೊಂದು ಪ್ರಮುಖ ರಂಗತಂಡಗಳಿದ್ದವು. ಆಗೆಲ್ಲಾ ಹೆಸರುವಾಸಿ ಆಗಿದ್ದ ರಂಗನಟರು ಆಯಾ ತಂಡಗಳಿಗೆ ಸೀಮಿತವಾಗಿದ್ದರೂ ಎಲ್ಲೋ ಅಲ್ಲೊಂದು ಇಲ್ಲೊಂದು ವಿನಿಮಯ ಆಗಿದ್ದವು. ಆಯಾ ಆಯಾ ತಂಡಕ್ಕೆ ಸೀಮಿತವಾಗಿದ್ದ ಪ್ರಮುಖರು ಆಯಾ ಆಯಾ ತಂಡಗಳಿಗೆ ಕಾಯಾ,ವಾಚಾ ಮನಸಾ ಪ್ರಾಮಾಣಿಕರಾಗಿದ್ದರು. ಹೊಸಬರಿಗೆ ಏಣಿ ಹತ್ತಿಸುವ, ಕಾಲು ಜಗ್ಗುವ ಪರಿ ಸಾಮಾನ್ಯವಾಗಿತ್ತು. ಏನೂ ಇಲ್ಲದೇ ಹೋದರೆ ಟಿಂಗಲ್ ಅಂತು ಇದ್ದೇ ಇರುತ್ತಿತ್ತು. ಹೀಗಾಗಿ ಬಾದರದಿನ್ನಿ ಅವರು ಶ್ರೀನಿವಾಸಪ್ರಭು ಅವರನ್ನು ಹ್ಯಾಮ್ಲೇಟ್ ಪಾತ್ರಕ್ಕೆ ಆಯ್ಕೆಮಾಡಿದಾಗ ಬೆನಕ ತಂಡದ ಪ್ರಮುಖರಲ್ಲಿ ಪ್ರಶ್ನಾರ್ಥಚಿಹ್ನೆ ಉದ್ಭವಿಸಿತ್ತು. ಅದರ ಜವಾಬ್ದಾರಿ ನನಗೆ ಇರಲಿ ಎಂದಿದ್ದ ಅಶೋಕ ಅವರು ಆ ಪ್ರಮುಖ ಪಾತ್ರಕ್ಕೆ ಶ್ರೀನಿವಾಸ ಪ್ರಭುವನ್ನು ತರುವಲ್ಲಿಯೂ ಮತ್ತು ಹ್ಯಾಮ್ಲೇಟ್ ಪಾತ್ರದಲ್ಲಿ ಅವರನ್ನು ವಿಜೃಂಭಿಸುವಲ್ಲಿಯೂ ಸಹಜವಾಗಿ ಯಶಸ್ವಿಯಾಗಿದ್ದರು.

ಅದೇ ಮಿನರ್ವಾ ವರ್ತುಳದಲ್ಲಿಯೇ ಇದ್ದ ಬೆನಕ ಕಛೇರಿಯಲ್ಲಿ ಹ್ಯಾಮ್ಲೆಟ್ ನಾಟಕದ ತಾಲೀಮು ಸಾಗಿದರೆ, ಹಗಲಲ್ಲಿ ಕಲಾಕ್ಷೇತ್ರದ ತಾಲೀಮು ಕೊಠಡಿಗಳಲ್ಲಿ ಯುವಾಸಕ್ತರಿಗೆ, ಮತ್ತೆ ಕೆಲವು ತಂಡಗಳಿಗೆ ರಂಗಶಿಬಿರ ಸಂಯೋಜಿಸುವ ಕೈಂಕರ್ಯದಲ್ಲಿ ತೊಡಗಿರುತ್ತಿದ್ದರು. ಹೀಗೆ ಹಗಲು ರಂಗ ಶಿಬಿರ, ಸಂಜೆ ಹ್ಯಾಮ್ಲೆಟ್ ನಾಟಕದ ತಾಲೀಮು ಅದು ಮುಗಿದೊಡನೆ ಮತ್ತೆ ಇನ್ನೆಲ್ಲಿಯೋ ಗುಂಡು ಸಮಾರಾಧನೆ, ಅದೇ ನಾಟಕದ ಚರ್ಚೆಗಳು ಮುಂತಾಗಿ ಸಹಜವಾಗಿ ಅದೇ ಆಗ ಎನ್.ಎಸ್.ಡಿ ಪದವಿ ಮುಗಿಸಿ ಬಂದು ಮೊದಲ ನಾಟಕದ ನಿರ್ದೇಶನ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಅಶೋಕ ಬಾದರದಿನ್ನಿ ಅವರ ದಿನಚರಿಯಾಗಿತ್ತು.

ಸುಮಾರು ಐದು-ಆರು ವರ್ಷದ ಅಂತರದಲ್ಲಿ ಎನ್.ಎಸ್.ಡಿ.ಯಿಂದ ಬಂದ ಹೊಸಮುಖ ಅದರಲೂ ಉತ್ತರ ಕರ್ನಾಟಕದ ಗಂಡು ಮೆಟ್ಟಿನ ವಿಜಾಪುರ

ಜಿಲ್ಲೆಯ ಅಪ್ಪಟ್ಟ ಪ್ರತಿಭೆ.- ಅಂಗವೈಕಲ್ಯವನ್ನು ಮೆಟ್ಟಿ ನಿಂತ ಛಲದಂಕ ಮಲ್ಲ, ಈಗಾಗಲೇ ಆ ಭಾಗದಲ್ಲಿ ಕೆಲವು ನಾಟಕಗಳನ್ನು ನಿರ್ದೇಶಿಸಿ, ಅವೆಲ್ಲಕ್ಕೆ ತಮ್ಮದೇ ಆದೇ ವಿಶಿಷ್ಟ ಟಚ್ ಕೊಟ್ಟು, ಆ ಮೂಲಕ ಸ್ವ-ಇಚ್ಛಾಶಕ್ತಿಯಿಂದ ಗಮನಾರ್ಹಬೆಳವಣಿಗೆ ಸಾಧಿಸಿದ ಅಪರಂಜಿ ಎನ್ನುವ ಹೆಗ್ಗಳಿಕೆ ಹೊಂದಿದ್ದ ಬಾದರದಿನ್ನಿ ಅವರು ರಾಜಧಾನಿಯಲ್ಲಿಯೂ ಈ ಹೆಗ್ಗಳಿಕೆಯನ್ನು ಉಳಿಸಿಕೊಂಡು ತ್ರಿವಿಕ್ರಮನಾಗಬಲ್ಲರೇ ಎನ್ನುವ ಚರ್ಚೆಗಳು ಬೆನ್ನ ಹಿಂದೆ ನಡೆದಿದ್ದರೆ ಇನ್ನೊಂದೆಡೆ ಅವರ ಹಿಂದೆ ತಾವರಗೇರಿಯವರು ಇದ್ದಾರೆ ಯಶಸ್ಸು, ಸಹಜ ಎನ್ನುವ ಪ್ರಮುಖ ಮುನಿರಂಗಪ್ಪಗಳ ಆಶಯಗಳು ಅಶೋಕಬಾದರದಿನ್ನಿ ಅವರನ್ನು ಇನ್ನಷ್ಟು ಗಟ್ಟಿಯಾಗಿ ಪರಿಪೂರ್ಣವಾಗಿ ಹ್ಯಾಮ್ಲೇಟ್ ನಾಟಕದಲ್ಲಿ ತೊಡಗಿಸಿಕೊಳ್ಳಲು ಕಾರಣವಾದವು.

ಶ್ರೀ ಶ್ರೀನಿವಾಸ ಪ್ರಭು ಅವರು ಎನ್.ಎಸ್.ಡಿ. ಯಿಂದ ಹಿಂದಿರುಗಿ ಬರುವಷ್ಟರಲ್ಲಿ ನಾಟ್ಯದರ್ಪಣ ನಾಟಕ ತಂಡದ ಉಸ್ತುವಾರಿ ವಹಿಸಿಕೊಂಡಿದ್ದರು. ಹೀಗಿದ್ದರೂ ಬೆನಕ ನಾಟಕ ತಂಡಕ್ಕಾಗಿ ಮತ್ತು ಬಾದರದಿನ್ನಿ ಅವರಿಗಾಗಿ ಹ್ಯಾಮ್ಲೆಟ್ ಆಗಲು ಒಪ್ಪಿದ್ದರು. ಇವರ ಜೊತೆಗೆ ಪ್ರಮುಖ ಸ್ತ್ರೀ ಪಾತ್ರಗಳಿಗೆ ಅಳೆದು,ಸುರಿದು,- ಬಾದರದಿನ್ನಿ ಅವರು ವಿಶಿಷ್ಟ ಮತ್ತು ವಿಶೇಷ ಕಲಾವಿದರನ್ನೆ ಆಯ್ಕೆ ಮಾಡುತ್ತಾರೆ. ಅದರಲ್ಲಿ ಓಫಿಲಿಯಾ ಪಾತ್ರಕ್ಕೆ ಅದೇ ಆಗ ಮಿಸ್ ಬೆಂಗಳೂರು ಆಗಿ ಆಯ್ಕೆಯಾಗಿದ್ದ ಕುಮಾರಿ ರೇಖಾ ಹಂದೆ ಅವರನ್ನು ಹಾಗೂ ಅದೇ ಪಾತ್ರದ ಇನ್ನೊಂದು ವರಶನ್‌ಗೆ ಗುಬ್ಬಿವಂಶದ ಕುಡಿ ಜಿ.ವಿ. ಮಾಲತಮ್ಮ ನವರ ಮಗಳು ಖ್ಯಾತ ರಂಗ ನಿರ್ದೇಶಕಿ ಬಿ.ಜಯಶ್ರೀ ಅವರ ಸಹೋದರಿ ಪದ್ಮಶ್ರೀ ಮತ್ತು ಮಗದೊಂದು ಪ್ರಮುಖ ಪಾತ್ರದಲ್ಲಿ ಆಗಿನ ಪ್ರಮುಖ ಆಕಾಶವಾಣಿ ನಿರ್ದೇಶಕಿ ಶ್ರೇಷ್ಠ ಅಭಿನೇತ್ರಿ ಯಮುನಾ ಮೂರ್ತಿ ಪ್ರಮುಖರಾಗಿದ್ದರು.

ಒಂದರ್ಥದಲ್ಲಿ ಹಿರಿತೆರೆಯಲ್ಲಿರುವಂತೆ ಈ ರಂಗಭೂಮಿಯ ಹ್ಯಾಮ್ಲೆಟ್‌ನ ನಾಟಕದಲ್ಲಿ ಎಲ್ಲ ಸ್ಟಾರ್‌ವ್ಯಾಲು ಕಲಾವಿದರು ಸೇರಿ ಹೋಗಿದ್ದರು. ಎಲ್ಲ ಬೆಂಗಳೂರಿನ ಮುನಿರಂಗಪ್ಪಗಳಿಗೆ, ರಂಗ ತಂಡಗಳಿಗೆ ಒಂದು ವಿಶಿಷ್ಟ ಕೂತೂಹಲ ಮತ್ತು ವಿಚಿತ್ರ ನಿರೀಕ್ಷೆ 'ಹ್ಯಾಮ್ಲೆಟ್' ನಾಟಕದ ಕುರಿತಂತೆ ಇತ್ತು. ಬೆಳಗಿನ ರಂಗಶಿಬಿರದ ಸಂದರ್ಭಗಳಿಂದ ಹಿಡಿದು ತಾಲೀಮು ಮುಗಿಸಿ ಗುಂಡುಸಮಾರಾಧನೆ ವರೆಗೂ ಬಾದರದಿನ್ನಿ ಅವರ ಹಿಂದೆ. . ಮುಂದೆ. . ಅಕ್ಕ ಪಕ್ಕಾ ಎಲ್ಲ ಹ್ಯಾಮ್ಲೆಟ್ ಮಾತುಗಳೇ ಮಾತುಗಳು. ಇವೆಲ್ಲವನ್ನು ಮೀರಿ ನಿಂತು ಯಶಸ್ವಿನತ್ತ ದೃಢ ಚಿತ್ತದಿಂದ ಆತ್ಮ ವಿಶ್ವಾಸದಿಂದ ಬಾದರದಿನ್ನಿ ಸಾಗಿದ್ದರು.

ಬಾದರದಿನ್ನಿ ಅವರಿಗೂ ಇದು ಅಳಿವು ಉಳಿವಿನ ಪ್ರಶ್ನೆ, ಜೊತೆಗೆ ಮೊದಲ ನಾಟಕ ಅದಕ್ಕಿಂತಲೂ ಮುಖ್ಯ ಉತ್ತರ ಕರ್ನಾಟಕದ ಪ್ರತಿಭೆ, ಮೇಲಾಗಿ ತಾವರಗೇರಿ

ಅವರ ಶಿಷ್ಯ ಹೀಗೆ ಎಲ್ಲ ವಿಷಯಗಳೂ ಮುಪ್ಪರಿಗೊಂಡು ಹ್ಯಾಮ್ಲೆಟ್ ಕುರಿತಂತೆ ನಿರೀಕ್ಷೆಯ ಮೊಗ್ಗೆ ಮೂಡಿತ್ತು. ಸತತ ಮೂರು ತಿಂಗಳು ತಾಲೀಮು, ನಾಟಕದ ಉಳಿದ ವಿಭಾಗಗಳಾದ ಪ್ರಸಾಧನ, ಲೈಟ್, ನೇಪಥ್ಯ, ರಂಗ ವಿನ್ಯಾಸ, ವಸ್ತ್ರ ವಿನ್ಯಾಸ ಮುಂತಾದವುಗಳಿಗೆ ಬೆಂಗಳೂರಿನ ರಂಗಪ್ರಮುಖರನ್ನು ಬಾದರದಿನ್ನಿ ಆಯ್ಕೆ ಮಾಡಿದ್ದರು.

ಮೂರು ತಿಂಗಳ ತಾಲೀಮಿನ ನಂತರ ನಾಟಕ ಪ್ರದರ್ಶನದ ದಿನಾಂಕಗಳು ನಿಗದಿಯಾಗಿ, ಸಹಜವಾಗಿದ್ದ ಮುಂಗಡ ಬುಕ್ಕಿಂಗ್ ಕೂಡ ಆರಂಭವಾಗಿ. . .ಮೂರು ದಿನಕ್ಕೆ ಪ್ರದರ್ಶನ ನಿಗದಿಯಾಗಿ ರವೀಂದ್ರ ಕಲಾಕ್ಷೇತ್ರವು ಬುಕ್ ಆಗಿತ್ತು.

ಅದೇ ಆಗ ಪದವಿ ಮುಗಿಸಿ ಬಂದ ಹೊಸ ನಿರ್ದೇಶಕನಿಗೆ 'ಬೆನಕ'ದಂಥ ತಂಡ ತನ್ನ ಪ್ರಥಮ ನಿರ್ದೇಶಿತ ನಾಟಕಕ್ಕೆ ದೊರೆಯುವುದು. . ಅಥವಾ ತಂಡವೇ ಅಹ್ವಾನಿಸುವದರಲ್ಲಿ ಆ ಸಂದರ್ಭ ಅಪರೂಪವಾಗಿತ್ತು. ಆಗಲೇ. . ಶ್ರೀ ಬಿ.ವಿ. ಕಾರಂತ, ಶ್ರೀ ಜಿ.ವಿ.ಶಿವಾನಂದ, ಶ್ರೀಮತಿ ಬಿ.ಜಯಶ್ರೀ. . . ಆದಿಯಾಗಿ ಆಗಲೇ ಹೆಸರುಮಾಡಿದ್ದ ಅತಿರಥ ಮಹಾರಥರೇ 'ಬೆನಕಕ್ಕಾಗಿ' ಅದ್ಭುತ ಯಶಸ್ವಿ ನಾಟಕಗಳನ್ನು ಕಟ್ಟಿಕೊಟ್ಟಿದ್ದರು. ಕರ್ನಾಟಕದಿಂದ ಹಿಡಿದು ರಂಗ ಚಟುವಟಿಕೆಗಳಿರುವ. ಭೋಪಾಲ, ಮುಂಬೈ, ದೆಹಲಿಯಂಥ ಪ್ರದೇಶಗಳಲ್ಲೂ ಬೆನಕದ ಪ್ರಮುಖ ನಾಟಕಗಳಾದ ಸತ್ತವರ ನೆರಳು, ಜೋಕುಮಾರಸ್ವಾಮಿ, ಮತ್ತು ಹಯವದನ ಇನ್ನಿಲ್ಲದಂತೆ ಪ್ರದರ್ಶನಗೊಂಡು ಹೆಸರು ಮಾಡಿದ್ದವು. ಅಂದ ಮೇಲೆ ಬಾದರದಿನ್ನಿ ಅವರ ಮೇಲೆ ಎಂಥಹ ಗುರುತರವಾದ ಜವಾಬ್ದಾರಿ ಬಿದ್ದಿರಬೇಕು ಊಹಿಸಿಕೊಳ್ಳಿ, ಅದನ್ನೆಲ್ಲ ಹೊತ್ತುಕೊಂಡು ಮುಂದೆ ಬರಬಹುದಾದ ಸಮಸ್ಯೆಗಳನ್ನೆಲ್ಲಾ ಮೆಟ್ಟಿ ನಿಂತು ಎಳಕಲಾದ ಬಡಕಲು ಶರೀರದ, ತೆಳ್ಳನೆಯ ಕೋಲು ಮುಖದ, ಕಪ್ಪು ವರ್ಣದ ಕಾಲು ಎಳೆದುಹಾಕುತ್ತಿದ್ದ ಮತ್ತು ಎಡಗೈನಿಂದ ಅಥವಾ ಬಲಗೈನಿಂದ ಕೆನ್ನೆಯ ಮೇಲಿನ ಗಡ್ಡಕಿತ್ತುಕೊಳ್ಳುತ್ತಿದ್ದ ದೊಗಲೆ ಪೈಜಾಂ, ನೆಹರು ಶರ್ಟಿನ ಈ ಆಸಾಮಿ ದೊಡ್ಡ ವಜ್ರಾಭರಣದ ಟಂಕಶಾಲೆಗೆ ಕೈ ಹಾಕಿತ್ತು. ಇನ್ನೂ ಟಂಕಶಾಲೆಯನ್ನು ದೋಚುವದಷ್ಟೇ ಬಾಕಿಯಿತ್ತು. ಅದೇ ಆತ್ಮವಿಶ್ವಾಸ, ದೃಢಚಿತ್ತ, ಪ್ರಯತ್ನ, ಮತ್ತು ವಿಶಿಷ್ಟತೆಗಳನ್ನು ಮೇಳೈಸಿಕೊಂಡಿದ್ದ ಬಿಳಿ ಜೋಳದ ದಂಟಿನಂತಹ ಈ ಮನುಷ್ಯ ಕೊನೆಗೂ ನಾಟಕವನ್ನು ಪ್ರದರ್ಶನದ ಹಂತಕ್ಕೆ ತಂದು ನಿಲ್ಲಿಸಿ ಮುಂಗಡ ಬುಕ್ಕಿಂಗನ್ನು ಆರಂಭಿಸಿ ಬಿಟ್ಟಿದ್ದರು.

ಅಂತಿಮ ತಾಲಿಮಿನ ಕ್ಷಣಗಳು ರಂಗದ ಪರದೆ ಏಳುವದಕ್ಕೆ ಸಿದ್ಧವಾಗಿದ್ದು ಬುಕ್ಕಿಂಗ್ ಒಂದುವಾರ ಮುಂಚಿತವಾಗಿ ಅರಂಭವಾದಾಗ . . . ಹಗಲು ಹೊತ್ತಿನಲ್ಲಿ–ಕಲಾಕ್ಷೇತ್ರದಲ್ಲಿ ರಂಗ ಶಿಬಿರಗಳನ್ನು ಕೈಗೊಂಡಿದ್ದ ಬಾದರದಿನ್ನಿ ಅವರಿಗೆ–ಬೆಂಗಳೂರಿನ 'ರಂಗ ರಾಜಕೀಯ'ದ ಹವಾ ಸ್ಪಷ್ಟವಾಗಿ ಕಾಣಿಸಿತು. ಬುಕಿಂಗ್ ಹೆಚ್ಚಾಗದಂತೆ

ಒಂದರ್ಥದಲ್ಲಿ ಬುಕಿಂಗ್ ಆಗದಂತೆಯೂ. . . ಹಿಂದಿನಿಂದ ಕಾಲೆಳೆಯುವ ರಾಜಧಾನಿ ಮುನಿರಂಗಪ್ಪಗಳ ಸ್ವಭಾವ ಢಾಳಾಗಿ ಒಡೆದು ಕಂಡಿತು. ಅದನ್ನು ಕಂಡೂ 'ಬೆನಕ' ಬ್ಯಾನರ್ ಮತ್ತು 'ತಮ್ಮ' ದೃಢ ಆತ್ಮ ವಿಶ್ವಾಸದೊಂದಿಗೆ ಬಂದದ್ದೆಲ್ಲ ಬರಲಿ ಶ್ರೀರಂಗನ ದಯೆಯೊಂದಿರಲಿ ಎಂದೂ, ಹಾಗೂ ಬಸವಣ್ಣನವರ 'ಕಾಯಕವೇ ಕೈಲಾಸ' ದಂತೆ ಕಾಯಾ,ವಾಚಾ, ಮನಸಾ ತ್ರಿಕರಣಪೂರಕವಾಗಿ ನಾಟಕದ ಯಶಸ್ಸಿಗೆ – ಏನು ಬೇಕು ಅದೆಲ್ಲಾ ಸಿದ್ಧತೆಗಳನ್ನು ಆರಂಭದ ತಮ್ಮ ಬೆಂಗಳೂರು ಮೊದಲ ನಾಟಕಕ್ಕೆ ಬಾದರದಿನ್ನಿ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದರು.

ಹಾಗೆಯೇ ನಾಟಕದ ಕುರಿತಂತೆ ಪ್ರದರ್ಶನ ಪೂರ್ವವೇ ಚರ್ಚೆಗಳು ಆರಂಭವಾಗಿದ್ದವು. ಅದಕ್ಕೆ ಕಾರಣ ಕಾರಂತರ ಶಿಷ್ಯ ಮೇಲಾಗಿ ತಾವರಗೇರಿ ಅವರ ಪ್ರಿಯ ಶಿಷ್ಯ ಜೊತೆಗೆ ಗಟ್ಟಿಕಾಳು ವಿಜಾಪುರದ ಅಪ್ಪಟ ಎರೇಸೀಮೆ ಮನುಷ್ಯ, ಆಗಲೇ ಆ ಭಾಗದಲ್ಲೆಲ್ಲ–ನಾಟಕದ ಪದವಿ ಪಡೆಯುವ ಮೊದಲೆ ಯಶಸ್ವಿ ನಾಟಕಗಳನ್ನು ಕೊಟ್ಟವರು. . . ಮೊದಲ ಪ್ರಯತ್ನದಲ್ಲಿ 'ಬೆನಕ' ದಂಥ ತಂಡಕ್ಕೆ ನಾಟಕ ನಿರ್ದೇಶನ. . . ಹೀಗೆ ಹತ್ತು ಹಲವು ಬಣ್ಣ ಬಣ್ಣದ ವೈವಿಧ್ಯಪೂರ್ಣ ಮಾತುಗಳು ರಾಜಧಾನಿ ರಂಗಭೂಮಿಯ ತುಂಬೆಲ್ಲ ಹರಡಿ.. . ನಾಟಕದ ಕುರಿತಂತೆ ಕಾಮನ ಬಿಲ್ಲಿನ ಚಿತ್ತಾರ ಬಿಡಿಸಿತ್ತು.

ಅಂತೂ ನಿಗದಿಪಡಿಸಿದ ದಿನದಂದು ಎಲ್ಲ ಧಾವಂತಗಳ ನಡುವೆ ಅಶೋಕ ಬಾದರದಿನ್ನಿ ಅವರ ಬೆಂಗಳೂರಿನ ಮೊದಲ ನಿರ್ದೇಶನದ ನಾಟಕದ ಪರದೆ ಸರಿಯಿತು. . .ರಂಗ ರಾಜಕಾರಣದ ಫಲ ಅಪರಿಮಿತ ಪ್ರೇಕ್ಷಕರಿರದಿದ್ದರೂ ಅರ್ಧ ತುಂಬಿದ ಕಲಾಕ್ಷೇತ್ರ. . . ಮೊದಲ ಪ್ರಜನನದ ಅನುಭವ. . . ತೀವ್ರತೆ, ಗಡಿಬಿಡಿ ಸಹಜ. ಆದರೆ ಅದನ್ನು ಎಲ್ಲೂ ತೋರಗೊಡದೆ ಗಂಭೀರ ಮುಖ ಮುದ್ರೆಯಲ್ಲಿ ದೃಶ್ಯದಿಂದ ದೃಶ್ಯಕ್ಕೆ ಅದೇ ಗಡ್ಡವನ್ನು ಎಡಗೈಯಿಂದ ಕೆರೆದುಕೊಳ್ಳುತ್ತಾ, ಕಾಲೆಳೆದು ಹಾಕುತ್ತ.. . ದೃಢ ಚಿತ್ತದಿಂದ ಕಲಾವಿದರನ್ನು ಮುಂದಿನ ದೃಶ್ಯಗಳಿಗಾಗಿ ಹುರಿದುಂಬಿಸುತ್ತಾ ಓಡಾಡುತ್ತಿದ್ದರು ಬಾದರದಿನ್ನಿ.

ನಾಟಕ ಸಮಾಪನವಾದಕ್ಷಣ ಕಿವಿಗಡಚಿಕ್ಕುವ ಚಪ್ಪಾಳೆ. . . ಅಭಿನಂದನಗಳ ಸುರಿಮಳೆ. . . ಪ್ರಶಂಸೆಯ ಮಾತುಗಳ ಧಾರಾಕಾರ ಮಳೆ. ಸಾಹಿತ್ಯದ ದಿಗ್ಗಜರು, ರಂಗ ನಿಪುಣರು, ರಾಜಧಾನಿ ಪ್ರಮುಖ ಮುನಿರಂಗಪ್ಪಗಳ. ರಂಗತಂಡಗಳ ಮುಖ್ಯಸ್ಥರ ಅಭಿನಂದನೆಗಳ ಮಹಾಪೂರ, ಮಾಧ್ಯಮದವರ ಕ್ಲಿಕ್‌ಗಳ ಬೆಳಕು– ಕರ್ನಾಟಕ ರಂಗ ನಕ್ಷೆಯಲ್ಲಿ ಹೊಸ ಸೂರ್ಯನನ್ನು ಉದಯಿಸುವಂತೆ ಮಾಡಿತ್ತು. ಹ್ಯಾಮ್ಲೆಟ್ ನಿರೀಕ್ಷೆ ಮೀರಿ, ಯಶಸ್ಸು ಪಡೆದಿತ್ತು. ಅದಕ್ಕೆಲ್ಲಾ ಕಲಾವಿದರ, ನೇಪಥ್ಯದವರ, ತಂಡದ, ಹಿತೈಷಿಗಳ ಸಹಕಾರವೇ ಆ ಯಶಸಿಗೆ ಅಡಿಪಾಯ ಎಂದು ಅದೇ

ದೃಢಚಿತ್ತದ ಮಾತುಗಳನ್ನು ಈಗಲೂ ಅಶೋಕ ಹೇಳುತ್ತಾರೆ.

ಲಂಕೇಶ್ ಪತ್ರಿಕೆಯ ಶ್ರೀ ಪಿ.ಲಂಕೇಶ್ ಪ್ರಜಾವಾಣಿಯ ಶ್ರೀ ಬಿ.ವ್ಹಿ. ವೈಕುಂಠರಾಜುವಿನಂತಹ ಹಿರಿಯ ರಂಗ ವಿಮರ್ಶಕರು ನಾಟಕದ ಪ್ರದರ್ಶನದ ನಂತರ ನಾಟಕದ ಕುರಿತಂತೆ ಉತ್ತಮ ಅಭಿಪ್ರಾಯ ನೀಡಿದ್ದರು. ಸಾಮಾನ್ಯವಾಗಿ ಪ್ರದರ್ಶನವಾದ ಮರುವಾರ ಪ್ರಕಟವಾಗುವ ವಿಮರ್ಶೆ 'ಪ್ರಜಾವಾಣಿ'ಪತ್ರಿಕೆಯಲ್ಲಿ ಬಿ.ವಿ.ವೈಕುಂಠರಾಜುರವರು ಮರು ದಿನವೇ ವಿಮರ್ಶೆಯನ್ನು ಬರೆದರೆ. . . ಮುಂದಿನ ಮೂರೇ ದಿನಗಳಲ್ಲಿ ಲಂಕೇಶ ಪತ್ರಿಕೆಯ ಎರಡನೇ ಪುಟದಲ್ಲಿಯೇ ಅಶೋಕರ ಕುರಿತಂತೆ ಪೂರ್ಣ ಪುಟದ ಪರಿಚಯದೊಂದಿಗೆ ನಾಟಕದ ಯಶಸ್ಸಿನ ವಿಮರ್ಶೆ ಇತ್ತು.

ಬಾಯಿಂದ ಬಾಯಿಗೆ.. . ನಾಟಕದ ಕುರಿತು ಹರಡಿದ ಒಳ್ಳೆಯ ಮಾತುಗಳು ಹಾಗೂ ಮರುದಿನದ ಪ್ರಜಾವಾಣಿ ವಿಮರ್ಶೆಯೂ ಮುಂದಿನ ಎರಡು, ಮೂರನೇ ದಿನಗಳ ಪ್ರದರ್ಶನಕ್ಕೆ. . . ಮೊದಲನ ದಿನ ಅರ್ಧ ಕಲಾ ಕ್ಷೇತ್ರ ತುಂಬಿದ್ದರೆ ಮುಂದಿನೆರಡು ದಿನ ಕಲಾ ಕ್ಷೇತ್ರ ತುಂಬಿ ತುಳುಕಿ, ನಾಟಕ ನಿಂತು ನೋಡಿ, ಟಿಕೆಟ್ ಸಿಗದೆ ಮರಳಿ ಹೋದವರೇ ಹೆಚ್ಚು, ಮೊದಲ ದಿನದ ನಾಟಕದ ವಿಮರ್ಶೆ ಓದಿ – ಕರ್ನಾಟಕದ ಜನ ಅದರಲ್ಲೂ ಮಂಡ್ಯ, ದಾವಣಗೆರೆ, ಉದ್ದಗಲಕ್ಕೂ ಹುಬ್ಬಳ್ಳಿ, ಧಾರವಾಡಗಳಿಂದ ಹಿಡಿದು ತವರು ನೆಲ. ವಿಜಾಪುರದ ಜನ ನಾಟಕ ನೋಡಲು ಮುಂದಿನೆರಡು ದಿನ ರಾಜಧಾನಿಗೆ ಧಾವಿಸಿ ಬಂದು–ಅಶೋಕರ ರಂಗಭವಿಷ್ಯಕ್ಕೆ ಮುನ್ನುಡಿಯ ನಾಂದಿ ಬರೆದರು.

ಶ್ರೀ ಶ್ರೀನಿವಾಸ ಪ್ರಭು, ವೈಶಾಲಿಕಾಸರವಳ್ಳಿ, ರೇಖಾ ಹಂದೆ, ಪದ್ಮಶ್ರೀ, ಯಮುನಾಮೂರ್ತಿ ಮುಂತಾದವರು ಅಭಿನಯಿಸಿದ ಈ ನಾಟಕವು ಮುಂದೆ ಕರ್ನಾಟಕದಲ್ಲೆಲ್ಲ ಮರು ಪ್ರದರ್ಶನಕಂಡು ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಹೊಸ ಸಂಚಲನವನ್ನು ಮೂಡಿಸಿ ಐವತ್ತಕ್ಕಿಂತ ಹೆಚ್ಚು ಪ್ರದರ್ಶನಗಳನ್ನು ಅಂದಿನ ದಿನಗಳಲ್ಲಿ ಕಂಡಿದ್ದು ದಾಖಲಾರ್ಹ ಪ್ರಯೋಗವಾಗಿದೆ. ಈ ನಾಟಕದ ಪರಿಣಾಮವಾಗಿ ಬಾದರದಿನ್ನಿ ಕರ್ನಾಟಕದಲೆಲ್ಲ ಮನೆ ಮಾತಾಗಿ, ನಾಟಕ ನಿರ್ದೇಶನಕ್ಕಾಗಿ ನಾಡಿನಾದ್ಯಂತ ರಂಗ ತಂಡಗಳಿಂದ ಯಥೇಚ್ಚ ಕರೆಗಳು ಬರತೊಡಗಿದವು. ಕನ್ನಡದ ಎಲ್ಲ ಪತ್ರಿಕೆಗಳು, ಸಾಹಿತ್ಯಿಕ, ರಂಗಭೂಮಿಯ, ಸಾಮಾಜಿಕ ರಂಗದ ಪ್ರಮುಖರೆಲ್ಲ ನಾಟಕದ ಕುರಿತಂತೆ ಆಡಿದ ಪ್ರಶಂಸೆಯ ಮಾತುಗಳು ಬಾದರದಿನ್ನಿ ಅವರಿಗೆ ಒಳ್ಳೆಯ ಭವಿಷ್ಯ ಕಲ್ಪಿಸಿಕೊಟ್ಟವು. ದಿ. ಲಂಕೇಶರಂತೂ 'ಜಾಲಿಗಿಡದಂಥ ಹುಡುಗನ ಅದ್ಭುತ ಪ್ರಯೋಗ' ಎಂಬ ಶಿರೋನಾಮೆಯ ನಾಟಕದ ವಿಮರ್ಶೆಯು ಅಶೋಕ್ ಅವರ ಪ್ರತಿಭೆಗೆ ಸಾಣೆಹಿಡಿದ ಲೇಖನವಾಗಿತ್ತು. . . ಹೀಗೆ

ಕರ್ನಾಟಕದ ಪ್ರಯೋಗಗಳ ದಾಖಲೆಗಳು ಮುಂದುವರೆದವು. ಇವರ ಹ್ಯಾಮ್ಲೆಟ್ ಪ್ರದರ್ಶನ ಯಶಸ್ವಿಯಾದ ಮೇಲೆ ಎನ್.ಎಸ್.ಡಿ ಗಾಗಿ ದೆಹಲಿಯಲ್ಲಿರುವಾಗ ಪರಿಚಿತರಾಗಿದ್ದ ಲಂಡನ್ನಿನ ರಾಯಲ್‌ಸ್ಕೂಲ್ ಆಫ್ ಡ್ರಾಮಾ ಅಕ್ಯಾಡೆಮಿಯ 'ರೋಶನ್‌ಸೇಟ್' ಅವರು ಬೆಂಗಳೂರಿಗೆ ಬಂದಿರುತ್ತಾರೆ. ಮೊದಲಿನ ಪರಿಚಯ. . ಆ ಮೇಲೆ ಹ್ಯಾಮ್ಲೆಟ್ ನಾಟಕದ ಯಶಸ್ಸು ಮುಂತಾದವುಗಳು ಭೇಟಿಯಾದಾಗ ಚರ್ಚೆಯಲ್ಲಿ ಹಣುಕಿ ಹಾಕುತ್ತವೆ. ಆಗ ಶ್ರೀ ರೋಷನ್ ಸೇಟ್ ಅವರು ಅಶೋಕ ಅವರನ್ನು ಲಂಡನ್‌ಗೆ ಅಲ್ಲಿಯ ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಆಹ್ವಾನಿಸುತ್ತಾರೆ. ಆದರೆ ಆರ್ಥಿಕ ಪರಿಮಿತಿ, ಸ್ಥಳಿಯರ ಆಶಯಗಳು. ಬಾದರದಿನ್ನಿ ಅವರನ್ನು ಲಂಡನ್ನಿಗೆ ಹೋಗಗೊಡದೇ ಇಲ್ಲಿಯೇ ಉಳಿಯುವಂತೆ ಮಾಡಿದುದರ ಕಾರಣವಾಗಿ ಕರ್ನಾಟಕದ ಹಲವಾರು ರಂಗ ತಂಡಗಳು ರಂಗ ಪ್ರದರ್ಶನಗಳ ಸಾಹಸ ಮಾಡಲು ಕಾರಣವಾದವು.

ಇವರ ಎರಡನೇ ಸಾಹಸಕ್ಕೆ ಮಧ್ಯ ಕರ್ನಾಟಕದ ದಾವಣಗೆರೆ ಕಾರಣವಾಯಿತು. ಕರ್ನಾಟಕದಲ್ಲಿ ಅಂದು ದಾವಣಗೆರೆಯಲ್ಲಿ 'ಪ್ರತಿಮಾ ಸಭಾ' ತುಂಬ ಹೆಸರು ಮಾಡಿದ ನಾಟಕ ಸಂಸ್ಥೆ. ಸಂಸ್ಥೆಯ ಶ್ರೀ ಎಂ.ಜಿ. ಈಶ್ವರಪ್ಪ, ಶ್ರೀ ಹಾಲಪ್ಪ ಮತ್ತು ಶ್ರೀ ಬಕ್ಕಪ್ಪ ಮುಂತಾದ ಗೆಳೆಯರು ಹ್ಯಾಮ್ಲೆಟ್ ನಾಟಕ ನೋಡಲು ಬಂದು ಆ ನಾಟಕವನ್ನು ಮೆಚ್ಚಿಕೊಂಡು ಬಾದರದಿನ್ನಿ ಅವರಿಗೆ ದಾವಣಗೆರೆಗೆ ಬರುವಂತೆ ಆಹ್ವಾನ ಕೊಡುತ್ತಾರೆ. ಹ್ಯಾಮ್ಲೆಟ್ ನಾಟಕ ನೋಡಿದ ಕರ್ನಾಟಕದ ವಿವಿಧ ಪ್ರದೇಶಗಳ ಬಹಳಷ್ಟು ರಂಗಾಸಕ್ತರು ನಾಟಕವನ್ನು ನೋಡಿ ಆಗಲೇ ನಿರ್ದೇಶಕರಾದ ಅಶೋಕ ಬಾದರದಿನ್ನಿ ಅವರನ್ನು ಕಂಡು ತಮ್ಮಲ್ಲಿಗೆ ಬಂದು ನಾಟಕ ನಿರ್ದೇಶಿಸಿ ಕೊಡುವಂತೆ ಆಹ್ವಾನವನ್ನು ಕೊಟ್ಟು ಹೋಗಿರುತ್ತಾರೆ. ಬಹಳಷ್ಟು ಕಡೆಯಿಂದ ಬಂದ ಇಂತಹ ಆಹ್ವಾನಗಳನ್ನು ತೂಗಿ ನೋಡಿ ಬಾದರದಿನ್ನಿ ಅವರು ದಾವಣಗೆರೆಯ ಪ್ರತಿಮಾ ಸಭಾಕ್ಕೆ ನಾಟಕ ನಿರ್ದೇಶಿಸಲು ಅಣಿಯಾಗುತ್ತಾರೆ. ದಾವಣಗೆರೆಯ ರಂಗಾಸಕ್ತರು ಆಗಲೇ ಸಾಹಿತ್ಯಿಕ ರಂಗದಲ್ಲಿ ಬಹಳಷ್ಟು ಚರ್ಚೆಗೆ ಒಳಗಾದ ಲಂಕೇಶ ಅವರ 'ಸಂಕ್ರಾಂತಿ'ನಾಟಕವನ್ನು ಆಯ್ಕೆ ಮಾಡಿಕೊಳುತ್ತಾರೆ. ಹನ್ನೆರಡನೇ ಶತಮಾನದ ಬಸವಣ್ಣನವರು ಮತ್ತು ಕಲ್ಯಾಣ ಕ್ರಾಂತಿಯ ಕುರಿತಾದ ಈ ನಾಟಕ ಅಂದು ಬಹಳಷ್ಟು ಚರ್ಚೆಗೆ ಒಳಪಟ್ಟು ಗಟ್ಟಿ ನಾಟಕ ಎಂದು ಹೆಸರು ಮಾಡಿರುತ್ತದೆ. ಈ ಸಂದರ್ಭದಲ್ಲಿ ನಾಟಕದ ಆಶಯ, ಅಭಿವ್ಯಕ್ತಿ, ರಂಗರೂಪ, ಪ್ರದರ್ಶನ ಶೈಲಿ ಕುರಿತಂತೆ ಲೇಖಕರೊಂದಿಗೆ ಚರ್ಚಿಸಲು ನಿರ್ದೇಶಕ ಅಶೋಕ ಅವರು ಲೇಖಕ ಲಂಕೇಶ ಅವರನ್ನು ಕಾಣುತ್ತಾರೆ. ಆಗ ಲಂಕೇಶರು ಹಾಸ್ಯಮಿಶ್ರಿತ ಕೀಟಲೆಯ ಧ್ವನಿಯಲ್ಲಿ 'ಏನಪಾ, ನಿರ್ದೇಶನ ಮಾಡುವ ನಾಟಕಗಳ ಲೇಖಕರೊಂದಿಗೇ ಚರ್ಚಿಸಿ ನಾಟಕ ಮಾಡತಿಯಾ ನೀನು.. . ., ಹಾಗಾದರೆ ಹ್ಯಾಮ್ಲೆಟ್ ಮಾಡಿದೆಯಲ್ಲಾ.–

ಶೇಕ್ಸಪೀಯರ್‌ಜೊತೆ ಮಾತಾಡಿದ್ದೇನು..!? ಶೇಕ್ಸಪೀಯರ್ ಏನೇನು ಹೇಳಿದ ಎಂದು ಕಿಚಾಯಿಸಿ.– ನಾಟಕದ ರೆಲೇವನ್ಸಿ ಕುರಿತು ಹಾಗೂ ನಾಟಕದ ಒಟ್ಟು ಆಶಯದ ಕುರಿತಂತೆ ಲೇಖಕನಾಗಿ ತಮ್ಮ ಅಭಿಪ್ರಾಯವನ್ನು ಹಾಗೂ ಪ್ರೇಕ್ಷಕನಾದವನಿಗೆ ನಾಟಕವು ಯಾವ ಸಂದೇಶವನ್ನು ಮುಟ್ಟಿಸಬೇಕು ಎನ್ನುವ ಇತ್ಯಾದಿ ಅನೇಕ ಅಮೂಲ್ಯ ಸಲಹೆಗಳನ್ನು ಲಂಕೇಶ ಅವರು ಕೊಟ್ಟರೆಂದು ಅಶೋಕ ನೆನೆಯುತ್ತಾರೆ. ಅಂತೂ ಸಂಕ್ರಾಂತಿ ನಾಟಕವೂ ಪ್ರತಿಮಾ ಸಭಾಕ್ಕೆ ಸಿದ್ಧವಾಗತೊಡಗುತ್ತದೆ. ಸಂಜೆ ನಾಟಕದ ತಾಲೀಮು ಹಗಲು ಯಥಾ ಪ್ರಕಾರ ದಾವಣಗೆರೆಯ ಎ.ವ್ಹಿ.ಕೆ. ಮಹಿಳಾ ಕಾಲೇಜು ಮತ್ತು ಡಿ.ಆರ್.ಕೆ ಪದವಿ ಕಾಲೇಜುಗಳಲ್ಲಿ ಎರಡೆರಡು ರಂಗ ಶಿಬಿರಗಳು. ಈ ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ ಎರಡು ಏಕಾಂಕ ನಾಟಕಗಳು ಮತ್ತು ಪ್ರತಿಮಾ ಸಭಾದ ಸಂಕ್ರಾಂತಿ ಹೀಗೆ ಒಟ್ಟು ಮೂರು ನಾಟಕಗಳು ಸಿದ್ಧವಾಗಿ ಯಶಸ್ವಿಯಾಗಿ ಪ್ರದರ್ಶಿತವಾಗುತ್ತವೆ. ಕಾಲೇಜು ನಾಟಕಗಳು ವಿದ್ಯಾರ್ಥಿಗಳಿಗೆ ಹೊಸ ವೇದಿಕೆಯೊಂದನ್ನು ಸಿದ್ಧಮಾಡಿಕೊಟ್ಟು, ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡುವದರೊಂದಿಗೆ ಪೂರ್ಣರಂಗ ಕಲ್ಪನೆಯನ್ನು ಮೂಡಿಸಲು ವಿದ್ಯಾರ್ಥಿಗಳಿಗೆ ನೆರವಾದರೆ, ಸಂಕ್ರಾಂತಿ ನಾಟಕವು ಚರ್ಚೆಯ ಎಲ್ಲ ಆಯಾಮಗಳನ್ನು ಮೀರಿ ಹಿಂದೆ ಒಂದೆರಡು ಕಡೆ ಪ್ರದರ್ಶಿತವಾದ ಆ ನಾಟಕದ ಹೊಸ ಮಗ್ಗುಲನ್ನು, ನವೀನ ನೋಟ ಒಂದನ್ನು ಸೃಷ್ಟಿ ಮಾಡಿಕೊಡುವಲ್ಲಿ ಯಶಸ್ವಿಯಾಗಿತ್ತು.

**ಅಭಿನಯ ತರಂಗ ರವಿವಾರದ ರಂಗ ಶಾಲೆ**

ಅಷ್ಟರಲ್ಲಿಯೇ ಬಾದರದಿನ್ನಿ ಅವರ ಉತ್ಸಾಹ, ಪ್ರತಿಭೆ, ಹಿಡಿದ ಕೆಲಸ ಬಿಡದ ಛಲ ಇವುಗಳನ್ನು ಕಂಡ ಶ್ರೀನಿವಾಸ ತಾವರಗೇರಿ ಅವರ ಸಂಪರ್ಕದ ಸ್ನೇಹಿತರು, ಕೆಲವು ಪ್ರಮುಖರು ಎಲ್ಲರೂ ಸೇರಿ ಬೆಂಗಳೂರಿನಲ್ಲಿ ಅಭಿನಯ, ನಿರ್ದೇಶನ, ನೇಪಥ್ಯದ ಕಲಿಕೆಗಾಗಿ ರವಿವಾರದ ಒಂದು ರಂಗ ಶಾಲೆಯನ್ನು ಆರಂಭಿಸಬೇಕು ಎನ್ನುವ ಹೊಸ ಯೋಜನೆ ಹುಟ್ಟಿಕೊಳ್ಳುತ್ತದೆ. ಬೀದಿ ನಾಟಕಗಳ ಜನಕ, ಶ್ರೇಷ್ಠ ಸಂಘಟಕ ಎಂದು ಹೆಸರುವಾಸಿಯಾಗಿದ್ದ ದಿ.ಎ.ಎಸ್. ಮೂರ್ತಿ ಮತ್ತು ವಿಮರ್ಶಕಿ ಶ್ರೀಮತಿ ವಿಜಯಾ ಅವರ ಪ್ರೇರಣೆ ಸಂಗೀತ ಶ್ರೇಷ್ಠ ರಾಜೀವ ತಾರಾನಾಥ, ಖ್ಯಾತ ಚಲನಚಿತ್ರ ನಿರ್ದೇಶಕ ದಿ.ಪುಟ್ಟಣ್ಣ ಕಣಗಾಲ್, ನಿರ್ಮಾಪಕರಾದ ರಾಶಿ ಸಹೋದರರು ಈ ಎಲ್ಲ ದಿಗ್ಗಜರು ಸೇರಿ ಅಶೋಕ ಅವರನ್ನು ಸೇರಿಸಿಕೊಂಡು ಅವರನ್ನೇ ಪ್ರಾಚಾರ್ಯರನ್ನಾಗಿಸಿ 'ಅಭಿನಯ ತರಂಗ' ಎನ್ನುವ ರವಿವಾರದ ರಂಗ ತರಬೇತಿ ಶಾಲೆಯನ್ನು ೧೯೮೧ರಲ್ಲಿ ಬೆಂಗಳೂರಿನಲ್ಲಿ ಆರಂಭಿಸುತ್ತಾರೆ. ಈ ಶಾಲೆಯ ಮೂಲಕ ಅಂದು ಹೊರ ಬಂದ ಹಲವಾರು ಪ್ರತಿಭೆಗಳು ಇಂದು ರಂಗಭೂಮಿಯೊಂದಿಗೆ ಹಿರಿ–ಕಿರಿ ತೆರೆಯಲ್ಲಿ ರಾರಾಜಿಸುತ್ತಿದ್ದಾರೆ. ನಿರ್ದೇಶಕ

ಬಿ.ಸುರೇಶ, ಪ್ರಕಾಶ, ಮುಂತಾದ ಇವರೆಲ್ಲ ಈ ಶಾಲೆಯ ಪ್ರಾರಂಭದ ನನ್ನ ವಿದ್ಯಾರ್ಥಿಗಳು ಎಂದು ಹೆಮ್ಮೆಯಿಂದ ಬೀಗುತ್ತಾರೆ ಅಶೋಕ. ಅಭಿನಯ ತರಂಗದ ಗುರುತರ ಜವಾಬ್ದಾರಿ ಇದ್ದರೂ ಕರ್ನಾಟಕಾದ್ಯಾಂತ ರಂಗ ಶಿಬಿರ ಹಾಗೂ ನಾಟಕಗಳ ನಿರ್ದೇಶನ ಸಾಗಿಯೇ ಇರುತ್ತದೆ. ದಾವಣಗೆರೆಯ ನಂತರ ಬಾದರದಿನ್ನಿ ಅವರು ಸಕ್ಕರೆಯ ನಾಡು ಮಂಡ್ಯಕ್ಕೆ ಲಗ್ಗೆ ಹಾಕುತ್ತಾರೆ. ಶಿಕ್ಷಣ ಪ್ರೇಮಿ ದಿ. ಕೆ.ವಿ. ಶಂಕರೇಗೌಡ್ರ ಪ್ರೋತ್ಸಾಹ, ರಂಗ ಕರ್ಮಿ ಜಯಪ್ರಕಾಶ ಗೌಡರ ತಂಡ ಮಂಡ್ಯದಲ್ಲಿ ನಾಟಕ ನಿರ್ದೇಶನದಲ್ಲಿ ತೊಡಗಿ ಅಲ್ಲಿಯೂ ಅದೇ ಚರ್ಚಿತ ಪಿ.ಲಂಕೇಶರ ಸಂಕ್ರಾಂತಿ ನಾಟಕವನ್ನು ಇನ್ನೊಂದು ಶೈಲಿಯಲ್ಲಿ ಹಲವಾರು ಗಿಮ್ಮಿಕ್ಕುಗಳೊಂದಿಗೆ ನಿರ್ದೇಶಿಸಿ ಯಶಸ್ವಿಗೊಳಿಸುತ್ತಾರೆ. ಅಶೋಕ ಅವರ ದಿನಚರಿಯೇ ಹಾಗಿತ್ತೊ ಏನೋ, ಹೋದಲ್ಲೆಲ್ಲಾ ಸಂಜೆ ನಾಟಕದ ತಾಲೀಮು, ಹಗಲು ರಂಗ ಶಿಬಿರಗಳು. ಮಂಡ್ಯದಲ್ಲಿಯೂ ಸಂಜೆ ನಾಟಕದ ತಾಲೀಮ ಆದರೇ ಹಗಲು ಅಲ್ಲಿಂದ ಬೆಂಗಳೂರಿಗೆ ಬಂದು ರಂಗ ಶಿಬಿರಗಳನ್ನು ನಡೆಸಿಕೊಡುತ್ತಾರೆ. ಜೊತೆಗೆ ಅಭಿನಯ ತರಂಗದ ಅಭಿನಯ ಚಟುವಟಿಕೆಗಳು. ಹೀಗೆ ಎಡೆಬಿಡದೆ ಕ್ರಿಯಾಶೀಲರಾಗಿ ರಂಗ ಚಟುವಟಿಕೆಗಳಲ್ಲಿ ತೊಡಗಿದ್ದ ಅಶೋಕ ಬಾದರದಿನ್ನಿ ಅವರು ಅಭಿನಯ ತರಂಗ ರವಿವಾರದ ಶಾಲೆಯಲ್ಲಿ ಅಂದಿನ ವಿದ್ಯಾರ್ಥಿ ಆಗಿದ್ದ ಬಿ.ಸುರೇಶ ಅವರು ನಾಟಕ ರೂಪದಲ್ಲಿ ಬರೆದಿದ್ದ ಡಾ. ಬೆಸಗರಹಳ್ಳಿ ರಾಮಣ್ಣ ಅವರ 'ಕೋತಿ ಕತೆ'ಯನ್ನು ಅಭಿನಯ ತರಂಗಕ್ಕಾಗಿ ನಿರ್ದೇಶಿಸುತ್ತಾರೆ. ಇದೇ ಸಂದರ್ಭದಲ್ಲಿ ಏಕಕಾಲಕ್ಕೆ ಎರಡೆರಡು ಕಡೆ ನಾಟಕಗಳ ನಿರ್ದೇಶನ, ಪ್ರದರ್ಶನ ಸಿದ್ಧತೆ, ಸಂಘಟನೆ ಸಾಮಾನ್ಯವೇ? ಅಲ್ಲೆಲ್ಲಾ ಕಲಾ ಲೋಕದ, ಮಾಯಾ ಲೋಕ ಸೃಷ್ಟಿಸುವ ಅಶೋಕ ಬಾದರದಿನ್ನಿ ಅವರ ಇಚ್ಛಾ ಶಕ್ತಿಯ, ಸೃಜನಶೀಲತೆಯ ದರ್ಶನವಾಗುತ್ತಿತ್ತು.

**ಮಠಮಾನ್ಯಗಳಲ್ಲಿ ನಾಟಕಗಳು**

ಇವರ ಕಾರ್ಯ ಚಟುವಟಿಕೆಗಳನ್ನು ಕೇಳಿ ತಿಳಿದಿದ್ದ ಹಾಗೂ ಎರಡು ವಿಭಿನ್ನ ಶೈಲಿಯಲ್ಲಿ ಇವರು ನಿರ್ದೇಶಿಸಿದ ಸಂಕ್ರಾಂತಿ ನಾಟಕ ನೋಡಿದ ಸಿರಿಗೆರೆಯ ತರಳಬಾಳು ಹಿರಿಯ ಶ್ರೀಗಳು ಅಶೋಕ ಅವರ ವಿಚಾರಧಾರೆಗಳಿಂದ ಆಕರ್ಷಿತರಾಗಿ ಸಿರಿಗೆರೆಗೆ ೧೯೮೧ರಲ್ಲಿ ಆಹ್ವಾನಿಸುತ್ತಾರೆ. ಅಂತರರಾಷ್ಟ್ರೀಯ ಖ್ಯಾತಿಯ ಸಿರಿಗೆರೆಯ ಶ್ರೀತರಳಬಾಳು ಬೃಹನ್‌ಮಠದಲ್ಲಿ ಒಂದು ರಂಗ ತರಬೇತಿ ಶಿಬಿರ. ಶಿಬಿರದ ನಾಟಕವಾಗಿ ಅದೇ ಹಿರಿಯ ಶ್ರೀಗಳೇ ರಚಿಸಿದ ಹನ್ನೆರಡನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ಹಾಗೂ ಅಕ್ಕಮಹಾದೇವಿ ಅವರ ಕುರಿತಂತೆ ರಚಿಸಲ್ಪಟ್ಟ 'ಮರಣವೇ ಮಹಾ ನವಮಿ' ಮತ್ತು 'ಶರಣ ಸತಿ ಲಿಂಗ ಪತಿ' ಧಾರ್ಮಿಕ ಮನೋಭಾವದ ನಾಟಕಗಳನ್ನು ನಿರ್ದೇಶಿಸುತ್ತಾರೆ. ಅಂದಿನ ಹಿರಿಯ ಸ್ವಾಮೀಜಿಗಳಾದ ಶ್ರೀ ಶಿವಕುಮಾರ

ಶಿವಾಚಾರ್ಯರು ರಚಿಸಿದ ಈ ನಾಟಕಗಳು ಸಾಮಾಜಿಕ ದೃಷ್ಟಿಕೋನದಲ್ಲಿ, ಧಾರ್ಮಿಕ ಪಾತಳಿಯ ಮೇಲೆ ಭಕ್ತರಿಗೆ ಹೊಸ ನೋಟ ಒಂದನ್ನು ಒದಗಿಸಿಕೊಟ್ಟು ಅವರನ್ನು ಆಧುನಿಕ ಸಾಮಾಜಿಕ ಚಿಂತನೆಗೆ ಹಚ್ಚುವ ಪರಿಣಾಮಕಾರಿ ಆದ ಹವ್ಯಾಸಿ ರಂಗ ಶೈಲಿಯಲ್ಲಿ ವಿನೂತವಾಗಿ ಈ ನಾಟಕಗಳನ್ನು ನಿರ್ದೇಶಿಸಿರುತ್ತಾರೆ. ಜೊತೆ ಜೊತೆಗೆ ಶ್ರೀ ಮಠದಂತಹ ಧಾರ್ಮಿಕ ಮನೋಭಾವದ ವಾತಾವರಣದಲ್ಲಿ ಆಧುನಿಕ ಸಾಮಾಜಿಕ ಚಿಂತನೆಯ ಗುಡಿ ಗುಂಡಾರ ದೇವರುಗಳ ಶೋಷಣೆಯ ವೈಭವಿಕರಣವನ್ನು ಪ್ರಶ್ನಿಸುವ, ಅಂದು ಬಹು ಚರ್ಚಿತವಾಗಿ ಪ್ರಸಿದ್ಧವಾಗಿದ್ದ ದಿ. ಬಿ.ವ್ಹಿ. ವೈಕುಂಠರಾಜು ಅವರ 'ಉದ್ಭವ' ನಾಟಕವೂ ಕೂಡಾ ಈ ಶ್ರೀಮಠದ ತಂಡದಿಂದಲ್ಲೇ ಪ್ರದರ್ಶಿಸಲ್ಪಡುತ್ತದೆ. ಹೀಗೆ ಧಾರ್ಮಿಕ ಕ್ಷೇತ್ರ ಒಂದರ ಶ್ರೀಮಠದಲ್ಲಿ ಆಧುನಿಕ ನಾಟಕಗಳ ಹವ್ಯಾಸಿ ರಂಗ ಪ್ರಯೋಗಳನ್ನು ಕೈಗೊಂಡು, ಮಠಗಳ ಧಾರ್ಮಿಕ ಕಾರ್ಯ ಚಟುವಟಿಕೆಗಳಲ್ಲಿ ರಂಗ ಚಟುವಟಿಕೆಗಳನ್ನು ಅಳವಡಿಸುವ ಮೂಲಕ ಹೊಸ ಸಾಮಾಜಿಕ ಬದಲಾವಣೆಗಳ ಧೋರಣೆಯೊಂದನ್ನು ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಪರಿಣಾಮಕಾರಿಯಾಗಿ ಆದ ದೃಶ್ಯ ಮಾಧ್ಯಮವಾದ ರಂಗ ರೂಪದ ಮೂಲಕ ತೋರಿಸಿಕೊಟ್ಟ ಹೆಗ್ಗಳಿಕೆ ಅಶೋಕ ಬಾದರದಿನ್ನಿ ಅವರದ್ದು ಎನ್ನಬಹುದು. ಜೊತೆಗೆ ಇಂಥಹ ಧಾರ್ಮಿಕ ಕ್ಷೇತ್ರಗಳಲ್ಲಿ ಹೊಸ ರೂಪದ ಹವ್ಯಾಸಿ ರಂಗ ಪ್ರಯೋಗಗಳನ್ನು ಕೈಗೊಳ್ಳುವ ಸಾಹಸದ ಹೊಸ ಹೆಜ್ಜೆಗಳ ಮೂಲಕ ಬಸವಣ್ಣನವರು ಬಯಸಿದ ನವ ಸಮಾಜ ನಿರ್ಮಾಣದ ಹೊಸ ರೂಪದ ಆಶಯವನ್ನು ಇಂತಹ ರಂಗ ಪ್ರಯೋಗಗಳ ಮೂಲಕ ಕೈಗೊಂಡ ಶ್ರೀಕಾರದ ಕ್ರೆಡಿಟ್ ಕೂಡ ಅಶೋಕ ಅವರಿಗೆ ಸಲ್ಲುತ್ತದೆ. ೧೯೮೬ರಿಂದ ಆದಿಯಾಗಿ ಈಗಿನವರೆಗೂ ಕರ್ನಾಟಕದ ಪ್ರಮುಖ ಸ್ಥಳಗಳಲ್ಲಿ ಇರುವ ವಿವಿಧ ಇಂತಹ ಶ್ರೀ ಮಠಗಳಲ್ಲಿ ಇವರ ನಾಟಕಗಳ ಮರು ಪ್ರದರ್ಶನ ಮತ್ತು ನಿರ್ಮಾಣಗಳು ಸಾಗಿಯೇ ಇರುವದನ್ನು ಇಂದಿಗೂ ಕಾಣುತ್ತೇವೆ.

**ವಿಜಾಪುರ ತವರು ಜಿಲ್ಲೆಯಲ್ಲಿ**

ಎನ್.ಎಸ್.ಡಿ ಪದವಿ ಮುಗಿಸಿ ಬೆಂಗಳೂರು, ಮಂಡ್ಯ,ದಾವಣಗೆರೆ ಹೀಗೆ ಹೊರ ಜಿಲ್ಲೆಗಳಲ್ಲಿ ಯಶಸ್ವಿ ರಂಗಪ್ರದರ್ಶನ ನೀಡಿ. ಮತ್ತೆ ಬೇರೆಕಡೆಗಳಲ್ಲಿಯೂ ಮೇರೆ ಮೀರಿ ಆಹ್ವಾನಗಳೂ ಇದ್ದಾಗಲೂ ತವರು ಜಿಲ್ಲೆಯ ಮಿಡಿತ ಅಶೋಕ ಅವರನ್ನು ವಿಜಾಪುರಕ್ಕೆ ಕರೆತರುತ್ತದೆ. ಪದವಿ ಮುಗಿಸಿ ಬಂದ ವರ್ಷದಲ್ಲಿಯೇ ತಮ್ಮದೇ ಆಗಿದ್ದ ಸಂಸ್ಥೆ ಕಲಾ ಮಾಧ್ಯಮಕ್ಕಾಗಿ ಸೋಫೋಕ್ಲಿಸ್ ಮಹಾಕವಿಯ ಈಡಿಪಸ್(ಕನ್ನಡ ಅನುವಾದ : ಪಿ.ಲಂಕೇಶ) ಹಾಗೂ ಚಂಪಾ ಅವರ ಗೋಕರ್ಣದ ಗೌಡಶಾನಿ ನಾಟಕವನ್ನು ಈ ಮೊದಲೆ ಎನ್.ಎಸ್.ಡಿ ಪದವಿ ಸಂದರ್ಭದಲ್ಲಿ ನಿರ್ದೇಶಿಸಿ ಯಶಸ್ವಿಯಾಗಿದ್ದರೂ ಈಗ ಮತ್ತೆ ಅದೇ ನಾಟಕವನ್ನು ಹೊಸ ನಾವಿನ್ಯತೆ

ಬಳಸಿ ಮತ್ತೊಮ್ಮೆ ಸಿದ್ಧಪಡಿಸುತ್ತಾರೆ. ಈ ಎರಡು ನಾಟಕಗಳು ಅಂದಿನ ಹೈದರಾಬಾದ ದೂರದರ್ಶನದಲ್ಲಿ ಹಲವಾರು ಬಾರಿ ಪ್ರದರ್ಶಿತವಾಗಿ ಮತ್ತು ನಾಡಿನ ಬಹುತೇಕ ಪ್ರದೇಶಗಳಲ್ಲಿ ಮರು ಪ್ರದರ್ಶನಕಂಡು ಯಶಸ್ವಿಯಾದವು. ಈ ನಾಟಕಗಳು ಅಚ್ಚ ಗ್ರಾಮಾಂತರ ಪ್ರದೇಶಗಳಲ್ಲೂ ಪ್ರದರ್ಶಿತವಾಗಿ ಜನಮನ್ನಣೆ ಗಳಿಸಿರುವುದು ಕಾಣಬಹುದಾಗಿದೆ.

ಅದೇ ಸಂದರ್ಭಗಳಲ್ಲಿ ಬಾಗಲಕೋಟೆಯಲ್ಲಿ ವಾಸುದೇವ ವಿನೋದಿನಿ ನಾಟ್ಯ ಸಭೆ ತುಂಬ ಹೆಸರು ಮಾಡಿ ನಿಂತು ಹೋಗಿತ್ತು. ಅಲ್ಲಿಯ ರಂಗಾಸಕ್ತರು ಹಾಗೂ ಅಧ್ಯಾಪಕ ಬಳಗದ ಸಹಯೋಗದಲ್ಲಿ 'ಸೃಜನ ವೇದಿಕೆ' ಎನ್ನುವ ಹೊಸ ಸಂಸ್ಥೆ ಸೃಷ್ಟಿಯಾಗಿ ಈಗಾಗಲೇ ಒಂದೆರಡು ನಾಟಕಗಳನ್ನು ಪ್ರದರ್ಶಿಸಿ ಅದು ಪ್ರಸಿದ್ಧವಾಗಿತ್ತು. ಈ ಸಂಸ್ಥೆಗಾಗಿ ಒಂದು ತಿಂಗಳ ರಂಗಶಿಬಿರ ಹಾಗೂ ಅದರ ಅಂಗವಾಗಿ ಶೆಕ್ಸಪೀಯರ್ ಮಹಾಕವಿಯ ಮ್ಯಾಕಬೆಥ್ ನಾಟಕವನ್ನು ಸರಳ ರಂಗ ಶೈಲಿಯಲ್ಲಿ ನಿರ್ದೇಶಿಸುತ್ತಾರೆ. ಈ ನಾಟಕವೂ ಕೂಡ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಮರು ಪ್ರದರ್ಶನ ಕಂಡು ಅಶೋಕ ಅವರ ಹೆಸರನ್ನು ಮನೆ ಮಾತಾಗಿಸುತ್ತದೆ.

**ತುಘಲಕ್**

ಸಾಮಾನ್ಯವಾಗಿ ಬೆಂಗಳೂರಿನ ಎಲ್ಲ ರಂಗ ತಂಡಗಳ ನಾಟಕಗಳ ಮರುಪ್ರದರ್ಶನಗಳನ್ನು ಏರ್ಪಡಿಸಿ, ಹೊಸ ಅಲೆಯ ನಾಟಕಗಳ ರಸರುಚಿಯನ್ನು ಉಣಬಡಿಸಿ, ತನ್ನಿಂದಲೂ ಸ್ವಂತ ನಾಟಕಗಳನ್ನು ಪ್ರದರ್ಶಿಸಿ ಆಗಲೇ ವಿಜಾಪುರ ಜಿಲ್ಲೆಯಿಂದ ಹಿಡಿದು ರಾಜಧಾನಿಯವರೆಗೂ ಹೆಸರು ಮಾಡಿದ್ದ ಇಲಕಲ್ಲಿನ ಸ್ನೇಹರಂಗಕ್ಕಾಗಿ ಇದೇ ವೇಳೆ ಮೂರುವಾರದ ರಂಗಶಿಬಿರ ತರಬೇತಿಯನ್ನು ಆಯೋಜಿಸುತ್ತಾರೆ. ಶಿಬಿರದ ಅಂಗವಾಗಿ ಯಾವ ನಾಟಕವನ್ನು ಆಯ್ಕೆ ಮಾಡಬೇಕು ಎನ್ನುವ ಚರ್ಚೆ ಒಂದು ವಾರದ ತನಕ ಸಾಗುತ್ತದೆ. ಕನ್ನಡ ರಂಗಭೂಮಿಯಲ್ಲಿ ಗಟ್ಟಿ ಕಾಳು, ನಿರ್ದೇಶನಕ್ಕೂ ಸವಾಲು, ಆ ನಾಟಕ ಮಾಡುವುದಾದರೇ ಯಾವುದಾದರೊಂದು ಅಡೆ ತಡೆ ಇಲ್ಲವೇ ಅಪಶಕುನ ಖಾಯಂ ಎಂದು ಹೀಗೆ ಚಿತ್ರ ವಿಚಿತ್ರ ಅಡ್ಡಡ್ಡವಾಗಿ ಹೆಸರಾಗಿದ್ದ ಗಿರಿಶ್ ಕಾರ್ನಡ್‌ರ 'ತುಘಲಕ' ನಾಟಕವನ್ನು ಕೇವಲ ಹನ್ನೆರಡು ದಿನಗಳಲ್ಲಿ ಸಿದ್ಧಪಡಿಸಿ ಪ್ರದರ್ಶಿಸುವ ಸವಾಲನ್ನು ಅಶೋಕ ಇಲ್ಲಿ ತೆಗೆದುಕೊಳ್ಳುತ್ತಾರೆ.

ಅದಕ್ಕಾಗಿಯೇ ಬಾದರದಿನ್ನಿ ಅವರನ್ನು ಛಲದಂಕ ಮಲ್ಲ, ಇಚ್ಛಾಶಕ್ತಿಯ ಪ್ರತಿಕ, ಅಪ್ಪಟ ಅಪರಂಜಿ, ಹಿಡಿದ ಕೆಲಸ ಬಿಡದ ಛಲವಾದಿ ಮುಂತಾದ ವಿಶೇಷಣಗಳಿಂದ ಕರೆಯುವದು. ಇಲಕಲ್ಲು ಆಗಿನ ವಿಜಾಪುರ ಜಿಲ್ಲೆಯ ಕೊನೆಯ

ಪಟ್ಟಣ. ಅಕ್ಕಪಕ್ಕದಲ್ಲಿ ಆಗಿನ ಧಾರವಾಡ ಹಾಗೂ ರಾಯಚೂರು ಜಿಲ್ಲೆಗಳು. ಹೀಗೆ ಅಕ್ಕಪಕ್ಕದ ಜಿಲ್ಲೆಗಳಿಂದ ನಾಟಕ ಶಿಬಿರದಲ್ಲಿ ಭಾಗಿಯಾಗಲು ಬಂದ ಶಿಕ್ಷಕ ಬಳಗ, ಹೊಸ ಹುಡುಗರ ಮೇಳ, ಇಲಕಲ್ಲಿನ ಪಡ್ಡೆಗಳು ಇವೆರೆಲ್ಲಾ ಒಟ್ಟುಗೂಡಿ ನಾಟಕದ ತಾಲೀಮು ಆರಂಭವಾಗುತ್ತದೆ. ಬೆಳ್ಳಿಗೆ ಆರಕ್ಕೆ ಯೋಗ, ಧ್ವನಿ ವ್ಯಾಯಾಮ, ಶಿಬಿರದ ದೈನಂದಿನ ಚಟುವಟಿಕೆಗಳು ಮಧ್ಯಾಹ್ನ ಧ್ವನಿಯ ಏರಿಳಿತಗಳು, ಸಂಭಾಷಣೆಯ ಶೈಲಿ, ನಾಟಕಗಳ ಆಶಯಗಳ ಕುರಿತಂತೆ ಚರ್ಚೆ, ಸಂಜೆ ಮತ್ತು ರಾತ್ರಿ ನಾಟಕದ ತಾಲೀಮು. ಹೀಗೆ ದಿನವಿಡಿ ರಂಗ ಚಟುವಟಿಕೆಗಳು. ಪಾತ್ರಗಳ ಆಯ್ಕೆಯಲ್ಲಿ ಹೆಚ್ಚು ಚೂಜಿಯಾದ ಬಾದರದಿನ್ನಿಯವರು ದಿ.ಸಿ.ಆರ್.ಸಿಂಹ ಅವರು ಅಭಿನಯಿಸಿದ ಬೆಂಗಳೂರಿನ 'ನಟರಂಗ' ತಂಡದ ತುಘಲಕ್ ನಾಟಕವನ್ನು ಮೀರಿಸುವಂತೆ ಈ ನಾಟಕ ಸಿದ್ಧವಾಗಬೇಕು ಎನ್ನುವ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತಾರೆ. ಸರಳ ರಂಗ ಸಜ್ಜಿಕೆ, ನವೀನ ರಂಗ ವಿನ್ಯಾಸ.- ಹೆಚ್ಚು ಖರ್ಚು ಇಲ್ಲದ ವೇಷ ಭೂಷಣಗಳ ಮೂಲಕ ಅತ್ಯಂತ ಕಡಿಮೆ ಖರ್ಚಿನಲ್ಲಿ ನಾಟಕ ಸಿದ್ದಪಡಿಸುವ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಲು ಅಶೋಕ ಅವರು ಸಿದ್ದರಾಗುತ್ತಾರೆ. ನಾಟಕಕ್ಕಾಗಿ ಅವರ ಪ್ರತಿ ಬೇಕು- ಬೇಡಿಕೆಗಳನ್ನು ಪೂರೈಸಲು ಸಿದ್ಧವಾದ ಸ್ನೇಹರಂಗ ಬಳಗ ಅದರ ಸಂಸ್ಥಾಪಕ ಅಧ್ಯಕ್ಷನಾದ ಈ ಲೇಖಕ ಈ ನಾಟಕವನ್ನು ಸಿದ್ಧಪಡಿಸುವ ಸಂದರ್ಭದಲ್ಲಿಯೂ ಅಧ್ಯಕ್ಷನಾಗಿಯೇ ಇದ್ದುದ್ದು ಹಾಗೇ ಈಗ ಅವರದೇ ಆದ ಈ ವ್ಯಕ್ತಿಚಿತ್ರಣದ ಕೃತಿಯನ್ನು ಸಾರಸ್ವತ – ರಂಗ ಕ್ಷೇತ್ರಕ್ಕೆ ಅರ್ಪಿಸುತ್ತಿರುವುದು ಯೋಗಾಯೋಗ.

ಅಂತರ್‌ರಾಷ್ಟ್ರೀಯ ಖ್ಯಾತಿಯ ಸಂಗೀತ ವಿದುಷಿ ಪರವೀನ ಸುಲ್ತಾನ್ ಅವರ ಆಲಾಪ ನಾಟಕದ ಉದ್ದಕ್ಕೂ ಹಿನ್ನೆಲೆಯಲ್ಲಿ ಸುಸ್ವರವಾಗಿ ಮೂಡಿಬಂದು, ರಂಗ ವೇದಿಕೆಯ ಹಿಂದಿನ ರಂಗ ಪರದೆಯ ಮೇಲೆ ಚದುರಂಗದ ವಿನ್ಯಾಸ, ಆಗಸದಿಂದ ಇಳಿದು ಬಂದಂತೆ ಕಾಣುವ ಚಿಕ್ಕ ದೊಡ್ಡ ನಕ್ಷತ್ರಗಳ ಫಳಫಳಿಸುವಿಕೆ ಮತ್ತು ಕೆಲ ವಿಶಿಷ್ಟ ಗಿಮಿಕ್‌ಗಳಿಂದಾಗಿ.- ಹಾಗೂ ತುಘಲಕ್ ಪಾತ್ರಧಾರಿಯ ವಿಶಿಷ್ಟ ಆಂಗಿಕ ಮ್ಯಾನರಿಜ್ಮ್‌ಗಳಿಂದ, ಮುಖ ಭಾವ ಶೈಲಿಗಳಿಂದ ಹಾಗೂ ನಾಟಕಗಳ ಸನ್ನಿವೇಶಗಳಿಗೆ ಅನುವಾಗುವ ವಿಶಿಷ್ಟ ರೀತಿಯ ಬೆಳಕು ವಿನ್ಯಾಸ, ಸಂಭಾಷಣೆಯಲ್ಲಿ ಅಡಕವಾಗಿರುವ ಪಂಚಿಂಗ್ ಮತ್ತು ಹರಿತವಾದ ಧ್ವನಿ ಸಾಂದ್ರತೆಯಿಂದ ನಾಟಕವು ಪ್ರದರ್ಶನದಲ್ಲಿ ಅದ್ಭುತ ಯಶಸ್ಸುಗಳಿಸಿ, ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ಯಶಸ್ವಿ ಮರು ಪ್ರದರ್ಶನಗೊಂಡು ಅಶೋಕ ಅವರ ಹಿರಿಮೆಯ ಕೀರಿಟಕ್ಕೆ ಮತ್ತೊಂದು ಗರಿಯನ್ನು ಸೇರಿಸುತ್ತದೆ. ಕರ್ನಾಟಕ ನಾಟಕ ಅಕಾಡೆಮಿಯ ರಂಗ ಚೈತ್ರೋತ್ಸವದ ಅಂಗವಾಗಿ ತುಘಲಕ್ ನಾಟಕದ ಮರು ಪ್ರದರ್ಶನವು ಬೆಂಗಳೂರಿನ ರವಿಂದ್ರಕಲಾಕ್ಷೇತ್ರದಲ್ಲಿ ಏರ್ಪಾಡಾಗಿತ್ತು.

ವಿಜಾಪುರ ಜಿಲ್ಲೆ, ಅಶೋಕ ಬಾದರದಿನ್ನಿ ಅವರ ಹೆಸರು, ಬೆಂಗಳೂರಿನ ಎಲ್ಲ ರಂಗ ತಂಡಗಳ ಆಪ್ತತೆಯಿಂದ ಹೆಸರಾಗಿದ್ದ ಇಲಕಲ್ಲಿನ ಸ್ನೇಹರಂಗ ರಂಗ ತಂಡವು. ಇವೆಲ್ಲಕ್ಕೆ ಕಳಶವಿಟ್ಟಂತೆ ಅಲ್ಲಿಯವರೆಗೆ ಬೆಂಗಳೂರಿನ ನಟರಂಗವನ್ನು, ಶ್ರೀ ಸಿಂಹ ಅವರನ್ನು ಹೊರತುಪಡಿಸಿ ಬೇರೆಯವರು ತುಘಲಕ್ ನಾಟಕದ ರಂಗ ಪ್ರದರ್ಶನಕ್ಕೆ ಹಿಂಜರಿದದ್ದು, ಹಾಗೂ ರಂಗ ಪ್ರದರ್ಶನಕ್ಕೆ ಕಬ್ಬಿಣದ ಕಡಲೆ ಎಂದು ಎನಿಸಿಕೊಂಡಿದ್ದ ತುಘಲಕ ನಾಟಕವನ್ನು ಉತ್ತರ ಕರ್ನಾಟಕದ ಗ್ರಾಮೀಣ ರಂಗತಂಡವೊಂದು ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಪ್ರದರ್ಶಿಸುವದಕ್ಕೂ ಮತ್ತು ಆಗಲೇ ಈ ನಾಟಕವು ಹಲವಾರು ಮರು ಪ್ರದರ್ಶನ ಪಡೆದಿರುವದಕ್ಕೂ,- ಬಾಯಿಂದ ಬಾಯಿಗೆ.-ಮಾತಿನಿಂದ ಮಾತಿಗೆ.-ಹರಡಿದ ನಾಟಕದ ಕುರಿತ ಚರ್ವಿತ ಚರ್ವಣ ಮಾತುಗಳು.- ಅದರಲ್ಲೂ ನಿರ್ದೇಶನ ಮತ್ತು ತುಘಲಕ ಪಾತ್ರಧಾರಿಯ ವೈಖರಿಗಳು, ಮುಖ ಭಾವ ಶೈಲಿಯ ವಿಶಿಷ್ಟ ಚಿತ್ರಗಳೂ, ಆಗಲೇ ಬೇರೆ ಬೇರೆ ಪತ್ರಿಕಾ ವಿಮರ್ಶೆಗಳು ಅಚ್ಚಾಗಿ, ಗಮನ ಸೆಳೆದ ಕಾರಣ ಬೆಂಗಳೂರಿನ ಈ ಪ್ರದರ್ಶನಕ್ಕೆ ನಿರೀಕ್ಷೆ ಮೀರಿ ಅಲ್ಲಿ ಜನ ಸೇರಿ ಅಚ್ಚರಿಗೊಳಿಸಿತ್ತು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಕೆಳಗಿನ, ಮೇಲಿನ ಮಹಡಿ ತುಂಬಿ ತುಳುಕಿ, ಕಾಲು ಇಡಲು ಸ್ಥಳ ಇಲ್ಲದ ರೀತಿಯಲ್ಲಿ ನಿಂತು ನೋಡುವ ಜನ ಜಂಗುಳಿ ಅದರ ಮೇಲೆ ಪ್ರೇಕ್ಷಕ ಎರಡು ಕಾಲು ಘಂಟೆಯ ಈ ನಾಟಕವವನ್ನು ಉಸಿರು ಬಿಗಿಹಿಡಿದು ನೋಡುವಂತೆ ಈ ನಾಟಕ ಮೋಡಿ ಮಾಡಿತ್ತು. ರಂಗಾಸಕ್ತಿ ಹೊಂದಿದ ಹಲವಾರು ಖ್ಯಾತ ಚಿತ್ರ ನಟರು, ರಂಗದಿಗ್ಗಜರು ಬೆಂಗಳೂರಿನ ವಿವಿಧ ರಂಗತಂಡಗಳ ಪ್ರಮುಖರು ಕಲಾವಿದರು, ಪತ್ರಿಕಾ ವಿಮರ್ಶಕರಿಂದ ತುಂಬಿ ತುಳುಕುತ್ತಿದ್ದ ಕಲಾಕ್ಷೇತ್ರವು ಅಶೋಕ ಬಾದರದಿನ್ನಿ ಅವರ ರಾಜಧಾನಿಗರ ಹ್ಯಾಮ್ಲೆಟ್ ನಾಟಕದ ನಂತರದ ಇನ್ನೊಂದು ಗ್ರಾಮೀಣ ರಂಗತಂಡದಿಂದ ಮತ್ತೆ ಬೆಂಗಳೂರಿನಲ್ಲಿ ದಿಗ್ವಿಜಯದ ಪತಾಕೆಯನ್ನು ತುಘಲಕ ನಾಟಕದ ಪ್ರದರ್ಶನವು ಹಾರಿಸಿ ಅಶೋಕ ಅವರಿಗೆ ಹೆಚ್ಚಿನ ಹಿರಿಮೆ ಗರಿಮೆಯನ್ನು ತಂದುಕೊಟ್ಟಿತ್ತು.

ನಾಟಕ ಮುಗಿದಾಕ್ಷಣ ತುಘಲಕ ಪಾತ್ರ ಎಂದರೆ ಸಿ.ಆರ್.ಸಿಂಹ ಅವರನ್ನು ಬಿಟ್ಟರೆ ಬೇರೆ ಇಲ್ಲವೇ ಇಲ್ಲ ಎನ್ನುವ ಮಾತನ್ನು ಅಂದು ಸ್ವತ: ಸಿ.ಆರ್.ಸಿಂಹ ಅವರೇ ಆ ಕ್ಷಣದಲ್ಲಿ ವೇದಿಕೆಯ ಮೇಲೆರಿ ಬಂದು ತುಘಲಕ ಪಾತ್ರಧಾರಿಯಾಗಿದ್ದ ಆಗ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ ಶ್ರೀ ಮಹಮ್ಮದ ಹನಿಫ್ ಖಾಜಿ ಅವರನ್ನು ಬಿಗಿದಪ್ಪಿ ತುಘಲಕ್ ಎಂದರೆ ಸಿಂಹ ಎಂದುಕೊಂಡಿದ ನನ್ನ ಬಿಮ್ಮನ್ನು ಇಂದು ನೀವು ಮುರಿದಿರಿ ಎಂದು ಸಂತೋಷದಿಂದ ಉದ್ಗಾರ ತೆಗೆದಿದ್ದು ಅಂದು ಅಲ್ಲಿ ಕೂಡಿದ್ದ ರಂಗ ಪ್ರಮುಖರೆ ನಡೆದ ಘಟನೆಗೆ ಸಾಕ್ಷಿಯಾಗಿದ್ದರು. ಹಾಗೆಯೇ

ತುಘಲಕ ನಾಟಕದ ಬೆಂಗಳೂರಿನ ಪ್ರದರ್ಶನದ ವಿಮರ್ಶೆಗಳು, ತುಘಲಕ್ ಪಾತ್ರಧಾರಿಗಳ ವಿಶಿಷ್ಟ ಛಾಯಾ ಚಿತ್ರಗಳು ಮತ್ತು ಸ್ನೇಹರಂಗ ತಂಡದ ಶ್ರೀ ಅಶೋಕ ಬಾದರದಿನ್ನಿ ಅವರ ಕುರಿತಾದ ಮಾತುಗಳು ಆ ವಾರ ಪೂರ್ಣ ಬೆಂಗಳೂರಿನ ಪತ್ರಿಕೆಗಳಲ್ಲೆಲ್ಲ ಹರಿದಾಡಿದವು.

ಲಂಕೇಶ ಪತ್ರಿಕೆಯಂತು ತನ್ನ ಎರಡನೆಯ ಪುಟದಲ್ಲಿ ಹೈದರಾಬಾದ ಕರ್ನಾಟದಕ ಹಿಂದುಳಿದ ಪ್ರದೇಶದ ಶಿಕ್ಷಕ ತುಘಲಕ ಪಾತ್ರಧಾರಿ ಶ್ರೀ ಮಹಮ್ಮದ ಹನಿಫ್ ಖಾಜಿ ಅವರ ಪರಿಚಯದೊಂದಿಗೆ ಗ್ರಾಮೀಣ ರಂಗತಂಡವಾದ ಸ್ನೇಹರಂಗ ಹಾಗೂ ಅಶೋಕ ಬಾದರದಿನ್ನಿ ಅವರ ಕುರಿತಂತೆ ಮಾಜಿ ಶಾಸಕಿ ಲೇಖಕಿ ಶ್ರೀಮತಿ ಬಿ.ಟಿ ಲಲಿತಾನಾಯಕರಿಂದ ಅಗ್ರಲೇಖನವನ್ನು ಪ್ರಕಟಿಸಿತ್ತು.

ಈ ನಾಟಕಕ್ಕೆ ವಿಜಾಪುರ ಜಿಲ್ಲೆಯಲ್ಲಿ ಹೆಸರಾಗಿದ್ದ ಯೋಗೇಂದ್ರಸಿಂಗ್ ಅವರ ಬೆಳಕು ವಿನ್ಯಾಸವಿದ್ದರೂ ಸ್ನೇಹರಂಗ ನಾಟಕ ತಂಡದ ಪ್ರೀತಿಯಿಂದಾಗಿ ಆಗಿನ ಖ್ಯಾತ ರಂಗನಿರ್ದೇಶಕ ಶ್ರೀ ಸಿ.ಜಿ.ಕೃಷ್ಣಸ್ವಾಮಿಯವರು ಬೆಂಗಳೂರಿನ ಈ ನಾಟಕಕ್ಕೆ ಬೆಳಕಿನ ಕಾರ್ಯ ನಿರ್ವಹಿಸಿದ್ದೂ ಕೂಡಾ ನಾಟಕದ ಯಶಸ್ಸಿಗೆ ಗರಿ ಮೂಡಿಸಿದ್ದು ಒಂದು ಸ್ಮರಣಾರ್ಹ ಪ್ರಸಂಗ.

ಇಂದಿಗೂ ಕೂಡಾ ಈ ನಾಟಕದ ಮರು ಪ್ರದರ್ಶನಗಳಿಗೆ ಬೇಡಿಕೆ ಇದ್ದೇ ಇದೆ. ಆದರೆ ಸಧ್ಯ ತುಘಲಕ್ ಪಾತ್ರಧಾರಿಯ ಆರೋಗ್ಯ, ವಯಸ್ಸು ಕೈ ಕೊಟ್ಟದ್ದರಿಂದ ಹಾಗೂ ಹೊಸಬರ ಆಗಮನ ಶೂನ್ಯವಾಗಿದ್ದರಿಂದ ಮತ್ತು ರಂಗ ತಂಡದ ಕುಂಭಕರ್ಣ ನಿದ್ರೆಯಿಂದ ಮರು ಪ್ರದರ್ಶನಗಳು ನಿರೀಕ್ಷೆಯಲ್ಲಿಯೇ ಕಾಯುತ್ತಿವೆ.

ಹೀಗೆ ವಿಜಾಪುರದ ತವರು ಜಿಲ್ಲೆಯ ಮೂರು ಪ್ರಮುಖ ನಗರಗಳಾದ ವಿಜಾಪುರ(ಈಗಿನ ಬಾಗಲಕೋಟ ಜಿಲ್ಲೆಯ)ಬಾಗಲಕೋಟೆ ಹಾಗೂ ಇಲಕಲ್ಲ ಈ ಮೂರು ನಗರಗಳಲ್ಲಿ ೧೯೮೧-೧೯೮೨ರಲ್ಲಿ ನಾಟಕ ಪ್ರದರ್ಶನಗಳ ಯಶಸ್ವಿ ಜಾತ್ರೆಯನ್ನು ಪೂರೈಸಿ ಅಶೋಕ ಬಾದರದಿನ್ನಿ ಅವರು ಮತ್ತೆ ಮಠ ಮಾನ್ಯಗಳತ್ತ ಒತ್ತಡದ ಬೇಡಿಕೆಯ ಆಹ್ವಾನದಿಂದ ಅತ್ತ ಮುಖ ಮಾಡುತ್ತಾರೆ.

**ಕರ್ನಾಟಕದ ವಿವಿಧ ನಗರಗಳಲ್ಲಿ**

ಸಿರಿಗೆರೆಯಲ್ಲಿ ಮತ್ತೆ ಪೂಜ್ಯ ಸಿರಿಗೆರೆಯ ಶ್ರೀಗಳೇ ರಚಿಸಿದ್ದ 'ಶ್ರೀ ವಿಶ್ವಬಂಧು ಮರುಳ ಸಿದ್ಧ' ನಾಟಕದ ಜೊತೆ ಜೊತೆಗೆ ಖ್ಯಾತ ಸಾಹಿತಿ ತರಾಸು ಅವರ ಕಾದಂಬರಿ ಆಧಾರಿತ 'ದುರ್ಗಾಸ್ತಮಾನ' ಐತಿಹಾಸಿಕ ನಾಟಕವನ್ನು ಸಿರಿಗೆರೆ ಶ್ರೀ ತರಳಬಾಳು ಬೃಹನ್‌ಮಠಕ್ಕಾಗಿ ನಿರ್ದೇಶಿಸಿ ಯಶಸ್ವಿಯಾಗುತ್ತಾರೆ. ೧೯೮೩-೧೯೮೪ರಲ್ಲಿ ಉತ್ತರ

ಕರ್ನಾಟಕದ ಶೈಕ್ಷಣಿಕ ರಾಜಧಾನಿ ಎಂದು ಖ್ಯಾತಿಯನ್ನು ಹೊಂದಿದ್ದ ಧಾರವಾಡದ ಕಲೋದ್ಧಾರಕ ಸಂಘಕ್ಕೆ 'ಮೃಚ್ಛಕಟಿಕ' ನಾಟಕವನ್ನು ನಿರ್ದೇಶಿಸುವ ಸಿದ್ಧತೆಯಾಗಿ ನಾಟಕವು ಹೊಸ ಶೈಲಿಯಲ್ಲಿ ಜನ ಮೆಚ್ಚುಗೆ ಗಳಿಸುತ್ತದೆ. ಧಾರವಾಡದ ಈ ಪ್ರಯೋಗ ಬೆಳಗಾವಿಯ ರಂಗ ಸಂಪದಕ್ಕೆ ಪ್ರೇರಣೆ ಒದಗಿಸಿ ಅವರು ದಿ.ಬಿ.ವ್ಹಿ.ವೈಕುಂಠರಾಜು ಅವರ ಅಂದಿನ ದಿನ ಮಾನಗಳಲ್ಲಿ ಪ್ರದರ್ಶಿತವಾದ ಸ್ಥಳಗಳಲ್ಲಿ ಚರ್ಚೆ, ಜಗಳಗಳಿಗೆ ಕಾರಣವಾಗಿದ್ದ 'ಉದ್ಭವ' ನಾಟಕವನ್ನು ಬೆಳಗಾವಿಯಲ್ಲಿ ಯಶಸ್ವಿಯಾಗಿ ನಿರ್ದೇಶಿಸಿ ಪ್ರದರ್ಶಿಸುತ್ತಾರೆ.

ಮುಂದೆ ಇತ್ತ ಕರಾವಳಿ ಕರ್ನಾಟಕದ ಮಂಗಳೂರಿನಲ್ಲಿ ಅಭಿನಯ ತಂಡಕ್ಕಾಗಿ ಮತ್ತೆ ಅದೇ ಶೆಕ್ಸಪೀಯರ್‌ನ ಮ್ಯಾಕಬೆಥ್ ನಾಟಕವನ್ನು ತಾವೇ ನಿರ್ದೇಶಿಸಿದ್ದ ಹಿಂದಿನ ನಾಟಕಕ್ಕಿಂತ ಸಂಪೂರ್ಣ ಭಿನ್ನವಾಗಿ ನಿರ್ದೇಶಿಸುತ್ತಾರೆ. ಹಾಗೆಯೇ ಶಿವಮೊಗ್ಗದ ಅಭಿನಯ ತಂಡಕ್ಕೆ ಅದೇ ಶೆಕ್ಸಪೀಯರ್‌ನ 'ಮಿಡ್ ಸಮ್ಮರ ನೈಟ್ಸ್ ಡ್ರಿಮ್' ನಾಟಕವನ್ನು ರಂಗಶಿಬಿರದೊಂದಿಗೆ ಹಾಗೂ ಶ್ರೀ ಎ.ಎಸ್. ಮೂರ್ತಿ ಅವರ 'ದನಿ ಇಲ್ಲದವರು' ನಾಟಕವನ್ನು ಪ್ರದರ್ಶಿಸುತ್ತಾರೆ. ಇದೇ ನಾಟಕವನ್ನು ಕೋಲಾರದ ಚಿನ್ನದ ಗಣಿಯ ತಂಡಕ್ಕೆ ಇನ್ನೊಂದು ಶೈಲಿಯಲ್ಲಿ ಪ್ರದರ್ಶಿಸಿ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಆಗ ಮೈಸೂರಿನಲ್ಲಿ ಜರುಗಿದ ವಿಶ್ವಕನ್ನಡ ಸಮ್ಮೇಳನದ ವಿಶೇಷ ನಾಟಕವೆಂದು ವಿಜಾಪುರದ ಕಲಾಮಾಧ್ಯಮಕ್ಕಾಗಿ ದಿ. ಜಿ.ಹೆಚ್. ರಾಘವೇಂದ್ರರ 'ಬಾಗಿಲಾ ತೆಗಿರೆಪೊ ಬಾಗಿಲಾ' ನಾಟಕವನ್ನು ನಿರ್ದೇಶಿಸಿ ಹೆಸರಾಗುತ್ತಾರೆ. ಮೈಸೂರಿನ ಈ ಪ್ರದರ್ಶನ ಪ್ರಭಾವವೂ, ಅವರ ನಾಟಕ ನಿರ್ದೇಶನದ ಚಮತ್ಕಾರವು ಮೈಸೂರಿನಲ್ಲಿ ಅವರದೇ ಹೆಸರಿನ ಅಶೋಕ ಎನ್ನುವ ರಂಗ ತಂಡದ ನಿರ್ಮಾಣಕ್ಕೆ ಕಾರಣವಾಗುತ್ತದೆ. ಅದರಲ್ಲೂ ಆಧುನಿಕ ವಿಚಾರಧಾರೆಯ ಅಪಾರ ರಂಗಾಸಕ್ತಿಯ ಮಹಿಳೆಯೊಬ್ಬರು ಈ ರಂಗತಂಡದ ನಿರ್ಮಾಣಕ್ಕೆ ಕಾರಣವಾಗಿರುವುದು ವಿಶೇಷ. ಇಲ್ಲಿ ದಿ. ಬಿ.ವಿ. ವೈಕುಂಠರಾಜುರವರ 'ಜ್ವಲಂತ' ವೇಶಾ ಸಮಸ್ಯೆಯ ನಾಟಕ 'ಸನ್ನಿವೇಶ'ವನ್ನು ಅಶೋಕ ತಂಡಕ್ಕಾಗಿ ನಿರ್ದೇಶಿಸುತ್ತಾರೆ.

ಅಷ್ಟರಲ್ಲಿಯೇ ಸಿರಿಗೆರ ಶ್ರೀಮಠದ ಶರಣರ ನಾಟಕಗಳ ಮರು ಪ್ರದರ್ಶನಗಳ ಪ್ರಚಾರ ಮತ್ತು ಯಶಸ್ಸು ಹಾಗೂ ಸಾಮಾಜಿಕವಾಗಿ ಭಕ್ತವೃಂದ ಈ ನಾಟಕಗಳನ್ನು ಮೆಚ್ಚಿದ ಪರಿಣಾಮವಾಗಿ ಜಗಳೂರಿನ ನಳಂದಾ ಕಲಾ ಸಂಘವು ಅದೇ ಸಿರಿಗೆರೆ ಶ್ರೀಗಳು ರಚಿಸಿದ 'ಶರಣಸತಿ ಲಿಂಗಪತಿ' ಅಶೋಕ ಅವರ ನಿರ್ದೇಶನದಲ್ಲಿ ಯಶಸ್ವಿಯಾಗಿ ಅಭಿನಯಿಸುವದರೊಂದಿಗೆ ರಾಜ್ಯಾದ್ಯಂತ ಈ ನಾಟಕದ ಮರು ಪ್ರದರ್ಶನಗಳು ಶರಣಬಂಧುಗಳ ಮೆಚ್ಚುಗೆಗೆ ಕಾರಣವಾಗುತ್ತದೆ.

ಜನಪ್ರಿಯ ಚಲನಚಿತ್ರರಂಗದತ್ತ

ಆಗಾಗ ಚಲನಚಿತ್ರ ರಂಗದಲ್ಲಿ ತೊಡಗಿಸಿಕೊಂಡಿದ್ದ ಅಶೋಕ ಬಾದರದಿನ್ನಿ ಅವರಿಗೆ ನೇರವಾಗಿ ಈಗ ಜನಪ್ರಿಯ ಕನ್ನಡ ಚಲನಚಿತ್ರರಂಗವು ಹಾಸ್ಯ ನಟನನ್ನಾಗಿಸಿ ಕೈಮಾಡಿ ಕರೆಯುತ್ತದೆ. ಮಂಡ್ಯದ ಪ್ರಭಾವ, ದಿ.ಕೆ.ವಿ.ಶಂಕರರೇಗೌಡರ ಪುತ್ರ ಶ್ರೀ ಕೆ.ವಿ.ಸಚ್ಚಿದಾನಂದಗೌಡರು ನಿರ್ಮಿಸಲು ಕೈಗೆತ್ತಿಕೊಂಡ ಸುಹಾಸಿನಿ, ಅನಂತನಾಗ ಅವರ ಪ್ರಮುಖ ಪಾತ್ರದ 'ಹೊಸ ನೀರು' ಚಿತ್ರಕ್ಕೆ ಸಚ್ಚಿದಾನಂದರ ಪ್ರೀತಿಯ ಕರೆ ಬರುತ್ತದೆ. ಹೊಸ ಅಲೆಯ ನಾಟಕಗಳ ಪ್ರಭಾವದಿಂದ ಪ್ರಾಯೋಗಿಕ ಚಲನಚಿತ್ರಗಳಲ್ಲಿ ಆಗೀಗ ತಮ್ಮನ್ನು ತೊಡಗಿಸಿಕೊಂಡಿದ್ದ ಬಾದರದಿನ್ನಿ ಅವರು 'ಹೊಸ ನೀರು' ಚಿತ್ರದ ಮೂಲಕ ನಿಜಕ್ಕೂ ಕನ್ನಡ ಚಿತ್ರರಂಗದ ಜನಪ್ರಿಯ ಚಿತ್ರಗಳಿಗೆ ಪ್ರವೇಶಿಸುತ್ತಾರೆ. ಜೊತೆಗೆ ಹಾಸ್ಯ ಪಾತ್ರಗಳಲ್ಲಿ ನಗೆ ನಟರಾಗಿ ತಮ್ಮದೇ ಆದ ಛಾಪೂ ಮೂಡಿಸುತ್ತಾರೆ. ಹೊಸ ನೀರು ಚಿತ್ರದ ಪಾತ್ರ ಇಂದಿಗೂ ಅವಿಸ್ಮರಣೀಯ ಎಂದು ನೆನೆಯುತ್ತಾರೆ ಬಾದರದಿನ್ನಿ

ಹೊಸ ನೀರು ಚಿತ್ರದಿಂದ ಆರಂಭವಾದ ಇವರ ಚಿತ್ರಯಾತ್ರೆ ಶ್ರೀ ಟಿ.ಎಸ್. ರಂಗಾ ಅವರ ಪ್ರಶಸ್ತಿ ವಿಜೇತ 'ಸಾವಿತ್ರಿ' ಚಿತ್ರದಿಂದ ಹಿಡಿದು ಸಾಲುಸಾಲು ಚಿತ್ರಗಳು ಇವರ ಹಾಸ್ಯ ಪಾತ್ರಕ್ಕೆ ಇಂಬುಕೊಡುತ್ತವೆ. ಇದರ ನಡುವೆ ಗಾಂಧಿನಗರದ ದೊಡ್ಡಾಫೀಸು ಎಂದು ಹೆಸರಾದ ದಿ.ಡಾ. ರಾಜಕುಮಾರ ಅವರ ಕುಂಟುಂಬದವರ ಚಿತ್ರ ಜಗತ್ತಿಗೆ ಅಶೋಕ ಅವರ ಪ್ರವೇಶವಾಗುತ್ತದೆ. ಖ್ಯಾತ ಚಿತ್ರ ನಟ ಕನ್ನಡಿಗರ ಕಣ್ಮಣಿ ದಿ. ಡಾ. ರಾಜಕುಮಾರ ಅವರ 'ಒಂದು ಮುತ್ತಿನ ಕಥೆ', ಹಾಗೂ ಅವರ ಮಗ ಇಂದಿನ ಹೆಸರಾಂತ ಚಿತ್ರ ನಟ ಡಾ. ಶಿವರಾಜಕುಮಾರ ಅಭಿನಯದ ರಾಜಶೇಖರ ನಿರ್ದೇಶನದ 'ಮನಮೆಚ್ಚಿದ ಹುಡುಗಿ' ಚಿತ್ರದಲ್ಲಿಯ ಪಾತ್ರಗಳು ಅವಿಸ್ಮರಣೀಯವಾದುದು ಎನ್ನುತ್ತಾರೆ. ಇಂದು ಅಶೋಕ ಅವರನ್ನು ಕಂಡ ಈ ಚಿತ್ರಗಳನ್ನು ನೋಡಿದ ಅಂದಿನ ಜಮಾನಾದ ಹುಡುಗರು ಇಂದು ಕೂಡಾ ಅವರ ಪಾತ್ರಗಳನ್ನು ಸ್ಮರಿಸಿಕೊಳ್ಳುತ್ತಾರೆ. ಈ ಚಿತ್ರಗಳ ಪ್ರಭಾವದಿಂದ ಡಾ. ರಾಜಕುಮಾರ ಅಭಿನಯಿಸಿದ ಮೊದಲಿನ 'ಬೇಡರ ಕಣ್ಣಪ್ಪ' ಚಿತ್ರದ ಹೊಸ ಅವತರಣಿಕೆಯ 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರಕ್ಕಾಗಿ ದಿ. ನರಸಿಂಹರಾಜು ಅವರು ಮಾಡಿದ ಪಾತ್ರಕ್ಕೆ ಅಶೋಕ ಅವರು ಆಯ್ಕೆಯಾಗಿದ್ದು ಕೆಲವು ಕಾರಣಗಳಿಂದ ತಪ್ಪಿಹೋಯಿತು. ಅದು ಒಂದರ್ಥದಲ್ಲಿ ಚಿತ್ರ ರಾಜಕೀಯ ಎನ್ನುತ್ತಾರೆ ಬಾದರದಿನ್ನಿ.

ಹೀಗೆ ಒಂದೆಡೆ ಚಲನಚಿತ್ರದ ಹಾಸ್ಯ ನಟನಾಗಿ ಅರ್ಥವ್ಯವಸ್ಥೆಯಲ್ಲಿ, ಬದುಕಿನ ಸುಭದ್ರತೆಗಾಗಿ, ಉದರದ ಬದುಕಿಗಾಗಿ ಹೋರಾಟ ಸಾಗಿದ್ದರೆ ಇನ್ನೊಂದೆಡೆ ರಂಗಯಾತ್ರೆಯ ಶಿಬಿರಗಳು, ನಾಟಕ ನಿರ್ದೇಶನಗಳು, ಅವ್ಯಾಹತವಾಗಿ ಸಾಗಿದ್ದವು.

ಚಿತ್ರ ರಂಗದ ಪ್ರಭಾವದಿಂದಾಗಿ ವಿಜಾಪುರದಲ್ಲಿ ಇದ್ದ ಕುಟುಂಬವು ೧೯೮೭ರಲ್ಲಿ ಬೆಂಗಳೂರಿಗೆ ವರ್ಗಾವಣೆಯಾಗಿ ಸಹಕುಟುಂಬ ಸಮೇತ ಅಶೋಕ ಬಾದರದಿನ್ನಿ ಅವರು ತಮ್ಮ ಚಲನಚಿತ್ರರಂಗದ ಮತ್ತು ರಂಗಭೂಮಿಯ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಸಾಗುತ್ತಾರೆ.

ನಟನೆಯ ಜೊತೆಗೆ ಆಕಸ್ಮಿಕವಾಗಿ ಕನ್ನಡ ಚಲನಚಿತ್ರ ಒಂದನ್ನು ನಿರ್ದೇಶಿಸುವ ಜವಾಬ್ದಾರಿ ಅಶೋಕ ಅವರ ಹೆಗಲೇರುತ್ತದೆ. ಡಾ. ರಾಜಕುಮಾರ ಅವರ ಕಟ್ಟಾ ಅಭಿಮಾನಿಯಾಗಿದ್ದ ಬೆಂಗಳೂರಿನ ಆರ್.ಟಿ.ಓ ಶಿವಣ್ಣ ಅವರು ಅಶೋಕ ಅವರ ಚಟುವಟಿಕೆಗಳನ್ನು ಕಂಡು ಇವರ ನಿರ್ದೇಶನದಲ್ಲಿ 'ಗೌರಿಶಂಕರ'ಎನ್ನುವ ಚಿತ್ರನಿರ್ಮಾಣಕ್ಕೆ ತೊಡಗುತ್ತಾರೆ. ಹೊಸ ನಾಯಕ-ನಾಯಕಿಯರೊಂದಿಗೆ ಕೆಲವು ನುರಿತ ಕಲಾವಿದರನ್ನು ಒಳಗೊಂಡು ಚಿತ್ರ ಬಿಡುಗಡೆಯಾದರೂ ನಿರ್ದೇಶಕರಾಗಿ ಅಶೋಕ ಅಷ್ಟರಲ್ಲೇ ತೃಪ್ತಿ ಪಡುತ್ತಾರೆ.

ಈ ಚಲನಚಿತ್ರ ಜಗತ್ತಿನೊಂದಿಗೆ ಆಗ ಪ್ರಸಿದ್ಧವಾಗಿದ ದಿ. ಶಂಕರನಾಗ್ ಅವರ 'ಮಾಲ್ಗುಡಿ ಡೇಸ್'ನ ಕಿರುತೆರೆಯ ಧಾರಾವಾಹಿಯಲ್ಲಿ ಪ್ರಮುಖ ಪಾತ್ರದಲ್ಲೂ ಅಲ್ಲದೇ 'ಕ್ರೇಜಿ ಕರ್ನಲ್' ಮತ್ತು ತಮ್ಮ ಸಹೋದರದ ನಿರ್ಮಾಣ ನಿರ್ದೇಶನದ 'ಸೈಲೇನ್ಸ ಪ್ಲೀಜ್' ಧಾರಾವಾಹಿಗಳಲ್ಲೂ ಕಲಾವಿದನಾಗಿ ಭಾಗವಹಿಸಿದ್ದಾರೆ. ಅಲ್ಲದೇ ಇವರ ಸಹೋದರರಾದ ಈರಣ್ಣ ಮತ್ತು ಉಮೇಶ ಈಗಲೂ ಚಲನಚಿತ್ರರಂಗದಲ್ಲಿ ಕ್ರಿಯಾಶೀಲರಾಗಿದ್ದಾರೆ. ಇತ್ತೀಚೆ ಉಮೇಶ ಬಾದರದಿನ್ನಿ ನಿರ್ದೇಶನದಲ್ಲಿ 'ಬಿಡಲಾರೆ ನಿನ್ನ' ಕೂತುಹಲಕಾರಿ ಕನ್ನಡ ಚಲನಚಿತ್ರ ನಿರ್ಮಾಣವಾಗಿದ್ದುದನ್ನು ಗಮನಿಸಬಹುದು. ಇದರಲ್ಲೂ ಶ್ರೀ ಅಶೋಕ ಕಲಾವಿದರಾಗಿ ಪಾತ್ರವಹಿಸಿದ್ದರು. ಇವರ ಇತ್ತೀಚಿನ ಚಲನಚಿತ್ರ ಬಾಗಲಕೋಟೆಯ ನಿರ್ಮಾಪಕರಾದ ಶ್ರೀ ಘನಶ್ಯಾಮ ಭಾಂಡಗೆ ಅವರ ಅಂಬೇಡ್ಕರ ತತ್ವ ಆದರ್ಶಗಳ ಕುರಿತಾದ 'ಇಂಗಳೇ ಮಾರ್ಗ' ಎನ್ನುವದನ್ನು ಗಮನಿಸಬಹುದು.

## ಮತ್ತೆ ಪೂರ್ಣ ಪ್ರಮಾಣದಲ್ಲಿ ರಂಗಭೂಮಿಯತ್ತ

೧೯೮೫-೧೯೮೭ರಲ್ಲಿ ಮತ್ತೆ ಬೆಂಗಳೂರಿನ ರಂಗ ಸಂಪದಕ್ಕೆ ದಿ.ಬಿ.ವಿ. ವೈಕುಂಠರಾಜುರವರ ರಾಜಕೀಯ ವೈಚಾರಿಕತೆಯ, ರಾಜಕೀಯ ಸಮಯಸಾಧಕತೆಯ 'ಸಂದರ್ಭ' ನಾಟಕವನ್ನು ನಿರ್ದೇಶಿಸಿದಾಗ, ಇದು ಅಪಾರ ಜನಮೆಚ್ಚುಗೆ ಪಡೆಯುವದರೊಂದಿಗೆ ಅಂದಿನ ರಾಜಕೀಯ ವಿಪ್ಲತೆಗೆ ಕೈಗನ್ನಡಿ ಹಿಡಿಯುತ್ತದೆ. ಹೀಗಾಗಿ ಈ ನಾಟಕಗಳ ಮರು ಪ್ರದರ್ಶನಗಳಿಗಾಗಿ ನಾಮುಂದು ನೀಮುಂದು ಎಂದು ಕರ್ನಾಟಕದ ರಂಗತಂಡಗಳು ಮುಗಿಬೀಳುತ್ತವೆ. ಅಷ್ಟರಲ್ಲಿಯೇ ಇಂದಿನ

ಚಿತ್ರರಂಗದ ನಿರ್ಮಾಪಕ ನಟ ಸುಬ್ರಮ್ಹಣ್ಯ–'ಕರಿ ಸುಬ್ಬು' ಅಶೋಕ ಅವರ ನೆರವಿನೊಂದಿಗೆ 'ಮಲ್ಲಿಕಾ' ಎನ್ನುವ ರಂಗ ತಂಡವನ್ನು ಕಟ್ಟುತ್ತಾರೆ. ಅವರಿಗಾಗಿ 'ಅಭಿಜ್ಞಾನ ಶಾಕುಂತಲ' ಮತ್ತು 'ಮಾನಿಷಾದ' ನಾಟಕಗಳನ್ನು ನಿರ್ದೇಶಿಸುತ್ತಾರೆ. ಆಗ ಕೇರಳದ ಕ್ಯಾಲಿಕಟ್‌ನಲ್ಲಿ ಜರುಗಿದ ದಕ್ಷಿಣ ಭಾರತದ ನಾಟಕೋತ್ಸವಕ್ಕೆ ಈ 'ಅಭಿಜ್ಞಾನ ಶಾಕುಂತಲ' ನಾಟಕವು ಆಯ್ಕೆಯಾಗಿ ಆ ಉತ್ಸವದಲ್ಲಿ ಪ್ರದರ್ಶಿಸಲ್ಪಟ್ಟ ನಾಟಕಗಳಲ್ಲಿ ಈ ನಾಟಕವು ಹೆಚ್ಚು ಜನಮನ್ನಣೆಯನ್ನು ಗಳಿಸುತ್ತದೆ. ಈ ನಾಟಕದಲ್ಲಿ ಸದ್ಯದ ಕಿರುತೆರೆ ಹಿರಿತೆರೆಗಳ ಅಭಿನೇತ್ರಿ, ನಿರೂಪಕಿ ಅಪರ್ಣ ಅವರು ಪ್ರಮುಖ ಪಾತ್ರವಹಿಸಿದ್ದರು.

ಸಿರಿಗೆರೆ ಮತ್ತು ಜಗಳೂರಿನ ಶರಣರ ನಾಟಕಗಳ ಪ್ರಭಾವವು ಬಹಳಷ್ಟು ಶ್ರೀಮಠಗಳ ಹಾಗೂ ಧಾರ್ಮಿಕ ಸಾಧಕರ ಮೇಲೆ ಪ್ರಭಾವ ಬೀರಿರುತ್ತದೆ. ಪೂಜ್ಯ ಶಿವಕುಮಾರ ಶ್ರೀಗಳು ರಚಿಸಿದ 'ಮಹಾ ಬೆಳಗು' ಎನ್ನುವ ನಾಟಕವನ್ನು ಸಾಣೇಹಳ್ಳಿಯ ಶಿವಕುಮಾರ ಕಲಾ ಸಂಘಕ್ಕಾಗಿ ರೂಪಕದ ಮಾದರಿಯಲ್ಲಿ ಪ್ರದರ್ಶಿಸಿಸುವದರ ಮೂಲಕ ಶರಣರ ಬದುಕು ಭಾವವನ್ನು ಜನಪ್ರಿಯಗೊಳಿಸುತ್ತಾರೆ, ಹಾಗೆಯೇ ವಿಜಾಪುರ ಜಿಲ್ಲೆಯ ಇನ್ನೊಂದು ನಗರ ಜಮಖಂಡಿ ಸ್ನೇಹಬಳಗಕ್ಕೆ ಶೆಕ್ಸಪೀಯರ್‌ನ 'ಕಿಂಗ ಲಿಯರ್'ನಾಟಕವನ್ನು ನಿರ್ದೇಶಿಸುತ್ತಾರೆ.

**ರಂಗಶಿಬಿರಗಳು**

ನಾಟಕ ಸಿದ್ಧತೆಯ ಮೊದಲ ಹಂತವಾಗಿ ಕಲಾವಿದರಿಗೆ ನಾಟ್ಯ, ನಟನೆ, ಧ್ವನಿ, ಆಂಗಿಕ ಅಭಿನಯಗಳ ಪರಿಕಲ್ಪನೆ ಇರಬೇಕು.

ಅದಕ್ಕಾಗಿ ದೇಹವನ್ನು ಸಿದ್ಧಗೊಳಿಸಬೇಕು. ದೇಹಕ್ಕೂ ಒಂದು ಭಾಷೆ ಇದೆ. ಭಾಷೆಯೆಂತೆಯೇ ದೇಹವನ್ನು ದುಡಿಸಬೇಕು, ದಂಡಿಸಬೇಕು. ಕಾರಣ ಯೋಗ, ವ್ಯಾಯಾಮದಿಂದ ಹಿಡಿದು ಧ್ವನಿ ವ್ಯಾಯಾಮಗಳವರೆಗೂ ನಟನಾದವನಿಗೆ ತಿಳುವಳಿಕೆ ಬೇಕು. ಮಂದ್ರ, ಸ್ಥಾಯಿ ಭಾವಗಳ ಕಲ್ಪನೆ, ಧ್ವನಿಗಳಲ್ಲಿಯ ವ್ಯತ್ಯಸ್ಥಗಳ ಅರಿವಳಿಕೆ ಇತ್ಯಾದಿಗಳ ಅನುಭವ ಅವಶ್ಯವೆಂದು ಬಾದರದಿನ್ನಿ ಅವರು ನಾಟಕ ನಿರ್ದೇಶನದ ಆಹ್ವಾನ ಬಂದಲೆಲ್ಲಾ ನಾಟಕ ಸಿದ್ಧ ಪಡಿಸುವ ಪೂರ್ವ ಈ ರೀತಿಯ ತಿಳುವಳಿಕೆಗಳನ್ನು ಕಲಾವಿದರಿಗೆ ಅರ್ಥೈಸಿಕೊಡಲು ಭರತನ ನಾಟ್ಯ ಶಾಸ್ತ್ರದಿಂದ ಹಿಡಿದು ಅಭಿನಯ ಕಲೆಯ ಪೂರ್ವಾಪರಗಳೆಲ್ಲವನ್ನು ಜೊತೆಗೆ ನೇಪಥ್ಯ, ಪ್ರಸಾಧನ, ನೆರಳು ಬೆಳಕುಗಳ ಕುರಿತಂತೆ ಕರ್ನಾಟಕದ ಬಹುಪಾಲು ನಗರಗಳಲ್ಲಿ ಮೊದಲ ಆದ್ಯತೆಯಾಗಿ ರಂಗ ಶಿಬಿರಗಳನ್ನು ನಿರ್ವಹಿಸಿದರು. ಜೊತೆಗೆ ಮುಂಬರುವ ದಿನಗಳಲ್ಲಿ ಕಲಾವಿದರ ಅವಶ್ಯಕತೆ ಮನಗಂಡು ಕಾಲೇಜುಗಳಲ್ಲಿ ವಿದ್ಯಾರ್ಥಿ ರಂಗ ಶಿಬಿರಗಳನ್ನು ಕರ್ನಾಟಕದ

ಮಟ್ಟಿಗೆ ಪ್ರಪ್ರಥಮವಾಗಿ ಸಂಯೋಜಿಸಿದ ಕೀರ್ತಿ ಅಶೋಕ ಬಾದರದಿನ್ನಿ ಅವರಿಗೆ ಸಲ್ಲುತ್ತದೆ. ಅಂದಾಜು ೩೦೦ಕ್ಕೂ ಹೆಚ್ಚು ಇಂತಹ ರಂಗ ಶಿಬಿರಗಳ ಜೊತೆಗೆ ಅಭಿನಯ ತರಂಗದ ರವಿವಾರದ ಶಾಲೆ ಕೂಡಾ ಆಸಕ್ತ ಯುವಕ ಯುವತಿಯರಿಗೆ, ವಿದ್ಯಾರ್ಥಿಗಳಿಗೆ ಅಭಿನಯ ಕಲೆಯನ್ನು ಹೇಳಿಕೊಡಲು ನೆರವಾಗಿರುತ್ತದೆ.

ಸನ್ ಸುಮಾರು ೧೯೮೮ ರಿಂದ ೧೯೯೫ರ ವರೆಗೆ ಕರ್ನಾಟಕದ ಬೆಂಗಳೂರಿನಿಂದ ಹಿಡಿದು ಚಿತ್ರದುರ್ಗ, ಬಾಗಲಕೋಟ, ಇಲಕಲ್ಲ ಸಾಣೇಹಳ್ಳಿ, ಸಿರಿಗೆರೆ, ಮಂಡ್ಯ, ಉಡುಪಿ, ಮಂಗಳೂರು, ಮೈಸೂರು, ಬೆಳಗಾವಿ, ಕಲಬುರ್ಗಿ, ಬೀದರ, ರಾಯಚೂರು, ವಿಜಾಪುರ ಮುಂತಾದ ನಗರಗಳಲ್ಲಿ ಅವ್ಯಾಹತವಾಗಿ ರಂಗ ಶಿಬಿರಗಳನ್ನು ತನ್ಮೂಲಕ ಖ್ಯಾತ ನಾಟಕಕಾರರ ನಾಟಕಗಳನ್ನು ನಿರ್ದೇಶಿಸಿದ ಹೆಮ್ಮೆ ಬಾದರದಿನ್ನಿ ಅವರದ್ದು. ಹೀಗೆ ಶಿಬಿರಗಳಲ್ಲಿ ನಿರ್ಮಾಣವಾದ ಅದೆಷ್ಟೋ ಅಸಂಖ್ಯ ನಾಟಕಗಳು ಕರ್ನಾಟಕ ರಾಜ್ಯಾದ್ಯಂತ ಮರು ಪ್ರದರ್ಶನಗಳು ಕಂಡಿವೆ.

ಇದೇ ಸಂದರ್ಭದಲ್ಲಿ ಅಂತರಾಷ್ಟ್ರೀಯ ಖ್ಯಾತ ನಿರ್ದೇಶಕ ಶ್ರೀ ಬಿ.ವ್ಹಿ. ಕಾರಂತರು ಕರ್ನಾಟಕದಲ್ಲಿ ಆರಂಭಿಸಿಲು ಉದ್ದೇಶಿಸಿದ 'ರಂಗಾಯಣ' ನಾಟಕ ಕರ್ನಾಟಕ ರೆಪರ್ಟರಿಯು ಮೈಸೂರಿನಲ್ಲಿ ಸರಕಾರದಿಂದ ಆರಂಭವಾಗುತ್ತದೆ. ರಂಗಾಯಣದ ವ್ಯವಸ್ಥೆಯನ್ನು ನಿರ್ದೇಶಿಸಲು 'ರಂಗಸಮಾಜ'ಎನ್ನುವ ಕರ್ನಾಟಕದ ರಂಗಭೂಮಿ ಖ್ಯಾತಿಯ ಪ್ರಮುಖರನ್ನು ಒಳಗೊಂಡ ಸರಕಾರದ ನಾಮನಿರ್ದೇಶನಗೊಂಡ ಸ್ವಾಯುತ್ತ ಸಂಸ್ಥೆಯನ್ನು ನಿಯುಕ್ತಗೊಳಿಸಲಾಗುತ್ತದೆ. ಆರಂಭದ ಎರಡು ಅವಧಿಗೆ ಶ್ರೀ ಅಶೋಕ ಬಾದರದಿನ್ನಿ ಅವರು 'ರಂಗಸಮಾಜದ' ಸದಸ್ಯರಾಗಿ ನಾಮಕರಣಗೊಂಡು ತಮ್ಮ ರಂಗ ಗುರು ದಿ. ಬಿ,ವ್ಹಿ. ಕಾರಂತರೊಂದಿಗೆ ಜಗಳವಾಡುತ್ತಲ್ಲೇ ರಂಗಾಯಣವನ್ನು ರಚನಾತ್ಮಕವಾಗಿ ಕಟ್ಟಲು ಉಳಿದ ಸದಸ್ಯರೊಂದಿಗೆ ಪ್ರಯತ್ನಿಸುತ್ತಾರೆ.

**ಬೆಂಗಳೂರಿನ ತಂಡದ ಮೊದಲ ಪ್ರದರ್ಶನ ಇಲಕಲ್ಲಿನಲ್ಲಿ**

ಸಾಮಾನ್ಯವಾಗಿ ಆಗಿನ ವಿಜಾಪುರ ಜಿಲ್ಲೆಯ ಇಲಕಲ್ಲ(ಈಗ ಬಾಗಲಕೋಟ ಜಿಲ್ಲೆ) ವೃತ್ತಿರಂಗ ಭೂಮಿಯ ತವರು ಮನೆ ಎಂದು ಹೆಸರು ವಾಸಿಯಾಗಿತ್ತು. ಕರ್ನಾಟಕದಲ್ಲಿ ವೃತ್ತಿ ರಂಗದ ಯಾವುದೇ ಹೊಸ ನಾಟಕವಾಗಲಿ ಇಲ್ಲವೇ, ಹೊಸ ವೃತ್ತಿ ರಂಗ ಕಂಪನಿಯಾಗಲಿ ಆರಂಭವಾಗಿ ಇಲಕಲ್ಲಿನಲ್ಲಿ ಯಶಸ್ವಿಯಾದರೆ ಅದು ಕರ್ನಾಟಕದ ಎಲ್ಲೆಡೆಗೆ ಯಶಸ್ವಿಯಾಗುತ್ತದೆ ಎನ್ನುವ ನಂಬಿಕೆ ಆಗ ಮನೆಮಾತಾಗಿತ್ತು. ಹೀಗಾಗಿ ಇಲಕಲ್ಲಿನಲ್ಲಿ ಕಲಾವಿದರು, ನಾಟಕಕಾರರು, ನೇಪಥ್ಯದವರು, ರಂಗಪರದೆ ಕಲಾವಿದರು, ರಂಗ ಪರಿಕರಗಳ ಬಾಡಿಗೆದಾರರು, ಕಂಪನಿ ಮಾಲೀಕರು, ಹವ್ಯಾಸಿ, ವೃತ್ತಿರಂಗ ಕಲಾವಿದರೂ ನೆಲೆ ನಿಂತ ರಂಗತಾಣವಾಗಿತ್ತು.

ಇಂತಹ ವೃತ್ತಿರಂಗದ ತವರು ನೆಲದಲ್ಲಿ ಸ್ನೇಹರಂಗ ಹವ್ಯಾಸಿ ಕಲಾ ಸಂಸ್ಥೆ ೧೯೮೦ರಿಂದ ಇಲಕಲ್ಲಿನ ಜನತೆಗೆ ಹೊಸ ಅಲೆಯ ಹವ್ಯಾಸಿ ನಾಟಕಗಳ ರುಚಿಯನ್ನು ಉಣಿಸತೊಡಗಿತ್ತು. ಅದಾಗಲೇ ಬೆಂಗಳೂರಿನ ಖಾನೆ ಸುಮಾರಿ ಎಲ್ಲ ಪ್ರಮುಖ ರಂಗ ತಂಡಗಳು ತಮ್ಮ ನಾಟಕಗಳ ಮರು ಪ್ರದರ್ಶನಗಳನ್ನು ಇಲಕಲ್ಲಿನಲ್ಲಿ ಕೊಡಮಾಡಿದ್ದವು.

ಅದರಲ್ಲಿ ಅಶೋಕ ಬಾದರದಿನ್ನಿ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬೆಂಗಳೂರಿನ ಕರಿಸುಬ್ಬು ಅವರ ಮಲ್ಲಿಕಾ ತಂಡದ ಡಾ. ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ'ಯ ಕಾದಂಬರಿಯ ರಂಗ ರೂಪದ ನಾಟಕದ ಮೊದಲ ಪ್ರದರ್ಶನಕ್ಕಾಗಿ ಇಲಕಲ್ಲನ್ನು ಆಯ್ಕೆ ಮಾಡಿಕೊಂಡಿದ್ದರು. ಈ ನಾಟಕದಲ್ಲಿ ನಿರ್ದೇಶನದ ಜೊತೆಗೆ ಪ್ರಮುಖ ಗೌಡನ ಪಾತ್ರವನ್ನು ಅಶೋಕ ಬಾದರದಿನ್ನಿ ಅವರೇ ನಿರ್ವಹಿಸಿರುವುದು ಒಂದು ವಿಶೇಷವಾಗಿತ್ತು. ಮೊದಲೇ ಕಂಬಾರರ ನಾಟಕ, ಉತ್ತರ ಕರ್ನಾಟಕದ ಆಡು ಭಾಷೆ, ಜನಪದ ಶೈಲಿಯ ಸೊಗಸು, ಹಾಡುಗಳು ಜೊತೆಜೊತೆಗೆ ಪ್ರಮುಖ ಪಾತ್ರದಲ್ಲಿ ಅಶೋಕ ಬಾದರದಿನ್ನಿ ಅವರು ಅಂದಮೇಲೆ ಕೇಳಬೇಕೆ.– ಅದು ಬೆಂಗಳೂರಿನ ತಂಡದ ನಾಟಕದ ಮೊದಲ ಪ್ರದರ್ಶನ ಎನ್ನುವ ಪ್ರಚಾರ ಬೇರೇ.. . .ಈ ನಾಟಕವು ಹುಚ್ಚೆದ್ದು ಯಶಸ್ವಿಯಾಗಿ ಹೋಯಿತು. ಸಿಂಗಾರೆವ್ವನ ಗುಂಗು ಎಲ್ಲೆಡೆ ಪಸರಿಸಿ ಎರಡೆನೆಯ ಪ್ರದರ್ಶನ ತವರು ನೆಲ ವಿಜಾಪುರದಲ್ಲಿ ಆಗಿ ಆ ಮೇಲೆ ಬೆಂಗಳೂರು ಇತರೆಡೆಗಳೆಲ್ಲಾ ಪ್ರದರ್ಶನಗಳು ನಿರ್ಧಾರವಾಗಿದ್ದವು. ಮೊದಲೆರಡು ಪ್ರದರ್ಶನಗಳು ರಾಜಧಾನಿಯ ಹೊರಗೆ ಅಭೂತಪೂರ್ವ ಯಶಸ್ಸು ಕಂಡ ಕಾರಣ ಬೆಂಗಳೂರಿನಲ್ಲೂ ಈ ನಾಟಕ ಜಯಭೇರಿ ಬಾರಿಸಿತ್ತು. ಆಮೇಲೆ ಎಲ್ಲಾ ಯಶಸ್ವಿ ಮರು ಪ್ರದರ್ಶನಗಳೇ. ಆಗಲೇ ಚಲನಚಿತ್ರರಂಗದಲ್ಲಿ ಹಾಸ್ಯ ನಟನಾಗಿ ಗುರುತಿಸಿಕೊಂಡಿದ್ದ ಅಶೋಕ ಬಾದರದಿನ್ನಿಯವರ ಆ ಇಮೇಜು ಈ ನಾಟಕದಲ್ಲಿ ಗೌಡನಾಗಿ ವಿಜೃಂಭಿಸಿ ನಾಟಕ ಪ್ರದರ್ಶನವಾದ ಕಡೆಗಳಲ್ಲೆಲ್ಲ ಪ್ರೇಕ್ಷಕರನ್ನು ಹುಚ್ಚು ಎಬ್ಬಿಸಿದ್ದು ನೆನಪಿಸಿಕೊಳ್ಳುವಂತಹ ಸ್ಮರಣೀಯ ಘಟನೆ. ಈ ತಂಡದ ಸುಬ್ರಮ್ಹಣ್ಯ ಅವರೇ ಕರಿಸುಬ್ಬು ವಾಗಿ ಈಗ ಕನ್ನಡ ಚಲನ ಚಿತ್ರರಂಗದಲ್ಲಿ ಪ್ರಮುಖ ನಿರ್ಮಾಪಕ, ನಟರಾಗಿ ಗುರುತಿಸಿಕೊಂಡಿರುವುದು ಗಮನಾರ್ಹ.

**ಶ್ರೀಮಠಗಳು ಮತ್ತು ಗ್ರಾಮೀಣ ರಂಗಶಿಕ್ಷಣ**

ಉತ್ತರ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಶಿಕ್ಷಣದ ದೀವಿಗೆಯನ್ನು ಬೆಳಗಿಸಿದ ಕೀರ್ತಿ ಶ್ರೀಮಠಗಳಿಗೆ ಸಲ್ಲುತ್ತದೆ. ಆಯಾ ಆಯಾ ಭಾಗದ ಹೆಸರಾಂತ ಮಠಗಳು ತಮ್ಮ ತಮ್ಮ ಭಾಗದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉಚ್ಚ ಶಿಕ್ಷಣದವರೆಗೆ

ಉಚಿತ ಪ್ರಸಾದ ನಿಲಯಗಳ ಮೂಲಕ ನಾಡವರಿಗೆ ಶಿಕ್ಷಣ ದಾಸೋಹಗಳನ್ನು ಕೊಟ್ಟ ಖ್ಯಾತಿ ಈ ಶ್ರೀ ಮಠಗಳದ್ದು.

ಅಶೋಕ ಬಾದರದಿನ್ನಿ ಅವರು ರಂಗ ಶಿಕ್ಷಣದಲ್ಲಿ ಎನ್.ಎಸ್.ಡಿ ಪದವಿಯನ್ನು ಪೂರೈಸಿಕೊಂಡು ಬಂದ ಮೇಲೆ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಶರಣರ ನಾಟಕಗಳ ಮೂಲಕ ಸಾಮಾಜಿಕ ಜಾಗೃತಿಯನ್ನು, ಜೊತೆ ಜೊತೆಗೆ ಅವುಗಳೊಂದಿಗೆ ಬೌದ್ಧಿಕವಾಗಿ ವೈಚಾರಿಕ ನೆಲೆಯಲ್ಲಿ ಆಲೋಚಿಸುವ, ಸಮಾನತೆಯನ್ನು ಸಾರುವ, ಆಧುನಿಕ ವಿಚಾರಧಾರೆಗಳನ್ನು ಬಿಂಬಿಸುವ, ಶರಣರ ನಾಟಕಗಳನ್ನು ಸಿದ್ಧಪಡಿಸಿ ಸಾಮಾಜಿಕ ಜನ ಜಾಗ್ರತಿಯನ್ನುಂಟು ಮಾಡುವಲ್ಲಿ ನಾಟಕಗಳನ್ನು ಪ್ರದರ್ಶಿಸಿದ ಮೊದಲ ಕೀರ್ತಿಯೂ ಕೂಡಾ ಅಶೋಕ ಬಾದರದಿನ್ನಿ ಅವರಿಗೆ ಸಲ್ಲುತ್ತದೆ. ಹೀಗೆ ಶ್ರೀಮಠಗಳ ಮೂಲಕ ಶರಣ ನಾಟಕಗಳಿಂದ ಸಾಮಾಜಿಕ ಸಾಧನೆಯ, ಬದುಕಿನ ಪರಿವರ್ತನೆಯ ಶರಣರ ನಾಟಕಗಳಾದ 'ಶರಣಸತಿ, ಲಿಂಗಪತಿ', 'ಮರಣವೇ ಮಹಾನವಮಿ', 'ಭುವನದ ಬೆಳಗು', 'ಉರಿಲಿಂಗ ಪೆದ್ದಿ' ಮುಂತಾದ ಶರಣ ಸಂದೇಶ ಬೀರುವ ನಾಟಕಗಳ ಜೊತೆಗೆ ಸಂಕ್ರಾಂತಿ, ತಲೆದಂಡ, ಉದ್ಧವ, ಸನ್ನಿವೇಶ, ಸಂದರ್ಭದಂತಹ ಸಾಮಾಜಿಕ ಜಾಗ್ರತಿಯ, ಶೋಷಣೆಯನ್ನು ವಿರೋಧಿಸುವ ನಾಟಕಗಳನ್ನೂ ಅದೇ ಶ್ರೀ ಮಠದ ರಂಗ ತಂಡಗಳ ಮೂಲಕ ರಂಗಕ್ಕೇರಿಸಿ ಪ್ರದರ್ಶಿಸಿದ್ದೂ ಕಡಿಮೆಯ ಸಾಧನೆ ಏನಲ್ಲ!?. ಆ ಮೂಲಕ ಸಿರಿಗೆರೆಯ ತರಳಬಾಳು ಕಲಾ ಸಂಘವೂ ೧೯೮೫ರಲ್ಲಿ ಸಂಪೂರ್ಣ ಒಂದು ಸಾಂಸ್ಥಿಕ ರೂಪದಲ್ಲಿ ರಂಗಮುಖೇನ ಶಿಕ್ಷಣದ ಪರಿಕಲ್ಪನೆಯನ್ನು ಇಂಬುಗೊಳಿಸಲೋ ಎನ್ನುವಂತೆ ಎಸ್.ಜೆ.ಎಮ್.ಸಂಗೀತ, ನೃತ್ಯ, ನಾಟಕ ಶಾಲೆಯನ್ನು ಆರಂಭಿಸಿ ಎರಡು ವರ್ಷಗಳ ಡಿಪ್ಲೋಮ್ ಕೋರ್ಸ್‌ನ್ನು ಕರ್ನಾಟಕ ಸರಕಾರದಿಂದ ಅಧಿಕೃತ ನೊಂಗಣಿಯೊಂದಿಗೆ ಪ್ರಾರಂಭಿಸಿತ್ತು. ಆಗ ಹೀಗೆ ಕರ್ನಾಟಕದಲ್ಲಿ ಆರಂಭವಾದ ನಿರಂತರ ರಂಗ ಶಿಕ್ಷಣವನ್ನು ಕೊಡುವ ಎರಡನೆಯ ಸಂಸ್ಥೆ ಇದಾಗಿತ್ತು. (ಮೊದಲನೆಯದು ನೀನಾಸಂ ಹೆಗ್ಗೋಡು)

ಈ ಶಾಲೆಯ ನಿರ್ವಹಣೆ, ವ್ಯವಸ್ಥೆ, ಆಡಳಿತ ಇವುಗಳೊಂದಿಗೆ ಪ್ರಾಚಾರ್ಯರ ಹುದ್ದೆಯನ್ನು ಸಾಣೇಹಳ್ಳಿ ಶ್ರೀಗಳು ಅಶೋಕರಿಗೆ ಕಟ್ಟಿದ್ದರು. ಈ ಅವಧಿಯಲ್ಲಿ ಆ ಭಾಗದ ಮಕ್ಕಳ ರಂಗಭೂಮಿ, ಗ್ರಾಮೀಣ ರಂಗಭೂಮಿಗೆ ರಂಗ ಶಿಕ್ಷಣದ ಹೊಸ ಕಲ್ಪನೆಗಳನ್ನು ಮೂಡಿಸಿ ಜಾಗೃತ ರಂಗ ಚಳುವಳಿಗೆ ಕಾರಣರಾದರು. ಮುಂದೆ ಇದೇ ಶ್ರೀಮಠದ ಮೂಲಕ 'ಶಿವಸಂಚಾರ' ಸಂಚಾರಿ ರಂಗತಂಡವು ಕೂಡಾ ನಿರ್ಮಾಣವಾಗಿ ನೀನಾಸಂ ಹೆಗ್ಗೋಡಿನ ರೀತಿಯಲ್ಲಿ ಕರ್ನಾಟಕಾದ್ಯಂತ ಶರಣರ ನಾಟಕಗಳೊಂದಿಗೆ ಸಾಂಧರ್ಭಿಕ ಹೊಸ ಅಲೆಯ ಪ್ರಯೋಗಾತ್ಮಕ ನಾಟಕಗಳನ್ನು

ಪ್ರದರ್ಶಿಸುವ ಪ್ರಮುಖ ರಂಗತಂಡವಾಗಿ ಗುರುತಿಸಲ್ಪಟ್ಟಿರುದನ್ನು ಕಾಣಬಹುದಾಗಿದೆ. ಈ ತಂಡಕ್ಕೆ ಆರಂಭದ ಏಳು ವರ್ಷಗಳ ಕಾಲ ಅಶೋಕ ಬಾದರದಿನ್ನಿ ಅವರ ನಿರ್ವಹಣೆಯ ಕೊಡುಗೆ ಅಪಾರ ಹಾಗೂ ಅನನ್ಯವಾಗಿದೆ. ಇದರ ಪ್ರಭಾವವೇ ಮುಂದೆ ಶಿವಸಂಚಾರ ಎನ್ನುವ ಸಿರಿಗೆರೆ ಮಠದ ಇನ್ನೊಂದು ರಂಗ ಸಂಚಾರಿ ತಂಡಕ್ಕೆ ಹಾದಿ ಮಾಡಿಕೊಟ್ಟಿರುವುದು ಗಮನಾರ್ಹವಾದುದಾಗಿದೆ. ಹೀಗೆ ಶ್ರೀಮಠಗಳ ಮೂಲಕ ಹಿಂತಿರುಗಿ ನೋಡದ ಅಶೋಕ ಬಾದರದಿನ್ನಿ ಅವರು ಅಲ್ಲೆಲ್ಲಾ ತಮ್ಮ ಛಾಪು ಮೂಡಿಸಿ ತಮ್ಮ ವ್ಯಕ್ತಿತ್ವದ ಅಪ್ರತಿಮತೆಯನ್ನು ರೂಪಕಗಳ ಮೂಲಕ ಜಗಜ್ಜಾಹಿರುಗೊಳಿಸಿದರು. ಹೀಗೆ ಶ್ರೀ ಮಠಗಳಿಂದ ನಾಟಕಗಳಮೂಲಕ ಸಾಮಾಜಿಕ ಜಾಗೃತಿಯ ತಿಳುವಳಿಕೆಯನ್ನು ಮೂಡಿಸುವ ಇವರ ಪ್ರಥಮ ಪ್ರಯತ್ನದ ಯಶಸ್ಸಿನ ನಂತರವೇ ಇತರೆ ಕರ್ನಾಟಕದ ಖ್ಯಾತ ರಂಗನಿರ್ದೇಶಕರು ನಂತರ ಇದೇ ಶ್ರೀ ಮಠಗಳ ಮೂಲಕ ನಾಟಕಗಳನ್ನು ನಿರ್ದೇಶಿಸುವವರೊಂದಿಗೆ ಸಮಾಜ ಬದಲಾವಣೆಯ ಪ್ರಯತ್ನವನ್ನು ಕೈಗೊಂಡಿರುವಂತಹದು ಗಮನಿಸಬೇಕಾದ ಪ್ರಮುಖ ಅಂಶವಾಗಿದೆ.

**ರೂಪಕಗಳ ಜನಕ**

ಚಿತ್ರದುರ್ಗದ ಶ್ರೀಮಠದಲ್ಲಿ ಭರತನ ನಾಟ್ಯ ಶಾಸ್ತ್ರದ ಪ್ರಮುಖ ಪ್ರಕಾರವಾದ 'ರೂಪಕ'ವನ್ನು ಚಲಾವಣೆಗೆ ತಂದು ಭಾರತದ ಹಾಗೂ ಕರ್ನಾಟಕದ ಪ್ರಸಿದ್ಧ ಶರಣ ಸಂತರ ಕುರಿತಾಗಿ ಇರುವ ಚರಿತ್ರೆ, ವಚನಗಳು, ತತ್ವಪದಗಳು, ಸಂತರ ಪದಗಳು, ಇವನ್ನೆಲ್ಲ ಸಂಯೋಜಿಸಿ ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ನಲವತ್ತಕ್ಕೂ ಮಿಗಿಲಾದ ರೂಪಕಗಳನ್ನು ಆಧುನಿಕ ರಂಗ ಶೈಲಿಗೆ ಅಳವಡಿಸಿ ಸಂಗೀತ, ನೆರಳು ಬೆಳಕುಗಳ, ಚಿತ್ತಾರಗಳ, ತಂತ್ರಗಳ ಮೂಲಕ ಶರಣರ ಮಹಿಮೆ ತತ್ವಗಳಿಗೆ ಹೊಸ ರೂಪ ಕೊಟ್ಟು ಪ್ರಕಾಶಿಸಲು ನೆರವಾದರು.

ದೇವನೊಬ್ಬ ನಾಮಹಲವು, ಜಾತ್ಯಾತೀತ ಕಲ್ಪನೆ, ಸಮತಾ ಭಾವ, ಮನದ ಮಾಯೆ, ಬುದ್ಧ ಹೇಳಿದ ಆಶೆಯೆ ದುಃಖಕ್ಕೆ ಮೂಲ.- ತಾನೊಂದೆ ಕುಲಂ ತಾನೊಂದೆ ವಲಂ ಎನ್ನುವ ಮನೋಭೂಮಿಕೆಯ ಇಂತಹ ವಿವಿಧ ಆಶಯಗಳ ಹೊಸ ಭಾವದ ರೂಪಕಗಳನ್ನು ಅಲ್ಲಲ್ಲಿಯ ಶ್ರೀಮಠಗಳ ಪೂಜ್ಯ ಶ್ರೀಗಳಿಂದಲೂ, ಲೇಖಕರಿಂದಲೂ ತಾವು ರಚಿಸಿದ ರೂಪಕಗಳನ್ನು ನಿರ್ದೇಶಿಸಿ ಅವುಗಳಿಗೊಂದು ರಂಗ ಆಯಾಮಗಳ ತಲೆಕಟ್ಟು ದೊರಕಿಸಿಕೊಟ್ಟ ಪ್ರಸಿದ್ಧಿಯು ಅಶೋಕ ಬಾದರದಿನ್ನಿ ಅವರಿಗೆಯೇ ಸಲ್ಲುತ್ತದೆ.

ಇಂದು ಈ ರೂಪಕಗಳು ನಾಡಿನಾದ್ಯಂತ ಲೆಕ್ಕವಿಲ್ಲದಷ್ಟು ಮರು ಪ್ರದರ್ಶನಗಳನ್ನು ಕಾಣುತ್ತಿರುವುದು ಇಂತಹ ಶರಣರ ರೂಪಕಗಳ ಜನಪ್ರಿಯತೆಗೆ

ಸಾಕ್ಷಿಯಾಗಿದೆ. ಇಂದು ನಾಟಕಗಳೊಂದಿಗೆ ಇಂತಹ ರೂಪಕಗಳನ್ನೂ ಸಮೀಕರಿಸಿಕೊಂಡು ಚಿತ್ರದುರ್ಗದ ಶ್ರೀಮಠದ 'ಜಮುರಾ' ಹಾಗೂ ಸಾಣೇಹಳ್ಳಿಯ ಶ್ರೀಮಠದ 'ಶಿವಸಂಚಾರ' ಇಲಕಲ್ಲಿನ ಶ್ರೀಮಠದ 'ವಿಜಯಮಹಾಂತ ಕಲಾ ಲೋಕ' ತಂಡಗಳು ನಿಯಮಿತವಾಗಿ ಪ್ರತಿ ವರ್ಷ ಹೊಸ ಹೊಸ ಶರಣರ ರೂಪಕಗಳನ್ನು, ಜೊತೆಗೆ ವೈಚಾರಿಕ ನಾಟಕಗಳನ್ನು ಸಿದ್ಧಪಡಿಸಿ ಕರ್ನಾಟಕಾದ್ಯಂತ ಯಶಸ್ವಿ ರಂಗ ಯಾತ್ರೆಗಳನ್ನು ಕೈಗೊಳ್ಳುತ್ತಿವೆ. ಇದರ ಮೂಲ ಎಲ್ಲವೂ ಅಶೋಕ ಬಾದರದಿನ್ನಿ ಎನ್ನುವುದು ಗಮನಿಸುವ ಗಮನಾರ್ಹ ಅಂಶ.

ಹೀಗೇ ೧೯೬೫ರಿಂದ ಆರಂಭವಾದ ಬಾದರದಿನ್ನಿ ಅವರ ಶ್ರೀಮಠಗಳ ನೆಲೆಯ ರೂಪಕಗಳ ಸಾಲು ಈಗಲೂ ೨೦೧೫ನ್ನು ದಾಟಿ ಮುಂದುವರೆಯುತ್ತಿರುವದು ಲಕ್ಷಿಸಬೇಕಾದುದು. ೨೦೧೩-೨೦೧೫ರಲ್ಲಿ ಇಲಕಲ್ಲಿನ ಶ್ರೀ ವಿಜಯ ಮಹಾಂತೇಶ ಸಂಸ್ಥಾನ ಮಠದಿಂದ ಇಲ್ಲಿಯ ಕಿರಿಯ ಶ್ರೀಗಳಾದ ಶ್ರೀ ಗುರು ಮಹಾಂತ ಸ್ವಾಮಿಗಳವರ ಸದಾಶಯದಂತೆ 'ಶ್ರೀ ವಿಜಯಮಹಾಂತ ಕಲಾ ಲೋಕ' ಸಂಸ್ಥೆ ಸ್ಥಾಪನೆಯಾಗಿ ಶ್ರೀ ವಿಜಯ ಮಹಾಂತ ಶ್ರೀಗಳ ಪ್ರಮುಖ ಆಶಯ ಬಸಣ್ಣನವರ ವಚನಗಳನ್ನಾಧರಿಸಿದ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಯ್ಯ ಪಡಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಕಾಯಕವೇ ಕೈಲಾಸ, ವ್ಯಸನ ಮುಕ್ತ ಸಮಾಜ ನಿರ್ಮಾಣದ ಆಶಯಗಳ 'ಭುವನದ ಬೆಳಗು', 'ಮಹಾಂತ ಜೋಳಿಗೆ' ಯಂತಹ ನವ ಸಮಾಜ ನಿರ್ಮಾಣದ ರೂಪಕಗಳ ಜೊತೆ ಜೊತೆಗೆ ಶ್ರೀ ಮಠದ ಅದೇ ಕಿರಿಯ ಶ್ರೀಗಳೇ ರಚಿಸಿದ ಇನ್ನೊಂದು ರೂಪಕ ದೇಶ ರಕ್ಷಣೆಯ ಸೈನಿಕರ ತ್ಯಾಗ ಬಲಿದಾನಗಳ ಭಾವ ತೀವ್ರತೆಯ ಆರ್ದ್ರರೂಪಕ 'ಜೈ ಜವಾನ'. ಹೀಗೆ ತಮ್ಮ ಅನಾರೋಗ್ಯದ ನಂತರ ಮತ್ತೆ ಸಿಡಿದೆದ್ದು ನಿಂತು ಬಾದರದಿನ್ನಿಯವರು ಈ ಮೂರು ರೂಪಕಗಳನ್ನು ನಿರ್ದೇಶಿಸುವ ಮೂಲಕ ಮತ್ತೆ ಮನೆ ಮಾತಾದರು. ಈ ಕ್ರಿಯೆ ಇಷ್ಟಕ್ಕೆ ಸಮಾಪನವಾಗದೇ ಬೆಂಗಳೂರು ಆದಿಯಾಗಿ ಈ ರೂಪಕಗಳು ಕರ್ನಾಟಕದ ತುಂಬ ಮರು ಪ್ರದರ್ಶನಗಳು ಕಂಡಿವೆ. ಕಾಣುತ್ತಲೆ ಇವೆ.

ಈ ರೂಪಕಗಳ ಪ್ರಭಾವ ಮನಗಂಡ ಬೀದರ ಜಿಲ್ಲೆಯ ಭಾಲ್ಕಿಯ ಶ್ರೀ ಚೆನ್ನಬಸವದೇವರು ಅಲ್ಲಿಯ ಹಿರೇಮಠದ ಕಲಾ ತಂಡದ ಮೂಲಕ ಬಾದರದಿನ್ನಿ ಅವರಿಂದ 'ಅಕ್ಕ ಮಹಾದೇವಿ' 'ಚನ್ನಬಸವ ದೇವರು' ಮುಂತಾದ ರೂಪಕಗಳನ್ನು ಸಿದ್ದಪಡಿಸುತ್ತಾರೆ. ಅವುಕೂಡಾ ಇಂದು ಹೈದರಾಬಾದ ಕರ್ನಾಟಕದಲೆಲ್ಲಾ ಜನಮನ ಸೂರೆಗೊಂಡು ಪ್ರದರ್ಶನಗೊಳ್ಳುತ್ತಲೇ ಇವೆ. ಹೀಗಾಗಿ ಅಶೋಕ ಬಾದರದಿನ್ನಿ ಅವರನ್ನು ರಂಗಾಸಕ್ತರೆಲ್ಲ 'ರಂಗಭೂಮಿಯ ರೂಪಕಗಳ ಜನಕ'ಎಂದೂ ಕರೆಯಲು ಆರಂಭಿಸಿದ್ದಾರೆ.

## ಹಲವು ಪ್ರಥಮಗಳಿಗೆ ಮೊದಲಾದ ಇಲಕಲ್ಲ

ಅಶೋಕ ಬಾದರದಿನ್ನಿ ಅವರ ತವರು ನೆಲದ ಪ್ರೀತಿ ಹಾಗೂ ಇಲಕಲ್ಲಿನ ಸ್ನೇಹರಂಗಕ್ಕೆ ಅವರು ಸಿದ್ಧಪಡಿಸಿದ ತುಘಲಕ್ ನಾಟಕದ ಪ್ರಸ್ತಾಪ ಈಗಾಗಲೇ ಬಂದಿದೆ. ಈ ತುಘಲಕ ನಾಟಕವೂ ಕೂಡಾ ಬೆಂಗಳೂರಿನ ನಟರಂಗದ ಸಿ.ಆರ್.ಸಿಂಹ ಅವರ ತುಘಲಕ ನಾಟಕದ ದಾಖಲೆಯಂತೆ ಗ್ರಾಮೀಣ ರಂಗಭೂಮಿ ತಂಡದ ಮೂಲಕ ಹಲವಾರು ಮರು ಪ್ರದರ್ಶನಗಳನ್ನು ಕಂಡು ಬೆಂಗಳೂರಿನ ಕಲಾ ಕ್ಷೇತ್ರದಲ್ಲಿಯೂ ಪ್ರದರ್ಶಿಸಿ ಸ್ವತ: ಸಿ.ಆರ್. ಸಿಂಹ ರಿಂದ ಮೆಚ್ಚುಗೆ ಗಳಿಸಿದ ತುಘಲಕ ನಾಟಕದ ದಾಖಲೆ ರಾಜಧಾನಿಯನ್ನು ಹೊರತು ಪಡಿಸಿ ಉಳಿದ ಕರ್ನಾಟಕದ ಮಟ್ಟಿಗೆ ಅವಲೋಕಿಸಿದರೆ ಅದೂ ಕೂಡಾ ಒಂದು ದಾಖಲೆಯೇ. – ಇನ್ನೊಂದೆಡೆ ಇದೇ ಲೇಖಕರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ನಾಟಕಕಾರ ಗಿರೀಶ ಕಾರ್ನಾಡ ಅವರ ಬಸವಣ್ಣನವರ ಕುರಿತಾದ 'ತಲೆದಂಡ'ನಾಟಕ ಪ್ರಕಟವಾದಾಗ ವಿಮರ್ಶಾ ವಲಯದಲ್ಲಿ ಬಹು ಚರ್ಚಿತವಾಗಿತ್ತು. ಧಾರ್ಮಿಕ ವಲಯದಲ್ಲಿಯೂ ನಾಟಕದ ಕುರಿತಂತೆ ವಿರೋಧಾಭಾಸಗಳು ವ್ಯಕ್ತವಾಗಿದ್ದವು. ಸ್ನೇಹರಂಗಕ್ಕಾಗಿ ಈ ನಾಟಕವನ್ನು ಅಶೋಕ ನಿರ್ದೇಶಿಸುತ್ತಾರೆ. ಸರಳ ರಂಗಸಜ್ಜಿಕೆಯಲ್ಲಿ ಪೌರಾಣಿಕ ವೇಷ ಭೂಷಣಗಳೊಂದಿಗೆ ಯಶಸ್ವಿಯಾಗಿ ಈ ನಾಟಕ ಮೂಡಿಬಂದಿತ್ತು. ಹಲವಾರು ಮರು ಪ್ರದರ್ಶನಗಳ ಮೂಲಕ ವಸ್ತು ವಿಷಯಕವಾಗಿ ಚರ್ಚೆಗೆ ನಾಂದಿ ಹಾಡಿತ್ತು. ಕೂಡಲ ಸಂಗಮದ ಶರಣ ಉತ್ಸವ ಹಾಗೂ ಧಾರವಾಡದ ಹಬ್ಬಗಳಲ್ಲಿ ಈ ನಾಟಕವೂ ಪ್ರದರ್ಶನವಾದಾಗ ನಾಟಕವನ್ನು ನಿರ್ದೇಶಕ ಪ್ರಸ್ತುತ ಪಡಿಸಿದ ರೀತಿ, ನಾಟಕಕಾರನ ಮನೋಭಾವ ಮತ್ತು ಸಮಾಜದ ಮೇಲೆ ಅದರ ಪರಿಣಾಮ ಹಾಗೂ ನಾಟಕದ ವಸ್ತುವಿನ ಕುರಿತಂತೆ ವಿಪುಲವಾದ ಚರ್ಚೆಗಳಾಗಿದ್ದವು. ಇದೆಲ್ಲಕ್ಕಿಂತ ಮಿಗಿಲಾಗಿ ಇಲಕಲ್ಲಿನಲ್ಲಿ ಈ ನಾಟಕ ಆರಂಭದ ಪ್ರದರ್ಶನದೊಂದಿಗೆ ನಾಲ್ಕು ಪ್ರದರ್ಶನ ಕಂಡಿದ್ದು ಅದರಲ್ಲೂ ಎರಡು ಪ್ರದರ್ಶನಗಳು ಕೇವಲ ಮಹಿಳಾ ಪ್ರೇಕ್ಷಕರಿಗೆ ಮಾತ್ರ ಎಂದು ಆ ಎರಡು ಪ್ರದರ್ಶನಗಳು ಮಹಿಳಾ ಪ್ರೇಕ್ಷಕರಿಂದಲೇ ತುಂಬಿ ತುಳುಕಿ ಕೇವಲ ಮಹಿಳೆಯರಿಗಾಗಿ ನಾಟಕ ಪ್ರದರ್ಶಿಸಿದ ಈ ಘಟನೆ ಕರ್ನಾಟಕದ ರಂಗ ಇತಿಹಾಸದಲ್ಲಿಯೇ ಮೊದಲನೆಯದು ಹಾಗೂ ನನಗೂ ಕೂಡ ಪ್ರಥಮ ಎಂದು ನೆನೆಯುತ್ತಾರೆ ಅಶೋಕ.

## ಒಂದೇ ವಸ್ತುವಿನ ಎರಡು ನಾಟಕಗಳು

ಇದು ಕೂಡಾ ಮೊದಲನೆ ಸಾಲಿಗೆ ಸೇರುವ ಇನ್ನೊಂದು ಪ್ರಸಂಗ. ಆಗಲೇ ಗಿರೀಶ ಕಾರ್ನಾಡರ ನಾಗಮಂಡಲ ನಾಟಕವೂ ಕನ್ನಡ ಚಲನಚಿತ್ರವಾಗಿ ಪ್ರಶಸ್ತಿ

ಪಡೆದು ಯಶಸ್ವಿಯಾಗಿತ್ತು. ಆ ನಾಟಕದ ಕಥಾ ವಸ್ತು ಹಾಗೂ ಆಶಯದ ಕುರಿತಂತೆ ಮನೋವೈಜ್ಞಾನಿಕ ಚರ್ಚೆಗಳು ಸಾಗಿದ್ದವು. ಅದೇ ಸಂದರ್ಭದಲ್ಲಿ ಇನ್ನೊಬ್ಬ ಹೆಸರಾಂತ ಸಾಹಿತಿ ಚಂದ್ರಶೇಖರ ಕಂಬಾರರ ಜನಪದ ಶೈಲಿಯ ಹಾಡು, ನೃತ್ಯ ಮತ್ತು ಆಡುಭಾಷೆಯ ಸೊಗಸಿನಿಂದ ಕೂಡಿದ ಸಿರಿಸಂಪಿಗೆ ನಾಟಕವು ಉದಯವಾಣಿ ಪತ್ರಿಕೆಯ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಗಿತ್ತು. ವಿದೇಶಿ ನೆಲೆಗಟ್ಟಿನ ಸ್ನೇಹಿತರ ಚರ್ಚೆಯ ಮೂಲಕ ಮೂಡಿಬಂದ ನಾಟಕ ಎಂದು ನಾಗಮಂಡಲ ಕರೆಸಿಕೊಂಡಿದ್ದರೆ, ಸ್ವದೇಶಿ ಜನಪದದ ಮೂಲಕ ಅದೇ ಸಿದ್ಧವಸ್ತು, ವಿಷಯದ ಮೂಲಕ ನಾಟಕ ಸಿರಿಸಂಪಿಗೆ ಎಂದು ಸಾಹಿತ್ಯಿಕ ವಿಶೇಷಣೆಗಳು ತೀವ್ರವಾದ ಸಂದರ್ಭಗಳು; ಆಗ ಅಶೋಕ ಬಾದರದಿನ್ನಿ ಅವರು ಸ್ನೇಹರಂಗ(ಕ್ಕಾಗಿ ಈ ಎರಡೂ ನಾಟಕಗಳನ್ನು ಒಂದೇ ಸಲ ರಂಗಕ್ಕೆ ತರಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಪ್ರತಿದಿನ ಎರಡು ನಾಟಕಗಳ ತಾಲೀಮು.– ಎರಡಕ್ಕೂ ಬೇರೆ ಬೇರೆ ಪಾತ್ರಧಾರಿಗಳು.– ಎರಡರ ಪ್ರದರ್ಶನ ಶೈಲಿಗಳು ಬೇರೆ ಬೇರೆ ಆದರೆ ನಿರ್ದೇಶಕ ಒಬ್ಬನೇ, ಏಕಕಾಲಕ್ಕೆ ಒಂದೇ ವಸ್ತುವಿನ ಎರಡು ನಾಟಕಗಳನ್ನು ಒಂದೇ ದಿನ ಒಂದರ ನಂತರ ಇನ್ನೊಂದನ್ನು ಪ್ರದರ್ಶಿಸಿದ ನಿರ್ದೇಶಿಸಿದ ಹೆಗ್ಗಳಿಕೆ ಬಾದರದಿನ್ನಿಯವರದ್ದಾದರೆ; ಪ್ರದರ್ಶಿಸಿದ ಹೆಗ್ಗಳಿಕೆ ಇಲಕಲ್ಲಿನ ಸ್ನೇಹರಂಗದ್ದು ಎನ್ನಬಹುದು. ಇಲ್ಲಿ ಯಥಾಪ್ರಕಾರ ಸಿದ್ಧ ಶೈಲಿಯಲ್ಲಿಯೇ ನಾಗಮಂಡಲ ನಾಟಕವೂ ಪ್ರದರ್ಶಿತವಾದರೆ ಉತ್ತರ ಕರ್ನಾಟಕದ ಅದರಲ್ಲೂ ಬಾಗಲಕೋಟ ವಿಜಾಪುರ ಅವಳಿ ಜಿಲ್ಲೆಗಳ ಉಸಿರಾದ 'ಸಣ್ಣಾಟ'ದ ಶೈಲಿಯಲ್ಲಿ ಗ್ಯಾಸ ದೀಪದ(ಪ್ರೆಟ್ರೋಮ್ಯಾಕ್ಸ್), ಜಾನಪದ ಹಾಡುಗಳ ಮೂಲಕ ಸಿರಿಸಂಪಿಗೆಯನ್ನು ಪ್ರದರ್ಶಿಸಲಾಯಿತು. ಹೀಗೆ ಒಂದೇ ಶೈಲಿಯ ಈ ಎರಡು ನಾಟಕಗಳನ್ನು ವಿಭಿನ್ನ ನೆಲೆಗಟ್ಟಿನ ಪ್ರಕಾರಗಳಲ್ಲಿ ಏಕಕಾಲಕ್ಕೆ ಒಂದೇ ದಿನ ಒಂದರ ನಂತರ ಇನ್ನೊಂದು ಒಬ್ಬರೇ ನಿರ್ದೇಶಕರಿಂದ ಪ್ರದರ್ಶಿಸಲ್ಪಟ್ಟ ಪ್ರಸಂಗ ಕರ್ನಾಟಕದ ರಂಗ ಕ್ಷೇತ್ರದಲ್ಲಿಯೇ ಇಂತದ್ದೊಂದು ವಿಶಿಷ್ಟ ಪ್ರಥಮ ಪ್ರಯತ್ನ ಆಗಿರುವುದು ಗಮನಾರ್ಹ. ಅದೇ ರೀತಿ ಇಲಕಲ್ಲಿನ ಶ್ರೀ ವಿಜಯ ಮಹಾಂತೇಶ ಮಠಕ್ಕೆ ಶರಣರ ರೂಪಕ ಸಿದ್ಧಪಡಿಸಲು ಬಂದದ್ದೂ ಕೂಡಾ ದಾಖಲೆಯೇ. ಏಕೆಂದರೆ ಪಾರ್ಶ್ವವಾಯುಪೀಡಿತರಾಗಿ ಅದೇ ಆಗ ಆರೋಗ್ಯ ಸುಧಾರಿಸಿದ ತಕ್ಷಣವೇ ಅಣಿಯಾದ್ದುದು ಕೂಡಾ ಇಲಕಲ್ಲಿನ ಶ್ರೀಮಠದ ಶರಣರ ರೂಪಕದ ಮೂಲಕವೇ.

**ಅಚ್ಚಕನ್ನಡದಲ್ಲಿ ಮಾತನಾಡುವ ಸ್ಪರ್ಧೆ**

ವಿಶೇಷವಾಗಿ ಅಶೋಕ ಬಾದರದಿನ್ನಿ ಅವರು ಹೆಚ್ಚು ರಂಗ ಶಿಬಿರಗಳನ್ನು ಪಿ.ಯು.ಸಿ ಇಲ್ಲವೇ ಪದವಿ ಮಹಾವಿದ್ಯಾಲಯಗಳಲ್ಲಿ ಸಂಘಟಿಸಲ್ಪಟ್ಟಿವೆ. ಹಾಗೆಯೇ ಇಲಕಲ್ಲಿನಲ್ಲಿ ಕಾಲೇಜುಗಳ ಕಾರ್ಯಕ್ರಮಕ್ಕೆ ಮುಖ್ಯಅತಿಥಿಯಾಗಿ ಬಂದಾಗ

ಅಚ್ಚಕನ್ನಡದಲ್ಲಿಯೇ ಮಾತನಾಡುವ ಹಾಗೆಯೇ ಲಹರಿಯನ್ನು ಹರಿಬಿಡುವ ವಿಶಿಷ್ಟ ರೀತಿಯ ಸಂವಾದವನ್ನು ಮೊದಲಬಾರಿಗೆ ಕೈಗೊಳ್ಳುತ್ತಾರೆ. ಸಂವಾದದಲ್ಲಿ ಯಾವುದೇ ಬೇರೆ ಭಾಷಯ ಯಾವುದೇ ಒಂದು ಪದವು ಕೂಡ ಬರಕೂಡದು. ಮಾತಿನಲ್ಲಿ, ಚರ್ಚೆಯಲ್ಲಿ, ಸಂಭಾಷಣೆಯಲ್ಲಿ, ಪ್ರಶ್ನೆಯಲ್ಲಿ, ಬರಿ ಕನ್ನಡ ಪದಗಳು, ಇಂತಹದ್ದೊಂದು ಅಪರೂಪ ಹೊಸ ಸ್ಪರ್ಧೆಯನ್ನು ಆರಂಭಿಸಲು ಪ್ರೇರಕರಾಗುತ್ತಾರೆ. ಪ್ರಶ್ನೆ ಕೇಳುವ, ಆ ಮೂಲಕ ಇಕ್ಕಟಿಗೆ ಸಿಲುಕಿಸುವ, ಕನ್ನಡದ ಎಲ್ಲಾ ಭಾಷಾ ಪ್ರಭೇದಗಳನ್ನು ಒಳಗೊಳ್ಳುವ ಮೂಲಕ ಬಾದರದಿನ್ನಿಯವರು ಅಚ್ಚಕನ್ನಡದಲ್ಲಿಯೇ ಪ್ರಶ್ನೆ ಕೇಳುತ್ತಿದ್ದರು. ಅವರ ಪ್ರಶ್ನೆಗೆ ಉತ್ತರ ಕೊಡಬೇಕಾದವರು ವಿದ್ಯಾರ್ಥಿಗಳು. ಪ್ರತಿಯೊಬ್ಬ ವಿದ್ಯಾರ್ಥಿಯೊಂದಿಗೆ ೩ ನಿಮಿಷದ ಈ ಸಂವಾದದಲ್ಲಿ ಬೇರೆ ಭಾಷೆಯ ಪದವನ್ನು ಬಳಸದೇ ಉತ್ತರಿಸುತ್ತಾ ಸಂಪೂರ್ಣ ವೇಳೆಯನ್ನು ಉಪಯೋಗಿಸಿಕೊಂಡವರಿಗೆ ಪ್ರಥಮ ಬಹುಮಾನ, ಅದಕ್ಕೂ ಕಡಿಮೆ ವೇಳೆ ದ್ವಿತೀಯ ಬಹುಮಾನ, ನಂತರ ತೃತೀಯ ಬಹುಮಾನ ಕೊಡುವ ಈ ಸ್ಪರ್ಧೆಗಳು ಸತತವಾಗಿ ಐದು ವರ್ಷಗಳವರೆಗೆ ನಡೆದಿದ್ದವು ನಿಯಮಿತವಾಗಿ. ಈಗ ಆಗಾಗ ಇಲಕಲ್ಲಿಗೆ ಬಾದರದಿನ್ನಿಯವರು ಮತ್ತೆಮತ್ತೆ ಬಂದಾಗ ಇಲಕಲ್ಲಿನ ಕಾಲೇಜುಗಳಲ್ಲಿ ಅವರೊಂದು ರಂಗ ಶಿಕ್ಷಣದ ಭಾಷಣ ಹಾಗೂ ಅಚ್ಚಕನ್ನಡದಲ್ಲಿ ಮಾತನಾಡುವ ಈ ಸ್ಪರ್ಧೆಯ ಆಯೋಜನೇ ಸಾಗಿಯೇ ಇರುತ್ತದೆ. .

**ಮತ್ತೆ ಮತ್ತೆ ಮಾರ್ಕಂಡೇಯ ಹಾಗೂ ಮೃತ್ಯುಂಜಯನಾದದ್ದು**

ಈ ನಡುವೆ ಚಿತ್ರರಂಗಕ್ಕೆ ಮತ್ತು ಬಾದರದಿನ್ನಿಯವರಿಗೆ ಅಂಟಿದ ಬೆಸುಗೆಯ ಸೂಸೂತ್ರವಾಗಿ ಮುಂದುವರೆಯಲಿಲ್ಲ.. ಹೀಗಾಗಿ ಚಿತ್ರಜಗತ್ತಿನೊಂದಿಗೆ ಇದ್ದಾಗ ನಿರ್ದೇಶನ ಕುಂಠಿತಗೊಂಡಿತ್ತು. ಜೊತೆಗೆ ಆರಂಭದಿಂದಲೇ ಮೈಗಂಟಿಕೊಂಡಿದ್ದ ಎಡೆಬಿಡದ ಸಿಗರೇಟು, ಗುಂಡು ಇತ್ಯಾದಿಗಳು ಇವರ ವೈಮನಸಗಳನ್ನು ನುಂಗಿಹಾಕಿದ್ದವು. ಆದರೆ–ಕೆಲಸದಲ್ಲಿದ್ದಾಗ ಇವನ್ನು ಮುಟ್ಟದ ಶಿಸ್ತಿನ ಸಿಪಾಯಿ, ಗುಂಡು ಹಾಕುವದು ಕೆಲಸ ಮುಗಿದ ನಂತರವೇ ಇನ್ನಿತರೆ ಸಂದರ್ಭಗಳಲ್ಲಿ ಧೂಮ್ರ ಪಾನಕ್ಕೆ ಮೇರೆ ಇರಲಿಲ್ಲ. ಒಂದು ಸಲ ಇವರು ಸಿಗರೇಟು ಸೇದುವದು ನೋಡಿಯೇ ಅಪರಿಚಿತರು ಬೆಚ್ಚಬೇಕು. ಹಾಗಿತ್ತು, ಇವರ ಸಿಗರೇಟು ಶೈಲಿ. ಎಡಗೈಯ್ಯಿಂದ (ಹೆಬ್ಬೆರಳು–ತೊರು ಬೆರಳುಗಳೊಂದಿಗೆ) ಗಡ್ಡ ಚಿವುಟಿಕೊಳ್ಳುತ್ತ ಬಲಗೈಯ್ಯಿಂದ ಆಗಾಗ ಎಡಗೈಗೂ ವರ್ಗಾಯಿಸುತ್ತ ಸಿಗರೇಟಿನ ದಮ್ಮು ಎಳೆಯುತ್ತ ನಾಟಕ ನಿರ್ದೇಶಿಸುವ ರೀವಿ ವಿಶಿಷ್ಟವಾದುದ್ದಾಗಿತ್ತು.

ಅದೇನು ಕರ್ಮವೋ ಗೊತ್ತಿಲ್ಲ ಬಹಳಷ್ಟು ಜನ ಈ ಮೇರು ನಿರ್ದೇಶಕರುಗಳಿಗೆಲ್ಲ ಈ ಒಳ್ಳೆಯ ಚಟಗಳು! ಸರ್ವೇಸಾಮಾನ್ಯ ಎಲ್ಲರಿಗೂ ಸಿಗರೇಟು ಗುಂಡು–

ಉಳಿದೆಲ್ಲವುಗಳಿಗಿಂತ ಸಖಿ/ಸಖಿಗಳಾಗಿರುವದನ್ನು ನಾವು ಕಾಣುತ್ತೇವೆ.

ಚಿತ್ರರಂಗದ ಅವಕಾಶಗಳು ಕಡಿಮೆಯಾಗಿ ಮತ್ತೆ ಪೂರ್ಣಪ್ರಮಾಣದಲ್ಲಿ ನಾಟಕದತ್ತ ಹೊರಳಿದ ಬಾದರದಿನ್ನಿ ಅವರನ್ನು ಸಿರಿಗೆರೆಯ ಶ್ರೀಮಠ ಮತ್ತೆ ಕೈ ಮಾಡಿ ಕರೆಯಿತು. ಶಿಸ್ತು, ಏಕಾಗ್ರತೆಯ ಪಾಠ, ಶಿಸ್ತಿನ ಸಿಪಾಯಿ. ಈ ಶಿಸ್ತನ್ನು ಇಲಕಲ್ಲಿನ ಸ್ನೇಹರಂಗಕ್ಕೆ ತುಘಲಕ್ ನಿರ್ದೇಶಿಸುವಾಗ ತುಘಲಕ್ ಪಾತ್ರಧಾರಿ ಶಿಕ್ಷಕರಾಗಿ ಪದೇ ಪದೇ ಮಾರ್ಗದರ್ಶಿಸಿದಾಗಲೂ ತಪ್ಪುತ್ತಿರುವದನ್ನು ಕಂಡು 'ಮೊದಲು ಏಕಾಗ್ರತೆ ಸಾಧಿಸಯ್ಯ' ಎಂದು ಕೆನ್ನೆಗೆ ಏಟು ಕೊಟ್ಟಿರುವುದನ್ನು ಸ್ವತಃ ಈ ಲೇಖಕ ಕಂಡಿದ್ದಾನೆ.

ಆದರೆ ಈ ಶಿಸ್ತಿನ ನಡುವೆ ಸಿಗರೇಟ ಪ್ರಸ್ತಾಪ ಬಂದರೆ. . . ಅದೆಲ್ಲಿ ಕೋಪ ಇರುತ್ತಿತ್ತೊ ಗೊತ್ತಿಲ್ಲ. . . ಸಿಗರೇಟು ಬಿಟ್ಟು ನಾಟಕ ಮಾಡಕ್ಕೆ ಆಗಲ್ಲಯ್ಯ ಅಂತ ಖಡಕ್ಕಾಗಿಯೇ ಹೇಳುತ್ತಿದ್ದರು. ತಾಲೀಮು ನಂತರ ರಾತ್ರಿ ಗುಂಡು ಕಾರ್ಯಗಳ ಒತ್ತಡ, ಓಡಾಟ. . . ಹೀಗೆ ನಾಟಕದ ಸಿದ್ಧತೆ ಸಾಗಿದಾಗ. . . ಅನಾರೋಗ್ಯ ಮತ್ತೆ ಕುಟುಕುತ್ತದೆ. ಅದೇನು ಮಾಡೀತು ಎನ್ನುವ ಉಮೇದು ಅದಕ್ಕೆ ಕಾರಣ. ಗಂಡು ಮೆಟ್ಟಿದ ನೆಲ ವಿಜಾಪುರದ ಮಣ್ಣು ಮತ್ತು ಯೌವನದಲ್ಲಿ ಅಲ್ಲಿಯ ಬಿಳಿಜೋಳದ ರೊಟ್ಟಿಯ ಖಸುವು,

ಆದರೆ ಈ ಖಸವು ಮುಂದಿನ ಚಿತ್ರದುರ್ಗದ ಶ್ರೀಮಠಕ್ಕೆ ನಾಟಕದ ನಿರ್ದೇಶನಕ್ಕೆ ಬಂದಾಗ ಅದು ಠುಸ್ ಎನ್ನುತ್ತದೆ. ಅಲ್ಲಿ ತಾಲೀಮು ಆರಂಭಿಸಿದ ಮೇಲೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಆದರೆ ಈ ಆಸಾಮಿ ಅದರ ಕಡೆಗೆ ಲಕ್ಷ್ಯವಹಿಸದೆ ನಾಟಕದ ತಯ್ಯಾರಿಯಲ್ಲಿಯೇ ತೊಡಗುತ್ತದೆ. ದೇಹವು ಕೇಳಬೇಕಲ್ಲ. ಆಗ ಅಶೋಕ ಪೂರ್ಣ ನಿಸ್ತೇಜಿತರಾಗುತ್ತಾರೆ. ಈ ಸ್ಥಿತಿ ಎಲ್ಲಿಯವರೆಗೆ ಬಂದು ನಿಲ್ಲುತ್ತದೆ ಎಂದರೆ ತಾಲೀಮಿಗಾಗಿ ಅಶೋಕರನ್ನು ಹೊತ್ಕೊಯಿದು ತರುವ ಸನ್ನಿವೇಶವೂ ನಿರ್ಮಾಣವಾಗುತ್ತದೆ. ಅದರ ಪರಿಣಾಮ ಅದು ಬಿಳಿ ಕಾಮಾಲೆ ಎಂದು ಗುರುತಾಗುತ್ತದೆ. ಇದಕ್ಕಿಂತಾ ಅಚ್ಚರಿ ಎಂದರೆ ಇವರು ದೇಹದಲ್ಲಿ ಆಗ ಹೆಮೋಗ್ಲೋಬಿನ್ ಪ್ರಮಾಣ ನಾಲ್ಕಕ್ಕೆ ಬಂದು ತಟಸ್ಥವಾಗಿರುತ್ತದೆ. ಸಾಮಾನ್ಯ ಆರೋಗ್ಯವಂತ ದೇಹದಲ್ಲಿ ಈ ಪ್ರಮಾಣ ಹನ್ನೆರಡರ ಮೇಲೆ ಇರುಬೇಕು. ಅದು ಆರು, ಏಳಕ್ಕೆ ಇಳಿದರೇನೇ ಬದುಕುವದು ದುಸ್ಸಾಧ್ಯ. ಅಂತಹದರಲ್ಲಿ ಅಶೋಕರದ್ದು ನಾಲ್ಕರ ಪ್ರಮಾಣ. ಇನ್ನೂ ಇವರ ಕಥೆ ಏನೋ ಎಂದುಕೊಂಡ ಮುರುಘ ರಾಜೇಂದ್ರಶ್ರೀಗಳು ಅಶೋಕ ಬಹಳ ದಿನ ಇರಲಾರ ಎಂದು ಕೊಂಡು ಈ ಸಂಧರ್ಬದಲ್ಲಿಯೇ ಸತ್ಕರಿಸಿ ಬೀಳ್ಕೊಡುತ್ತಾರೆ. ಚಿತ್ರದುರ್ಗ ಹಾಗೂ ಬೆಂಗಳೂರಿನಲ್ಲಿ ವೈದ್ಯರು ಉಪಚಾರಕ್ಕೆ ನಿರುತ್ಸಾಹ ತೋರುತ್ತಾರೆ. ಆಗ ಇವರ ಸಹೋದರಿ ಆದದ್ದಾಗಲಿ

ಅಣ್ಣನ ಕೊನೆ ಆಗುವಂತಿದ್ದರೇ ವಿಜಾಪುರದಲ್ಲಿಯೇ ಆಗಲಿ ಎಂದು ಅಶೋಕ ಅವರನ್ನು ವಿಜಾಪುರಕ್ಕೆ ಕರೆತರುತ್ತಾರೆ. ಅಲ್ಲಿ ಇವರ ಚಡ್ಡಿ ದೋಸ್ತ್ ಆಗಿದ್ದ ಡಾ. ವಿಲಾಸ ಕುಲಕರ್ಣಿ ಅಶೋಕರನ್ನು ಅಂತಹ ಸ್ಥಿತಿಯಲ್ಲಿಯೂ ಕಂಡು 'ಹಿಮೋಗ್ಲೋಬಿನ್ ನಾಲ್ಕಕ್ಕೆ ಇಳಿದ ಮೇಲೂ ನೀ ಹ್ಯಾಂಗ್ ಬದುಕಿದಿ' ಎಂದು ಛೇಡಿಸಿ ವೈದ್ಯೋಪಚಾರ ಆರಂಭಿಸುತ್ತಾರೆ. ಅಗ ರಕ್ತದ ಅವಶ್ಯಕತೆ ಕಂಡು ಇವರ ಸಹೋದರ ರಕ್ತವನ್ನು ನೀಡುತ್ತಾರೆ. ಬಹಳಷ್ಟು ರಕ್ತ ಮರುಪೂರಣದ ನಂತರ ಪೂಜ್ಯ ಶ್ರೀ ಸತ್ಕಾರದ ಫಲವೋ ಅಥವಾ ವೈದ್ಯರ ಹಸ್ತಗುಣವೋ ಇಲ್ಲವೇ ರಂಗಾಸಕ್ತರ ಹಾರೈಕೆಯೋ ಒಟ್ಟಾರೆ ಅಶೋಕ ಎರಡನೆಯ ಸಲ ಸಾವನ್ನು ಗೆದ್ದು ಮಾರ್ಖಂಡೆಯವರಂತಾಗುತ್ತಾರೆ.

ಮುಂದೆ ೨೦೦೭ರಲ್ಲಿ ಸಾಣೇಹಳ್ಳಿ ಶ್ರೀಮಠಕ್ಕೆ ಉರಿಲಿಂಗ ಪೆದ್ದಿ ನಾಟಕ ನಿರ್ದೇಶಿಸಲು ಬಂದಾಗ ಅನಿಯಮಿತ ದೈನಂದಿನ ಆಗು ಹೋಗುಗಳಿಂದಾಗಿ ಪಾರ್ಶ್ವವಾಯುವಿಗೆ ತುತ್ತಾಗಿ ದಾವಣಗೆರೆಯ ಬಾಪೂಜಿ ಆಸ್ಪತ್ರೆಗೆ ಅಶೋಕ ಅವರನ್ನು ಆರೈಕೆಗಾಗಿ ಸಾಗಿಸಲಾಗುತ್ತದೆ. ಅದೇ ಸಂದರ್ಭದಲ್ಲಿ ದಾವಣಗೆರೆಯಲ್ಲಿ ವೃತ್ತಿರಂಗ ಸಮಾವೇಶ ಸೇರಿರುತ್ತದೆ. ಕರ್ನಾಟಕಾದ್ಯಂತ ವೃತ್ತಿರಂಗದ ಅಧ್ವರ್ಯುಗಳು, ಕಲಾವಿದರು, ವೃತ್ತಿರಂಗದೊಂದಿಗೆ ಸಂಬಂಧವಿರಿಸಕೊಂಡ ಹವ್ಯಾಸಿಗಳು ಈ ಸಮಾವೇಶದಲ್ಲಿ ಭಾಗಿಯಾಗಿರುತ್ತಾರೆ. ಆಗ ಕಪ್ಪಣ್ಣ (ಜಿ.ಶ್ರೀನಿವಾಸ)ನಾಟಕ ಅಕಾಡೆಮಿ ಅಧ್ಯಕ್ಷರು. ಬಾದರದಿನ್ನಿ ಅವರ ಜನಪ್ರಿಯತೆ ಹೇಗಿತ್ತೆಂದರೆ ಸಮಾವೇಶದ ಸಂದರ್ಭದಲ್ಲಿಯೇ ವೇಳೆ ತೆಗೆದುಕೊಂಡು ಕಪ್ಪಣ್ಣರಾದಿಯಾಗಿ ಎಲ್ಲರೂ ಆಸ್ಪತ್ರೆಗೆ ಬೇಟಿಕೊಟ್ಟು ಬೇಗ ಗುಣವಾಗುವಂತೆ ಹಾರೈಸಿ ಬಂದಿದ್ದರು. ಈ ಲೇಖಕ ಕೂಡ ಇಲಕಲ್ಲಿನ ವೃತ್ತಿರಂಗಸಂಗದಲ್ಲಿ ಹಾಗೂ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ನಾಟಕಕಾರ ದಿ.ಧುತ್ತರಗಿ ಅವರ ಸ್ನೇಹಪರತೆಯಲ್ಲಿ ಹಾಗೂ ಹಲವಾರು ಕಂಪನಿ ಮತ್ತು ಕಲಾವಿದರೊಂದಿಗೆ ಸ್ನೇಹವಿದ್ದುದರಿಂದ ಸಮಾವೇಶದಲ್ಲಿ ಭಾಗಿಯಾಗಿ–ತಮ್ಮೊಂದಿಗೆ ನಿಕಟ ಸಂಪರ್ಕದಲ್ಲಿದ್ದ ಬಾದರದಿನ್ನಿಯವರರಿಗೆ ಹೀಗಾಗಿದೆ ಎಂದು ಕೇಳಿ ರಂಗಾಸಕ್ತ ಗೆಳೆಯರೊಂದಿಗೆ ಧಾವಿಸಿ–ಅಶೋಕ ಅವರ ಸ್ಥಿತಿ ನೋಡಿ ನಾವೆಲ್ಲ ಮಮ್ಮಲ ಮರಗಿದ್ದೆವು. ಮೊದಲೇ ಕೃಶ ಶರೀರ. . . ಒಂಟಿ ಎಲುಬಿನ ಗೂಡು, ಕೃಶಶರೀರ ಎಲುಬಿನ ಹೊರತು ಏನೂ ಕಾಣುತ್ತಿರಲಿಲ್ಲ, ಆಮೇಲೆ ಪಾರ್ಶ್ವವಾಯುವಿನ ಉಪಟಳ ಬೇರೆ. ಅಲ್ಲಿಗೆ ಹೋಗಿದ್ದ ನಾವೆಲ್ಲಾ ಅಂದು ಅಶೋಕ ಅವರನ್ನು ಆ ಸ್ಥಿತಿಯಲ್ಲಿ ಕಂಡು ಇನ್ನು ಬಾದರದಿನ್ನಿ ನಮ್ಮಿಂದ ದೂರ ಅಂತ ಅಂದುಕೊಂಡವರೇ ಬಹಳ ಮಂದಿ ಆಗ.

ಆದರೆ ಈ ರಂಗದ ಮಂದಿಯ ಆಟ ಕಂಡ ಯಮಧರ್ಮರಾಯನು ಮತ್ತೆ ತನ್ನನ್ನೂ ಎಲ್ಲಿ ನಾಟಕ್ಕೆ ಸೇರಿಸುತ್ತಾರೆ ಈ ನಿರ್ದೇಶಕರು ಎಂದು ಅಂದುಕೊಂಡಿರಬೇಕು

ಹೀಗಾಗಿ ಮನೆಯವರ, ಶ್ರೀಮತಿಯವರ, ಅದೆಷ್ಟೋ, ಸ್ನೇಹಿತರ ಸದಾಶಯದ ಹಾರೈಕೆಗಳು ಅಶೋಕ ಅವರನ್ನು ಪಾರ್ಶ್ವವಾಯುವಿನಿಂದ ಮುಕ್ತರನ್ನಾಗಿಸಿ ಮತ್ತೊಮ್ಮೆ ಹುಟ್ಟಿ ಬಂದ ಮೃತ್ಯುಂಜಯನಾಗುತ್ತಾರೆ. ಹೀಗೆ ಮೂರನೇಯ ಸಲ ಸಾವಿನ ಮನೆಯ ಕದ ತಟ್ಟಿ ಇನ್ನೂ ನಾಟಕಕ್ಷೇತ್ರದಲ್ಲಿ ಮಾಡುವ ಕೆಲಸ ಬಹಳ ಇದೆ ಎಂದು ಧೀಶಕ್ತಿಯಿಂದ ಮರಳಿಬಂದದ್ದು ಒಂದು ವಿಶಿಷ್ಟ ಪ್ರಸಂಗ. ಈ ಘಟನೆಗಳನ್ನು ನಡೆದಾಗ ಬಹುಶಃ ಬಾದರದಿನ್ನಿ ಅವರಿಗೂ ಯಮಧರ್ಮರಾಯನಿಗೂ ಯಾವುದೋ ನಂಟು ಇರಬೇಕು. ಪ್ರತಿ ಸಲ ಆತ ಈ ರಂಗದ ಮಂದಿಗೆ ಅಂಜಿ ಬದುಕನ್ನು ಕೊಡುತ್ತಲೇ ಸಾಗುತ್ತಾನೆ. ಇದು ನಿಜಕ್ಕೂ ಬಾದರದಿನ್ನಿ ಅವರ ಜೀವನದಲ್ಲಿ ಕಂಡ ವಿಚಿತ್ರ ಯೋಗಾಯೋಗದ ದೈವಲೀಲೆ ಅಥವಾ ಹುಟ್ಟುತ್ತಲೇ ಇಂತಹ ಸಾವು-ಹುಟ್ಟುಗಳ ವೈಶಿಷ್ಟತೆಯ ಸಂಜೀವಿನಿಯನ್ನು ಪಡೆದುಕೊಂಡೇ ಜನಿಸಿದ್ದರೇನೋ ಎಂದು ಅನಿಸುತ್ತಾದೆ.

### ಛಲ ಬಿಡದ ತ್ರಿವಿಕ್ರಮ

ಪಾರ್ಶ್ವವಾಯುವಿನ ಹೊಡೆತ, ಅನಾರೋಗ್ಯ, ಸಿಗರೇಟು, ಕುಡಿತಗಳ ಪ್ರಭಾವದಿಂದ ಕೃಶವಾಗಿ ಕುಗ್ಗಿ ಹೋಗಿದ್ದ ಬಾದರದಿನ್ನಿ ಅವರು ದಾವಣಗೆರೆ ಬಾಪೂಜಿ ಆಸ್ಪತ್ರೆಯಿಂದ ಮರುಜೀವ ಪಡೆದು- ಚಿತ್ರದುರ್ಗದ ಮುರುಘರಾಜೇಂದ್ರ ಶ್ರೀಮಠದಲ್ಲಿ ೨೦೦೨ರಲ್ಲಿ ಎಸ್.ಜೆ.ಎಮ್. ಸಂಗೀತ ನೃತ್ಯ ನಾಟಕ ಶಾಲೆಯ ಪ್ರಾಚಾರ್ಯರಾಗಿದ್ದಾಗ-ಅಲ್ಲಿಯೇ ಮನೆಮಾಡಿದ್ದರು. ಪತ್ನಿ ಅನಸೂಯಮ್ಮನವರು-ಮಗುವಿನಂತೆ ಆರೈಕೆಮಾಡುತ್ತಾರೆ. ಮಕ್ಕಳ ಪ್ರೀತಿ, ಅಭೀಪ್ಸೆ, ಸ್ನೇಹಿತರ ಹಾರೈಕೆಗಳ ಫಲವಾಗಿ-ಅಷ್ಟೇ ಕ್ಷಿಪ್ರದಲ್ಲಿ ಅಶೋಕ ಅವರು ಆರೋಗ್ಯವನ್ನು ಮೈಗೂಡಿಸಿಕೊಂಡು ಸನ್ನದ್ಧರಾಗುತ್ತಾರೆ.

ಮನಸ್ಸು ನಾಟಕಗಳತ್ತ ತುಡಿಯತೊಡಗುತ್ತದೆ. ಪಾರ್ಶ್ವವಾಯು ಪರಿಣಾಮ, ಅಸ್ಥಿರ ದೇಹದ ಕುಲುಕಾಟ, ಇವುಗಳ ನಡುವೆ ನಾಟಕ, ನಿರ್ದೇಶನದಂಥ ತಪಸ್ಸು. ನಿಜಕ್ಕೂ, ನಾಟಕ ನಿರ್ದೇಶನ ಒಂದು ತಪಸ್ಸೇ ಸರಿ .ಸಮಯ, ನಿಯಮಿತತನ, ಶ್ರದ್ಧೆ, ಪ್ರಯತ್ನಗಳು, ಬಹಳಷ್ಟುಸಲ ವಿಶ್ರಾಂತಿಯೇ ಇಲ್ಲದ ಶ್ರಮವನ್ನು ನಾಟಕ ಕ್ಷೇತ್ರ ಬಹುಪಾಲು ಬಯಸುತ್ತದೆ. ನಾಟಕ ಮುಗಿದ ಮೇಲೆ ಅದೇ ರೀತಿಯ ತೃಪ್ತಿಯನ್ನು ನೀಡುತ್ತದೆ. ಇವರ ಅನಾರೋಗ್ಯ ಮನಗಂಡ ಬಹಳಷ್ಟು ತಂಡಗಳು ಅಶೋಕ ಅವರಿಗೆ ಕರೆ ನೀಡಲು ಹಿಂಜರಿಯುತ್ತವೆ. ಆದರೆ ಒಳ ಮನಸ್ಸಿನ ತುಡಿತ ಕೇಳಬೇಕಲ್ಲ.

ಅನಾರೋಗ್ಯ ಕಾರಣ ಅಷ್ಟಕ್ಕೆ ನಿಲ್ಲಿಸಿದ್ದ ನಾಟಕವನ್ನು ಅಂಥ ಅಶಾರೀರಕ

ಅಶಾಂತಿಯ ನಡುವೆಯೇ ಸಮರ್ಥವಾಗಿ ಪೂರ್ಣಗೊಳಿಸುತ್ತಾರೆ. ನಾಟಕ ತನ್ನ ಪರಿಣಾಮಬೀರಿ ಯಶಸ್ಸು ಸಾಧಿಸುತ್ತದೆ. ಬಾದರದಿನ್ನಿ ಅವರ ಮನೆಯವರಿಗೆ ಒಂದು ನಿರುಮ್ಮಳದ ನೆಮ್ಮದಿ ದೊರೆಯುತ್ತದೆ.

ಶ್ರೀಮಠದಲ್ಲಿಯೇ ಸಾಮಾಜಿಕ ಕಾರ್ಯದಲ್ಲಿ, ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ ಶ್ರೀ ಕೆ.ಎಂ. ವಿರೇಶ ಅವರು ಶ್ರೀಮಠದಿಂದ ಹೊರಬಂದು ಸ್ವತಂತ್ರವಾಗಿ ಒಂದು ಶಿಕ್ಷಣ ಸಂಸ್ಥೆಯನ್ನು ಆರಂಭಿಸುತ್ತಾರೆ. ಡಿ.ಎಡ್.,ಬಿ.ಎಡ್.,ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ, ತಾಂತ್ರಿಕ–ಐ.ಟಿ.ಐ ಕೋರ್ಸಗಳು ಎಲ್ಲ ಸೇರಿ ಬಾಪೂಜಿ ವಿದ್ಯಾಸಂಸ್ಥೆ ಆರಂಭವಾಗಿರುತ್ತದೆ. ಮೊದಲಿನಿಂದಲೂ ಅಶೋಕ ಅವರ ಕಟ್ಟಾ ಅಭಿಮಾನಿ, ಸಾಂಸ್ಕೃತಿಕ ಆಸಕ್ತಿ ಹೊಂದಿದ ವಿರೇಶ ಅವರು ಅಶೋಕ ಅವರಿಗಾಗಿಯೇ ತಮ್ಮ ಸಂಸ್ಥೆಯಲ್ಲಿ ಸಾಂಸ್ಕೃತಿಕ ನಿರ್ದೇಶಕ ಸ್ಥಾನವೊಂದನ್ನು ಸೃಜಿಸಿ–ಅದರ ನಿರ್ದೇಶನದ ಜವಾಬ್ದಾರಿಯನ್ನು ಬಾದರದಿನ್ನಿ ಅವರಿಗೆ ವಹಿಸುತ್ತಾರೆ. ತಮ್ಮ ಶಿಕ್ಷಣ ಸಂಸ್ಥೆಯ, ವಿದ್ಯಾರ್ಥಿಗಳಿಗೆ, ಯೋಗ ತರಬೇತಿ, ರಂಗಭೂಮಿಮುಖೇನ ಶಿಕ್ಷಣದಂಥ ಪರಿವರ್ತನಾಶೀಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ನಿಗದಿತವಾದ ಎಲ್ಲ ರಾಷ್ಟ್ರೀಯ ಹಬ್ಬಗಳಲ್ಲಿ, ಸಂಸ್ಥೆಯ ಪ್ರಮುಖ ಕಾರ್ಯಕ್ರಮಗಳಲ್ಲೂ, ಶಾಲಾರಂಭ, ಮುಕ್ತಾಯದ ಸ್ನೇಹ ಸಮ್ಮೇಳನ, ಒಕ್ಕೂಟದಂಥ ಕಾರ್ಯಕ್ರಮಗಳಲ್ಲಿ ಬಾದರದಿನ್ನಿ ಅವರ ಸಂಯೋಜನೆಯ ವೈವಿಧ್ಯ ಪೂರ್ಣ ಸಾಂಸ್ಕೃತಿಕ ಕಾರ್ಯಕ್ರಗಳು, ರೂಪಕಗಳು, ಪ್ರಹಸನ, ಏಕಾಂಕ ನಾಟಕಗಳು, ಏಕಪಾತ್ರಾಭಿನಯ, ನೃತ್ಯ, ಕಾರ್ಯಕ್ರಮಗಳು ಎಡೆಬಿಡದೆ ಆಯೋಜನೆಗೊಳ್ಳುತ್ತವೆ.

ರಾಷ್ಟ್ರೀಯ ಹಬ್ಬಗಳಲ್ಲಂತೂ ದೇಶಭಕ್ತಿಯ ರೂಪಕಗಳು ಈ ಸಂಸ್ಥೆಯಿಂದ ಬಾದರದಿನ್ನಿ ಅವರ ನೇತೃತ್ವದಲ್ಲಿ ನಿರಂತರವಾಗಿ ಪ್ರದರ್ಶಿಸಲ್ಪಟ್ಟು ಚಿತ್ರದುರ್ಗ ಜನತೆಯ ಅಪಾರ ಮೆಚ್ಚುಗೆಗೆ ಕಾರಣವಾದ್ದುದಲ್ಲದೆ ಜಿಲ್ಲಾಡಳಿತದ ಅಪೂರ್ವ ಪ್ರಶಂಸೆಗೆ ಕಾರಣವಾಗುತ್ತವೆ. ಹೀಗಾಗಿ ಜಿಲ್ಲಾಡಳಿತದಲ್ಲಿ, ಅಧಿಕಾರಿವರ್ಗದಲ್ಲೂ, ದುರ್ಗದ ಜನರ ಮನೋಭಾವದಲ್ಲಿ,ದೈಹಿಕ ಅಸಾಮರ್ಥ್ಯದ ನಡುವೆಯು ಇಂಥಹ ಅಪರೂಪದ ಪ್ರಸಂಗಗಳ ಯಶಸ್ಸು ಬಾದರದಿನ್ನಿ ಅವರನ್ನು ಇನ್ನಷ್ಟು, ಮತ್ತಷ್ಟು ಗಟ್ಟಿಗೊಳಿಸುತ್ತವೆ. ಅದರ ಪರಿಣಾಮೇ ಮುಂದೆ ದುರ್ಗದಲ್ಲಿ ಬಾದರದಿನ್ನಿ ಅವರ ಸಂತೃಪ್ತ ಜೀವನಕ್ಕೆ ಕಾರಣವಾಗುತ್ತದೆ.

ಹೀಗೆ ಶರೀರದ ಅಸಮತೋಲನದ ನಡುವೆಯೂ ಛಲ ಬಿಡದ ತ್ರಿವಿಕ್ರಮನಂತೆ ನಾಟಕವೇ ನನ್ನುಸಿರು ಎಂದು ರಂಗಭೂಮಿಯನ್ನು ಅನನ್ಯವಾಗಿ ಪ್ರೀತಿಸತೊಡಗಿದಾಗ ಈ ಸ್ಥಿತಿಯಲ್ಲಿ ಪರಿಪೂರ್ಣವಾಗಿ ಅದರಲ್ಲಿ ತೊಡಗಿಸಿಕೊಳ್ಳುತ್ತಾರೆ. ಅದರ ಫಲವೇ

ಇಲಕಲ್ಲಿನ ಶ್ರೀ ಚಿತ್ತರಗಿ ವಿಜಯ ಮಹಾಂತೇಶ ಸಂಸ್ಥಾನಮಠದ ಆಹ್ವಾನ. ಅದು ಮನೆ ಇದ್ದ ಸ್ಥಳ ಬಿಟ್ಟು ದೂರದ ೨೦೦ ಕಿಮಿ.ದಲ್ಲಿ ಮನೆ ಮಠ, ಮಡದಿ, ಮಕ್ಕಳನ್ನು ಬಿಟ್ಟು ದೈಹಿಕ ನ್ಯೂನ್ಯತೆಯ ಈ ಸ್ಥಿತಿಯಲ್ಲಿ ಬಂದು ಅದೇ ದೃಢಚಿತ್ತ, ದೃಢಮನಸ್ಸಿನಿಂದ ಕಾರ್ಯಪೂರೈಸಿದ ಧಿಮಂತಿಕೆ ಸಾಧಿಸುತ್ತಾರೆ.

ಕಿರಿಯ ಶ್ರೀ ಗುರು ಮಹಾಂತ ಸ್ವಾಮಿಗಳು ರಚಿಸಿದ ಶ್ರೀ ವಿಜಯಮಹಾಂತ ಸ್ವಾಮಿಗಳು ಚಟಗಳನ್ನು ಬೇಡಿ ಭಕ್ತರನ್ನು ವ್ಯಸನಮುಕ್ತರನ್ನಾಗಿಸುವ 'ಮಹಾಂತ ಜೋಳಿಗೆ', 'ಭುವನದ ಬೆಳಗು' ರೂಪಕಗಳನ್ನು ಮೊದಲ ಹಂತದಲ್ಲಿ ಸಿದ್ಧಪಡಿಸಿ ಯಶಸ್ವಿಯಾಗುತ್ತಾರೆ. ಎರಡನೇ ಹಂತದಲ್ಲಿ ಮೂರನೇ ರೂಪಕವಾಗಿ ಸೈನಿಕರ ಮಹತ್ವಸಾರುವ 'ಜೈ ಜವಾನ' ರೂಪಕ ಸಿದ್ಧವಾಗಿ ಪ್ರದರ್ಶಿತವಾಗುತ್ತದೆ. ಹೀಗೆ ಮೂರು ರೂಪಕಗಳು ಬಾದರದಿನ್ನಿಅವರ ನಿರ್ದೇಶನದಲ್ಲಿ ರೂಪಗೊಂಡು ಪ್ರದರ್ಶಿಸಲ್ಪಟ್ಟು ಜನಮನ ಸೂರೆಗೊಳ್ಳುತ್ತವೆ. ಬೆಂಗಳೂರಾದಿಯಾಗಿ ಕರ್ನಾಟಕದ ಎಲ್ಲ ಪ್ರಮುಖ ನಗರಗಳಲ್ಲಿ ಕನ್ನಡ ಮಾತನಾಡುವ ಮಹಾರಾಷ್ಟ್ರದ ಕನ್ನಡ ಪ್ರದೇಶಗಳಲ್ಲಿ ಈ ರೂಪಕಗಳು ಪ್ರದರ್ಶಿಸಲ್ಪಟ್ಟು ಜನಮನ್ನಣೆ ಗಳಿಸುವದರೊಂದಿಗೆ ಸಾಮಾಜಿಕವಾಗಿ ಪ್ರಭಾವ ಬೀರುವಷ್ಟು ಶಕ್ತವಾಗಿವೆ. ಶ್ರೀಗಳ ನಂಬಿಕೆ, ತತ್ವಗಳ ಜೊತೆ ಜೊತೆಗೆ ೧೨ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ಆಶಯಗಳಿಗೆ ಇಂಬಾಗಿ–ಬಸವಾದಿಶರಣರ–ಮನೋಭಾವನಗಳ ಪರಿಣಾಮಕಾರಿ ನಿರೂಪಣೆಯ ಕಾರಣದಿಂದ ಮರುಪ್ರದರ್ಶನಗಳನ್ನು ಈ ರೂಪಕಗಳೂ ಕಾಣುತ್ತಿವೆ. ಇವು ಇಷ್ಟರಲ್ಲಿಯೇ ಹಿಂದಿಭಾಷೆಯ ಮೂಲಕ ರಾಷ್ಟ್ರದ ಬೇರೆ ಬೇರೆ ರಾಜ್ಯಗಳಲ್ಲೂ ಪ್ರದರ್ಶನ ಕಾಣುವ ಯೋಗ ಒದಗಿಬರಲಿದೆ. ಇಂಥಹ ದೈಹಿಕ ಅಶಕ್ತತೆಯ ನಡುವೆಯೂ, ಸಾಧಿಸಬೇಕು ಎನ್ನುವ ಬಾದರದಿನ್ನಿ ಅವರ ಛಲ ಹಿಡಿದ ಕಾರ್ಯ ಪೂರೈಸಿಯೇ ತೀರುವ, ದೃಢಭಾವನೆಗಳ ಅಂಶ ಅವರ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ. ಮುಂದುವರೆದು ಡಾ. ಚಂದ್ರಶೇಖರ ಕಂಬಾರ ಅವರಿಗೆ ಎಂಟನೆಯ ಜ್ಞಾನಪೀಠ ಸಂದ ಸಂದರ್ಭದಲ್ಲಿ–ಇಲಕಲ್ಲದ ಸ್ನೇಹರಂಗದ ಕೋರಿಕೆಯ ಮೇರೆಗ ಕಂಬಾರರ ಅಸಂಗತ ನಾಟಕ 'ಖರೋಖರ'ವನ್ನು ನಿರ್ದೇಶಿಸುತ್ತಾರೆ. 'ರಂಗಶಂಕರ' ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಕಂಬಾರರ ನಾಟಕೋತ್ಸವದಲ್ಲಿ ಸ್ನೇಹರಂಗ ಇಲಕಲ್ಲನಿಂದ ಪ್ರದರ್ಶಿಸಲ್ಪಟ್ಟು ಜನಮೆಚ್ಚುಗೆ ಗಳಿಸುತ್ತದೆ. ಬಹಳ ಅಲ್ಪ ಅವಧಿಯಲ್ಲಿ ಉತ್ತರ ಕರ್ನಾಟಕದ ಬಹು ನಗರಗಳಲ್ಲಿ ಮೂವತ್ತಕ್ಕಿಂತ ಹೆಚ್ಚು ಮರುಪ್ರದರ್ಶನಗಳನ್ನು 'ಖರೋಖರ'ಕಂಡಿದೆ.

ಛಲ ಬಿಡದ ತ್ರಿವಿಕ್ರಮನಂತೆ ಮುಂದುವರೆದ ಬಾದರದಿನ್ನಿ ಅವರು ಭಾಲ್ಕಿಯ ಶ್ರೀ ಚನ್ನಬಸವದೇವರ ಅಹ್ವಾನದ ಮೇರೆಗೆ ಅಲ್ಲಿಯ ಹಿರೇಮಠದ ರಂಗ ತಂಡಕ್ಕಾಗಿ ಹೈದರಾಬಾದ ಕರ್ನಾಟಕದ ಶರಣರ ನೆಲೆಬೀಡಾದ ಭಾಲ್ಕಿಯಲ್ಲಿ ಶರಣರ ರೂಪಕಗಳನ್ನು

ಪ್ರದರ್ಶಿಸಿ ಮೆಚ್ಚುಗೆ ಗಳಿಸುತ್ತಾರೆ. ಇನ್ನೂ ಕರ್ನಾಟಕಾದ್ಯಂತ ನಾಟಕಗಳನ್ನು ನಿರ್ಮಿಸಿ ನಿರ್ದೇಶಿಸುವ ಹುಮಸ್ಸಿನಿಂದ ಮುಧೋಳದಲ್ಲಿ ೨೦೧೧ರಲ್ಲಿ ಜರುಗಿದ ರಾಷ್ಟ್ರೀಯ ರನ್ನಕವಿಯ 'ರನ್ನ ಉತ್ಸವದಲ್ಲಿ ಆತನ 'ಗದಾಯುದ್ಧ' ಮಹಾಕಾವ್ಯವನ್ನು ಆಧರಿಸಿ ರೂಪಿಸಿದ 'ಗದಾಯುದ್ಧ'ವನ್ನು ದೊಡ್ಡಾಟದ ಶೈಲಿಯಲ್ಲಿ ನಿರ್ದೇಶಿಸಿ.ಯಶಸ್ಸು ಪಡೆಯುತ್ತಾರೆ. ಇನ್ನು ಅದೇ ಹುಮ್ಮಸ್ಸಿನಿಂದ ನಾಟಕಗಳ ಸೃಷ್ಟಿಗೆ ತೊಡಗುವ ತವಕ ತುಂಬಿಕೊಂಡ ಬಾದರದಿನ್ನಿ ಮೈಮನಸ್ಸುಗಳಲ್ಲಿ, ಬೌದ್ಧಿಕ ಭಾವಗಳಲ್ಲಿ ನಾಟಕಗಳ ಕಾಣಲಾಗದ ಕನಸುಗಳ ಸಾಮ್ರಾಜ್ಯವನ್ನು ತುಂಬಿಕೊಂಡು ಅವುಗಳನ್ನು ಪೂರೈಸುವತ್ತ ದೃಷ್ಟಿ ಹರಿಸಿದ್ದು ಗಮನಾರ್ಹ.

**ಆದರ್ಶ ದಾಂಪತ್ಯ**

ಪಿಯುಸಿಯನ್ನು ತನ್ನ ಉಂಡಾಡಿ ಗುಂಡನ ರೀತಿಯ ಉಪಟಗಳಗಳ ಮೂಲಕ ಎರಡನೇ ಅವಕಾಶದಲ್ಲಿ ಪಾಸಾಗಿ ಬಿ.ಎಸ್.ಸಿ ಪ್ರಥಮಕ್ಕೆ ಪ್ರವೇಶ ಪಡೆದ ೧೯೭೧ರಲ್ಲಿಯೇ ಸಮೀಪದ ಸಂಬಂಧಿಗಳೇ ಆದ ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಅಮಲಝರಿಯ ಶ್ರೀಮತಿ ಅನಸೂಯಮ್ಮನವರು ಧರ್ಮಪತ್ನಿಯಾಗಿ ಇವರ ಜೀವನದಲ್ಲಿ ಪ್ರವೇಶಿಸಿಸುತ್ತಾರೆ. ಆ ದಿನದಿಂದಲೇ ಪತಿಗೆ ತಕ್ಕ ಪತ್ನಿಯಾಗಿ ಬಾದರದಿನ್ನಿ ಅವರ ಆ ವಯಸ್ಸಿನ ಎಲ್ಲ ಹುಡುಗಾಟಗಳನ್ನು ಸಹಿಸಿಕೊಂಡು ನಿಜ ಅರ್ಥದಲ್ಲಿ ಪೌರಾಣಿಕ ಅನುಸೂಯಾದೇವಿಯ ಅಪರಾವತಾರವಾಗಿ, ಕಷ್ಟದಲ್ಲಿ, ಸುಖದಲ್ಲಿ ಭಾಗಿಯಾಗಿ–ಪತಿಯ ನೆರಳಿನಂತೆ ಹಿಂಬಾಲಿಸಿದ್ದಾರೆ. ಅಂತರಾಷ್ಟ್ರೀಯ ಜನಪ್ರಿಯ ಮಾತಿನಂತೆ ಪ್ರತಿಯೊಬ್ಬ ಯಶಸ್ವಿ ಪುರಷನಹಿಂದೆ ಒಬ್ಬ ಮಹಿಳೆ ಇದ್ದೇ ಇರುತ್ತಾಳೆ ಎನ್ನುವ ಮಾತಿಗೆ ಸಾಕ್ಷಿಯಾಗಿ. . . ಮದುವೆಯಾಗಿ. . . ಸಂಸಾರಿಯಾಗಿ ಒಂದು ನೆಲೆ ನಿಲ್ಲದೇ ರಂಗ ಭಿರಂಗಿಯಾಗಿ ಬಿಂದಾಸ್ ಶೈಲಿಯಲ್ಲಿ ಜವಾಬ್ದಾರಿ ಇಲ್ಲದೇ ನಾಟಕ. . . ನಾಟಕ. . . ಎಂದು ತಿರುಗುತ್ತಿದ್ದ ಅಶೋಕರನ್ನು ಸಹಿಸಿಕೊಂಡಿದ್ದ ಅನಸೂಯಮ್ಮನವರ ಹೆಚ್ಚುಗಾರಿಕೆ ಸಹಜವಾಗಿ ಭಾರತೀಯ ಸಂಸ್ಕೃತಿಯ ಪ್ರತೀಕ. ಅದಕ್ಕಾಗಿ ಬಾದರದಿನ್ನಿ ಅವರು ಇಂಥ ಸಹಧರ್ಮಿಣಿಯನ್ನು ಪಡೆಯಲು ಪುಣ್ಯ ಮಾಡಿಯೇ ಬಂದಿದ್ದು ದಿಟ. ಜವಾಬ್ದಾರಿ ಇಲ್ಲದ, ಇನ್ನು ಓದುತ್ತಿದ್ದ, ಭವಿಷ್ಯದ ಬಗ್ಗೆ ನಿಖರತೆಯೇ ಇಲ್ಲದ ಮುಂದಿನದನ್ನು ಯೋಚಿಸದ ಅಶೋಕರನ್ನು ಆ ದಿನಗಳಲ್ಲೇ ಸಹಿಸಿಕೊಂಡ ಇವರು ಅಶೋಕ ಮುಂದೆ ದೆಹಲಿಯ ಎನ್.ಎಸ್.ಡಿ. ಪದವಿಗೆ ಹೋದಾಗ, ಮರಳಿಬಂದಾಗ, ಚಿತ್ರರಂಗ ಸೇರಿಕೊಂಡಾಗ, ಸಂಪೂರ್ಣವಾಗಿ ಅವರಿಗೆ ಅವರ ಮನಸ್ಸಿಗೆ ನೋವಾಗದ ರೀತಿಯಲ್ಲಿ ಎಲ್ಲವನ್ನೂ ಸಹಿಸಿಕೊಂಡು ಸುಂದರ ದಾಂಪತ್ಯ ನಡೆಸಿಕೊಂಡು ನಾಲ್ಕು ಮಕ್ಕಳ ತಾಯಿಯಾಗಿ –ಹೃದಯ ವೈಶಾಲ್ಯ ಮೆರೆದಿದ್ದಾರೆ. ಪಾರ್ಶ್ವವಾಯು ಪೀಡಿತರಾಗಿ ದಾವಣಗೆರೆ ಆಸ್ಪತ್ರೆ

ಸೇರಿದಂದಿನಿಂದ ಹಿಡಿದು ಇಂದಿನವರೆಗೂ ಪತಿಯನ್ನು ಅವರ ದೈಹಿಕ ಅಶಕ್ತತೆಯ ನಡುವೆ–ಸ್ವಂತ ಮಗುವಿನಂತೆ ನೋಡಿಕೊಂಡು ಬಾದರದಿನ್ನಿ ಅವರ ಮನೋಬಲ, ಸಂಕಲ್ಪಶಕ್ತಿ ಹೆಚ್ಚಾಗಲು ಕಾರಣರಾಗಿದ್ದಾರೆ. ಇವತ್ತಿನ ಜಮಾನಾದಲ್ಲಿ ಈ ರೀತಿಯ ಸಾಧ್ವಿಮಣಿ ಸತಿಯನ್ನು ಕಾಣುವದೇ ದುರ್ಲಭ. ಎರಡನೆಯವನಾಗಿದ್ದ ಹಿರಿಮಗನನ್ನು ಅಪಘಾತದಲ್ಲಿ ಕಳೆದುಕೊಂಡ ದುಃಖದ ನಡುವೆಯೂ ಮೂರನೇ ಮಗನಲ್ಲಿ ಬೆಳಕನ್ನು ಕಂಡು ಕುಟುಂಬವನ್ನು ಮುನ್ನಡೆಸಿಕೊಡು ಹೋಗಿದ್ದಾರೆ. ಇಬ್ಬರು ಹೆಣ್ಣುಮಕ್ಕಳಿಗೆ ಮದುವೆ ಮಾಡಿಕೊಟ್ಟು–ಹೆಣ್ಣಜ್ಜನಾಗಿರುವ ಅಶೋಕ ಬಾದರದಿನ್ನಿ ಅವರು ಗಂಡಜ್ಜನಾಗುವ ನಿರೀಕ್ಷೆಯಲ್ಲಿದ್ದಾರೆ.

ದುರ್ಗದ ಅದೇ ವೀರೇಶರ ಐ.ಟಿ.ಐ. ನಲ್ಲಿ–ಇನಸ್ಟ್ರಕ್ಟರ್ ಆಗಿ ಕಾರ್ಯ ಮಾಡುತ್ತಿದ್ದ ಮಗನ ಧರ್ಮಪತ್ನಿ ಸೊಸೆ ಬಾದರದಿನ್ನಿ ಅವರನ್ನು ಅಪ್ಪಾಜಿ ಎಂದು ಕರೆಯುತ್ತಾ ಜೀವನದಲ್ಲಿ ಇನ್ನೊಬ್ಬ ಮಗಳಾಗಿ ಅತ್ತೆಮಾವಂದಿರರನ್ನು ಮಕ್ಕಳಂತೆ ನೋಡಿಕೊಳ್ಳುತ್ತ ಬಾದರದಿನ್ನಿ ಅವರ ಮುಂದಿನ ಸಾಹಸಗಳಿಗೆ ಇಂಬಾಗಿದ್ದಾರೆ. ಹೀಗಾಗಿಯೇ ಅಶೋಕ ಬಾದರದಿನ್ನಿ ಅವರು ತಮ್ಮ ಧರ್ಮಪತ್ನಿಯನ್ನು 'ನನ್ನ ಜೀವನದ ಅಖಂಡ ಬಂಗಾರ ನನ್ನ ಅನಸೂಯಾ' ಎಂದು ನನಗೆ ' ಬೇರಾವ ಬಂಗಾರ, ಸಿಂಗಾರ ಬೇಕಿಲ್ಲ. ಈ ನನ್ನ ಅಖಂಡ ಬಂಗಾರ ಸಾಕು' ಎಂದು ಕೃತಜ್ಞತೆಯ ಉದ್ಗಾರ ಸೂಸುತ್ತಾರೆ. ಅದು ನಿಜ ಕೌಂಟುಂಬಿಕವಾಗಿ–ಸಂತೃಪ್ತಿ ಇದ್ದೂ ಪುರುಷನ ಆಶಯಗಳಿಗೆ ಇಂಬಾಗುವ ಸತಿಯ ಸ್ವಭಾವ ಒಂದಾದರೆ ಸರ್ವಜ್ಞ ಹೇಳಿದಂತೆ ಸ್ವರ್ಗಕ್ಕೆ ಕಿಚ್ಚು ಸಹಜವಾಗಿ ಹಚ್ಚಬಹುದು ಅಲ್ಲವೇ?

**ಸಂತೃಪ್ತ–ಜೀವನ**

ಈಗ ಬಾದರದಿನ್ನಿ ಅವರು ಚಿತ್ರದುರ್ಗದ ಐಯುಡಿಪಿ ಲೇಔಟ ಕಾಲೋನಿಯಲ್ಲಿ 'ಅವ್ವ ಅಪ್ಪ' ಸ್ವಂತ ಮನೆಯಲ್ಲಿ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಎದುರಿಗೆ ಮುಖ್ಯ ರಸ್ತೆಯಲ್ಲಿ ತುಂಬು ಕುಟುಂಬದೊಂದಿಗೆ ಈ ಇಳಿವಯದಲ್ಲೂ ಯೌವನದ ಉತ್ಸಾಹದ ಹುರುಪಿನಲ್ಲಿ –ಚಿಂತೆಗಳಿಲ್ಲದ –ಸಂತೃಪ್ತ ಜೀವನದ ಖುಷಿಯಲ್ಲಿದ್ದಾರೆ.

೧೯೯೦ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯೊಂದಿಗೆ ಹಲವಾರು ಪ್ರಶಸ್ತಿಗಳ ಸರಮಾಲೆಯೇ ಬಾದರದಿನ್ನಿ ಅವರನ್ನು ಅರಸಿಕೊಂಡು ಬಂದಿವೆ. ಅದರಲ್ಲೂ ಪ್ರಮುಖವಾಗಿ. ಇವರು ಪಾರ್ಶ್ವವಾಯುವಿನಿಂದ ಎದ್ದು ಬಂದ ಮೇಲೆ ಒಟ್ಟಾರೆಯಾಗಿ ಇವರ ರಂಗಕ್ಷೇತ್ರದ ಸಾಧನೆಗೆ ಸಾಣೇಹಳ್ಳಿ ಶ್ರೀಮಠದ ಜನಪ್ರಿಯ ಪ್ರಶಸ್ತಿ 'ಶಿವಕುಮಾರ' ಪ್ರಶಸ್ತಿ ಬಾದರದಿನ್ನಿ ಅವರಿಗೆ ಸಲ್ಲುತ್ತದೆ. ಹಾಗೆಯೇ ಕರ್ನಾಟಕ ಸರಕಾರವೂ ಕೂಡ ಇವರ ಚಿತ್ರ ಹಾಗೂ ರಂಗ ಸೇವೆ ಗಮನಿಸಿ

೨೦೦೨–೨೦೦೩ನೇ ಸಾಲಿನ ಕನ್ನಡ ಸಿನೆಮಾ ಪ್ರಶಸ್ತಿಯ ಆಯ್ಕೆ ಸಮಿತಿಗಳ ಸದಸ್ಯರನ್ನಾಗಿಸುತ್ತದೆ. ಎರಡುಸಾವಿರ ಹದಿನಾಲ್ಕರಲ್ಲಿ ಪ್ರತಿಷ್ಠಿತ ಚಿತ್ರದುರ್ಗದ ಮುರುಘರಾಜೇಂದ್ರ ಶ್ರೀಮತದ 'ಮುರುಘಶ್ರೀ' ಪ್ರಶಸ್ತಿಯು ಅಲ್ಲಿಯ ಶರಣ ಸಂಸ್ಕೃತಿ ಉತ್ಸವದಲ್ಲಿ ಕೊಡಮಾಡಲ್ಪಟ್ಟಿತು. ಅಂದಾಜು ೧೫೦ಕ್ಕೂ ಹೆಚು ರಾಜ್ಯ, ರಾಷ್ಟ್ರದ ಪ್ರಶಸ್ತಿಗಳು ಇವರಿಗೆ ಸಂದಿವೆ.

೨೦೧೦ ರಿಂದ ೨೦೧೩ರ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಸಾಂಸ್ಕೃತಿಕ ಆಯ್ಕೆ ಸಮಿತಿಯ ಸದಸ್ಯರಾಗಿ ಇನ್ನೊಬ್ಬ ರಂಗಸಾಧಕಿಯಾಗಿ ಶ್ರೀಮತಿ ಅರುಂಧತಿರಾವ ಅವರೊಂದಿಗೆ ಕಾರ್ಯನಿರ್ವಹಿಸಿದ್ದು ಗಮನಾರ್ಹ.

ಹೀಗೆ ಹತ್ತು ಹಲವು ಖ್ಯಾತಿಗಳಿಂದ ತಮ್ಮದೇ ಆದ ಮಾರ್ಗದ ಛಾಪನ್ನು ರಂಗಭೂಮಿಯಲ್ಲಿ ಶೃತಪಡಿಸಿರುವ ಬಾದರದಿನ್ನಿ ಅವರು ದಿ. ಬಿ.ವಿ.ಕಾರಂತ ದಿ.ಶಂಕರನಾಗ, ದಿ. ಕೆ.ವಿ.ಶಂಕರೇಗೌಡ, ದಿ.ಡಾ.ರಾಜಕುಮಾರ ದಿ. ಪಿ.ಲಂಕೇಶ, ಡಾ ಕಂಬಾರ, ಚಂಪಾ, ಮುಂತಾದ ಖ್ಯಾತ ನಾಮರೊಂದಿಗೆ–ಸಾಣೇಹಳ್ಳಿ, ಸಿರಿಗೆರೆ, ಚಿತ್ರದುರ್ಗ, ಇಲಕಲ್ಲ, ಭಾಲ್ಕಿ ಶ್ರೀಮಠಗಳ ಪೂಜ್ಯರೊಂದಿಗೆ ನಿರಂತರ ಸಂಪರ್ಕದಲ್ಲಿ ವಿಶಿಷ್ಟವಾದ ರಂಗಕಾಣಿಕೆಗಳನ್ನು ನೀಡಿದ ಭಾಜನತ್ವ ಬಾದರದಿನ್ನಿ ಅವರದಾಗಿದೆ.

೨೦೦೨ರಲ್ಲಿ ಶ್ರೀ ಕೆ.ಎಮ್. ವೀರೇಶರ ಬಾಪೂಜಿ ಶಿಕ್ಷಣ ಸಂಸ್ಥೆಯ ಸಾಂಸ್ಕೃತಿಕ ನಿರ್ದೇಶಕರಾಗಿ ನೇಮಕಗೊಳ್ಳುತ್ತಾರೆ. ಅಲ್ಲಿಯವರೆಗೆ ಅತಂತ್ರವಾಸಿಗಳಾಗಿ ಜಂಗಮರೂಪಿ ಓಡಾಟದಲ್ಲಿಯೇ ಇದ್ದ ಬಾದರದಿನ್ನಿ ಅವರು ಆಗ ಚಿತ್ರದುರ್ಗದಲ್ಲಿ ಬಾಡಿಗೆಯ ಮನೆಯಲ್ಲಿ ಸಹಕುಂಟುಂಬ ಸಮೇತರಾಗಿ ಠಿಕಾಣಿ ಹೂಡುತ್ತಾರೆ. ಚದುರಿ ಹೋಗಿದ್ದ ಆರೋಗ್ಯ, ಮೈಮನಸ್ಸುಗಳನ್ನು ಒಂದು ಹದಕ್ಕೆ ತರಲು ಪ್ರಯತ್ನಿಸುತ್ತಾರೆ.

ಪ್ರತಿವರ್ಷ ಚಿತ್ರದುರ್ಗದ ಈ ಬಾಪೂಜಿ ಶಿಕ್ಷಣ ಸಂಸ್ಥೆಯಿಂದ ರಾಷ್ಟ್ರೀಯ ಉತ್ಸವಗಳಲ್ಲಿ ಹಾಗೂ ಚಿತ್ರದುರ್ಗದಲ್ಲಿ ಜರುಗುವ ಇತರೆ ಸಾಂಸ್ಕೃತಿಕ ಉತ್ಸವ ಪ್ರದರ್ಶನಗಳಲ್ಲಿ ಹಲವಾರು ರೀತಿಯ ನಾಟಕಗಳು, ರೂಪಕಗಳು, ಪ್ರಹಸನಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರ್ದೇಶಿಸಿ ಸಂಯೋಜಿಸಿ ಅಲ್ಲೆಲ್ಲ ಭಾಗವಹಿಸಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ಹೀಗಾಗಿ ಅಶೋಕ ಅವರು ಒಂದರ್ಥದಲ್ಲಿ ಇಂತಹ ಸಾಂಸ್ಕೃತಿ ಕೊಡುಗೆಗಳ ಮೂಲಕ ಚಿತ್ರದುರ್ಗದವರೇ ಆಗಿ ಹೋಗಿಬಿಡುತ್ತಾರೆ. ಅವರ ವೈಯ್ಯುಕ್ತಿಕ, ಸಾಂಸ್ಕೃತಿಕ ಕೊಡುಗೆಗಳನ್ನು ಕಂಡ ಚಿತ್ರದುರ್ಗದ ಜನತೆ ಇಂತಹ ಒಬ್ಬ ರಾಜ್ಯ, ರಾಷ್ಟ್ರ ಮಟ್ಟದ ನಿರ್ದೇಶಕ, ಸಾಂಸ್ಕೃತಿಕ ಪ್ರತಿನಿಧಿ ತಮ್ಮೂರಿನಲ್ಲಿ ನೆಲೆ ನಿಂತಿರುವುದಕ್ಕೆ ಅವರಿಗೆಲ್ಲ ಸಂತಸ ಮತ್ತು ಅಭಿಮಾನಕ್ಕೆ ಕಾರಣವಾಗುತ್ತದೆ.

ಈ ಎಲ್ಲಾ ಅಂಶಗಳು ಅಲ್ಲಿ ಏಳು ವರ್ಷಗಳ ಕಾಲ ಇದ್ದ ಸಾಂಸ್ಕೃತಿಕ ಆಸಕ್ತಿಯನ್ನು ಹೊಂದಿ ಆಗ ಜಿಲ್ಲಾಧಿಕಾರಿಯಾಗಿದ್ದ ಶ್ರೀ ಅಮರನಾರಾಯಣ ಅವರು

ಅಶೋಕ ಬಾದರದಿನ್ನಿ ಅವರನ್ನು ಗಮನಿಸಿರುತ್ತಾರೆ. ಇಂತಹ ಪ್ರತಿಭಾವಂತ ರಾಷ್ಟ್ರ ಖ್ಯಾತಿಯ ನಿರ್ದೇಶಕ ಬಾಡಿಗೆ ಮನೆಯಲ್ಲಿ ಇರುವುದೇ? ಎಂದುಕೊಂಡು ವಿಶೇಷ ಯೋಜನೆಯೊಂದರ ಅಡಿಯಲ್ಲಿ ಚಿತ್ರದುರ್ಗದ ಐಯುಡಿಯ ಬಡಾವಣೆಯಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹತ್ತಿಗೊಂಡು ಇವರಿಗೊಂದು ಪ್ರಮುಖ ಸೈಟನ್ನು ಮಂಜೂರು ಮಾಡಲು ಪ್ರಧಾನ ಪಾತ್ರ ವಹಿಸುತ್ತಾರೆ. ಹೀಗೆ ಚಿತ್ರದುರ್ಗ ಜಿಲ್ಲಾ ಆಡಳಿತವು ಅಶೋಕ ಬಾದರದಿನ್ನಿ ಅವರಿಗೆ ಕನಿಷ್ಟ ದರದಲ್ಲಿ ಸೈಟ ಒಂದನ್ನು ಮಂಜೂರು ಮಾಡಿ ೨೦೦೭ರಲ್ಲಿ ಹಸ್ತಾಂತರಿಸುತ್ತಾರೆ.

ಅಶೋಕ ಬಾದರದಿನ್ನಿ ಅವರಿಗೆ ಅದೇ ಒಂದು ಅಚ್ಚರಿ. ಏಕೆಂದರೆ ತಮ್ಮ ಈ ರಂಗ ಪಯಣದಲ್ಲಿ ರಾಷ್ಟ್ರದ ರಾಜಧಾನಿಯಿಂದ ಹಿಡಿದು ಗ್ರಾಮೀಣ ಪರಿಸರದವರೆಗೆ ಇಂತಹ ಸಾಂಸ್ಕೃತಿಕ ಆಸಕ್ತಿಯನ್ನು ಹೊಂದಿದ ಬಹಳಷ್ಟು ಜನ ಐಎಎಸ್.ಅಧಿಕಾರಿಗಳು ಸಿಗುತ್ತಾರೆ. ಆದರೆ ಅಂತವರೆಲ್ಲರಲ್ಲೂ ಇಂತಹ ಮಾನವೀಯತೆಯ ಗೌರವ ಮನೋಭಾವ ಮೂಡಬೇಕಷ್ಟೆ. ಏಕೆಂದರೆ ನನ್ನ ಅನಾರೋಗ್ಯ, ಅಂಗವೈಕಲ್ಯವನ್ನು ಮೆಟ್ಟಿ, ನಾನು ಮಾಡುತ್ತಿದ್ದ ಹೋರಾಟ ಇವುಗಳೊಂದಿಗೆ ನನ್ನ ಸ್ನೇಹಿತನಾಗಿ ಇರುವ ಪಾರ್ಶ್ವವಾಯುಯೊಂದಿಗೆ ಕೂಡಿದ ನನ್ನ ಬದುಕಿನ ಹೋರಾಟವನ್ನು, ಸಾಂಸ್ಕೃತಿಕ ಚೈತನ್ಯವನ್ನು, ನನ್ನ ಆಗಿನ ಸ್ಥಿತಿಯಲ್ಲಿ ಕಂಡು; ನಾನು ಚಿತ್ರದುರ್ಗದಲ್ಲಿ ನೆಲೆನಿಲ್ಲಲು ಅವಶ್ಯವಾದ ಸೈಟ ಕೊಟ್ಟ ಆಗಿನ ಜಿಲ್ಲಾಧಿಕಾರಿ ಶ್ರೀ ಅಮರನಾರಾಯಣರನ್ನು ಹೃದಯ ತುಂಬಿ ಅಶೋಕ ಅವರು ನೆನೆಯುತ್ತಾರೆ.

ಕೇವಲ ನಾಟಕ ನಿರ್ದೇಶನ ಒಂದರ ಮೂಲಕ ಕುಂಟುಂಬವನ್ನು, ಮಕ್ಕಳ ಪಾಲನೆ ಪೋಷಣೆಯನ್ನು, ವಿದ್ಯಾಭ್ಯಾಸಗಳು, ಅರೋಗ್ಯದ ಖರ್ಚುವೆಚ್ಚಗಳನ್ನು ಸರಿದೂಗಿಸುವುದೇ ಕಠಿಣ, ಅಂತಹುದರದಲ್ಲಿ ನನ್ನಂತಹ ಜಂಗಮ ಜೋಗಿ ಹಣ ಕೂಡಿ ಇಡಲು ಸಾಧ್ಯವೇ? ಏಕೆಂದರೆ ದೊಡ್ಡ ಮನಸ್ಸು ಮಾಡಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಡಳಿತ ಅತ್ಯಂತ ಕನಿಷ್ಟ ದರದಲ್ಲಿ ನನಗೆ ಸೈಟನ್ನೇನ್ನೋ ಕೊಟ್ಟರು, ಆದರೆ ಅದನ್ನು ಖರೀದಿ ಹಾಕಿಸಿಕೊಳ್ಳಲು ತುರ್ತು ಹಣದ ಅವಶ್ಯಕತೆ ಇತ್ತು. ನನ್ನತಂಹ ಕುಚೇಲನಿಗೆ ಆಪ್ತರಂತಿರುವ ಸ್ನೇಹಿತರ ಸಂಸ್ಥೆಗಳ, ಆಶ್ರಯವನ್ನು ನೆನೆಯುತ್ತಾರೆ. ಆದರೆ ಆರ್ಥಿಕ ಹಿನ್ನೆಲೆಯಲ್ಲಿ ಕುಟಂಬದಲ್ಲಿ ಒಂದಿದ್ದು, ಒಂದಿಲ್ಲದ ರೀತಿಯನ್ನು ನಿಭಾಯಿಸಿದ ಕೀರ್ತಿ ಅವರ ನೆರಳಿನಂತಿಯೇ ಇದ್ದ ಇವರ ಧರ್ಮಪತ್ನಿ ಅನಸೂಯಮ್ಮನವರದ್ದಾಗಿದೆ.

೨೦೦೭ರಲ್ಲಿ ಅದೇ ಆಗ ಸಿರಿಗೆರೆಯ ಪೂಜ್ಯ ಶ್ರೀ ಗಳು ಕೊಡಮಾಡುತ್ತಿರುವ ಅವರು ಹಿರಿಯ ಶ್ರೀಗಳ ಆಶೀರ್ವಾದದ ಪ್ರತಿಷ್ಠಿತ 'ಶಿವಕುಮಾರ' ಪ್ರಶಸ್ತಿಯ ನಗದು ಹಣ ರೂಪಾಯಿ ೨೫ ಸಾವಿರದೊಂದಿಗೆ ಬಾಪೂಜಿ ಶಿಕ್ಷಣ ಸಂಸ್ಥೆಯ ಶ್ರೀ ಕೆ.ಎಮ್.

ವಿರೇಶ ನೆರವು ಒದಗಿ ಅಂತು ಆ ಸೈಟ್ ೨೦೦೭ ಜನವರಿ ೨೬ರಂದು ಗಣರಾಜ್ಯೋತ್ಸವ ಸಮಾರಂಭದಲ್ಲಿಯೇ ಜಿಲ್ಲಾಡಳಿತದಿಂದ ಹಸ್ತಗತವಾಯಿತು. ಸೈಟೆನೊ ದಕ್ಕಿತು, ಮುಂದೆ ಮನೆ ಕಟ್ಟುವುದು ಅದರದ್ದೇ ಇನ್ನೊಂದು ಕಥೆ. ಅಷ್ಟರಲ್ಲಿಯೇ ಬಾದರದಿನ್ನಿ ಅವರ ಕಾರ್ಯ ಕುಶಲತೆಗೆ, ಸಂಘಟನಾ ಶಕ್ತಿಗೆ ಇನ್ನೊಂದು ಅವಕಾಶ ಒದಗಿಬರುತ್ತದೆ. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾಗಿದ ಶ್ರೀ ಕೆ.ಎಮ್. ವಿರೇಶ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿಯವರು ಕೊಡಮಾಡಿದ ೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಚಿತ್ರದುರ್ಗದಲ್ಲಿ ಆಯೋಜಿಸಬೇಕಾಗುತ್ತದೆ. ವಿರೇಶ ಅವರಿಗೆ ಪ್ರಮುಖ ಮಾರ್ಗದರ್ಶಕರಾಗಿದ್ದ ಶ್ರೀ ಬಾದರದಿನ್ನಿ ಅವರಿಗೆ ಸಹಜವಾಗಿ ಅಖಿಲ ಭಾರತ ಸಾಹಿತ್ಯ ಸಮ್ಮೇಳದ ಸಾಂಸ್ಕೃತಿಕ ಜವಾಬ್ದಾರಿ ಹೆಗಲೇರುತ್ತದೆ. ೩ ದಿನಗಳ ಕಾಲದ ರಾಜ್ಯ, ರಾಷ್ಟ್ರದ ಬೇರೆ ಬೇರೆ ಜಿಲ್ಲೆಗಳ, ವಿವಿಧ ತಂಡಗಳ ವೈವಿಧ್ಯ ಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ೭೪ನೇ ಸಮ್ಮೇಳನವನ್ನಾವರಿಸಿ ಚಿತ್ರದುರ್ಗದ ಜನತೆಯ ಕಣ್ಮನಗಳನ್ನು ತಣಿಸುವಲ್ಲಿ ಕಾರಣವಾಗುತ್ತದೆ. ಜಾತ್ರೆಗಳನ್ನು ನೆನಪಿಸುವ ಇಂತಹ ಕಾರ್ಯಕ್ರಮಗಳಲ್ಲಿ; ಹಿಡಿದ ಕೆಲಸ ಬಿಡದ ಕಾರ್ಯ ವೈಖರಿ, ವೈವಿಧ್ಯತೆ, ಶಿಸ್ತು, ಸಮಯ ಪ್ರಜ್ಞೆಗಳು ಹಾಗೂ ಕಠಿಣ ನಿರ್ಧಾರ ಮುಖ್ಯವಾಗುತ್ತವೆ. ಆಗಿನ ಅಂತಹ ಶಾರೀರಿಕ ಅಶಕ್ತತೆಯ ನಡುವೆಯೂ ಈ ಸಮ್ಮೇಳನದ ಸಾಂಸ್ಕೃತಿಕ ಜವಾಬ್ದಾರಿಯನ್ನು ಇಂತಹ ಸಂದರ್ಭದಲ್ಲಿಯೂ ಸಮರ್ಥವಾಗಿ ನಿಭಾಯಿಸಿದ ಕೀರ್ತಿ ಬಾದರದಿನ್ನಿ ಅವರದ್ದಾಗಿದೆ.

ಹೀಗೆ ಬಂದರೆ ಸಾಲಾಗಿ ಎಲ್ಲ ಒಂದರ ಹಿಂದೆ ಒಂದು ಬೆನ್ನು ಹತ್ತಿ ಬರುತ್ತವಂತೆ. ಅದು ಒಳ್ಳೆಯದೇ ಆಗಿರಬಹುದು ಇಲ್ಲವೇ ಕೆಟ್ಟದ್ದೇ ಇರಬಹುದು. ವೈಕಲ್ಯ, ಅನಾರೋಗ್ಯ, ಆರ್ಥಿಕ ಅಭದ್ರತೆ, ಕೌಟುಂಬಿಕ ತಾಕಲಾಟವೂ ಒಂದರ ಹಿಂದೆ ಒಂದು ಬೆನ್ನು ಬಿದ್ದಿದರೆ ಈಗೆಲ್ಲ ಅಶೋಕ ಬಾದರದಿನ್ನಿ ಅವರಿಗೆ ಒಳ್ಳೆಯ ಫಲಿತಾಂಶಗಳು ಒಂದರ ಹಿಂದೆ ಒಂದು ಕೂಡಿ ಬರುತ್ತವೆ.

ಕುಂಟುಂಬ ಪೋಷಿಸಲು ಬಾಪೂಜಿ ಶಿಕ್ಷಣ ಸಂಸ್ಥೆಯಲ್ಲಿ ಸಾಂಸ್ಕೃತಿಕ ನಿರ್ದೇಶಕ ಸ್ಥಾನ, ಮಗನಿಗೂ ಅಲ್ಲಿ ಪುಟ್ಟ ಉದ್ಯೋಗ, ಮನೆಗಾಗಿ ಸೈಟ ದೊರೆತದ್ದು ಕ.ಸಾ.ಪ.ದ ಸಮ್ಮೇಳನದ ಸಾಂಸ್ಕೃತಿಕ ಜವಾಬ್ದಾರಿ ಆಮೇಲೆ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಸಾಂಸ್ಕೃತಿಕ ಸಮಿತಿಯ ಸದಸ್ಯತ್ವ ಹೀಗೆ ಒಂದರ ಹಿಂದೆ ಎಲ್ಲ ಒಳ್ಳೆಯ ಅಂಶಗಳೇ ಇದಕ್ಕೆ ಕಳಶವಿಟ್ಟಂತೆ ೨೦೦೮ರಲ್ಲಿ ಕರ್ನಾಟಕ ಸರಕಾರವೂ ಅಶೋಕ ಬಾದರದಿನ್ನಿ ಅವರ ರಂಗಸಾಧನೆಯನ್ನು ಗಮನಿಸಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸುತ್ತದೆ. ಅವರ ಅಭಿಮಾನಿಗಳಿಗೆಲ್ಲ ಹರುಷದ ವಾತಾವರಣ. ಅವರ ಈ ಸಾಧನೆ ಅಭೂತಪೂರ್ವವಾದುದು.

ಹೀಗೆ ಈ ರಾಜ್ಯೋತ್ಸವ ಪ್ರಶಸ್ತಿಯ ಮೊತ್ತ ಯಥಾಪ್ರಕಾರ ಚಿತ್ರದುರ್ಗದ ವಿರೇಶ ಅವರ ನೆರವೂ; ಅಭಿಮಾನಿಗಳ ಸಹಾಯಹಸ್ತ, ಮಗ ಪ್ರಕಾಶನ ಸಾಹಸ ಪೂರ್ಣ ಸಹಕಾರದ ನೆರವು, ಬ್ಯಾಂಕ್‌ಗಳ ಸಹಕಾರ, ಕುಟುಂದ ಸಹಕಾರದೊಂದಿಗೆ ಅಶೋಕ ಬಾದರದಿನ್ನಿ ಅವರ ಕನಸಿನ 'ಅವ್ವ ಅಪ್ಪ' ಸ್ವಂತ ಮನೆ ೨೦೦೯ರಲ್ಲಿ ನಿರ್ಮಾಣವಾಗಿ ಗೃಹಪ್ರವೇಶದ ಸುಸಂದರ್ಭ ಒದಗಿಬರುತ್ತದೆ. ಎಂತಹ ವಿಚಿತ್ರ ಯೋಗಾ ಯೋಗ ನೋಡಿ ಸೈಟ ಹಸ್ತಗತವಾದುದು ರಾಷ್ಟ್ರೀಯ ಹಬ್ಬವಾಗಿದ್ದ ಜನೆವರಿ ೨೬, ೨೦೦೭ ರ ಗಣರಾಜ್ಯೋತ್ಸವದಂದೇ. ಹಾಗೆಯೇ ಅಲ್ಲಿ ಕಟ್ಟಿದ ಹೊಸ ಮನೆಯ ಗೃಹ ಪ್ರವೇಶವಾಗಿದ್ದು ನಾಡಹಬ್ಬ ನೆವ್ಹಂಬರ್ ೧ ೨೦೦೯ರ ರಾಜ್ಯೋತ್ಸವದಂದು. ಹೀಗೆ ಸಂತೃಪ್ತ ಸ್ವಂತ ಮನೆ ಪ್ರವೇಶಿಸಿದ ಬಾದರದಿನ್ನಿ ಎಲ್ಲ ಇಲ್ಲವೂಗಳ ನಡುವೆ ಇದ್ದಷ್ಟೇ ಖುಷಿಯ ತೃಪ್ತಿಯ ನಗೆ ಬೀರುತ್ತಾರೆ.

ಹೀಗೆ ಗೃಹಪ್ರವೇಶವಾದ ಒಂದುವಾರಕ್ಕೆ ಮುಂದೆ ನವ್ಹೆಂಬರ ೭ ೨೦೦೯ರಂದು ಒಬ್ಬನೆ ಮಗ ಪ್ರಕಾಶನ ಮದುವೆಯು ರಾಣೆಬೆನ್ನೂರಿನ ಶ್ರೀ ಫಕೀರಗೌಡ ಮಾಲೀಪಾಟೀಲ ಅವರ ಮಗಳು ಶ್ರೀಮತಿ ಜ್ಯೋತಿ ಅವರೊಂದಿಗೆ ಸರಳವಾಗಿ ರಾಣೆಬೆಣ್ಣೂರಿನಲ್ಲಿ ಜರಗುತ್ತದೆ. ಒಬ್ಬನೆ ಮಗ ಪ್ರಕಾಶ ತಂದೆ ಅಶೋಕರಂತೆ ಕನಸುಗಳ ಹುಡುಗ ಏನೋ ನಿಜ. ಆದರೆ ಅಪ್ಪನ ಹಾಗೆ ನಾಟಕಾ ಎನ್ನುವ ಒಲವು ಇಲ್ಲ. ಆದರೆ ಅಪ್ಪನ ಆಸಕ್ತಿಗೆ ಕಿವಿತೆರೆಯುತ್ತಾರೆ. ಆದರೂ ಇಲ್ಲಿ ಮಾತ್ರ ಕಲಾವಿದ, ನಿರ್ದೇಶಕ ಅಶೋಕರ ಕಲಾವಿದ ರಕ್ತ ಸಹಜವಾಗಿ ಮಗನಲ್ಲಿ ಹರಿದೂ ನಾಟಕದಲ್ಲಿ ಸ್ವತಃ ತಾನು ತೊಡಗಿಸಿಕೊಳ್ಳದೇ 'ಅಶೋಕ ಆರ್ಟ್ಸ ಅಕ್ಯಾಡೆಮಿ' ಎನ್ನುವ ಸಂಸ್ಥೆಯನ್ನು ಚಿತ್ರದುರ್ಗದಲ್ಲಿ ಆರಂಭಿಸಿ ಅದರ ಮೂಲಕ ವರ್ಷದಲ್ಲಿ ನಾಲ್ಕಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಆ ಮೂಲಕ ಏನಿದ್ದರೂ ಸಾರ್ಥಕ ಜೀವನದ ಬದುಕು ಎನ್ನುವುದು ಅಶೋಕ ಅವರ ಮಗನ ಆಶಯ. ಐಟಿಐನಲ್ಲಿಯ ಉದ್ಯೋಗಿ ಆಗಿರುವ ಪ್ರಕಾಶನಿಗೆ ಪತ್ನಿ ಬಿ.ಈಡಿ ಪದವಿದರೆಯಾದ ಭಾವಿ ಶಿಕ್ಷಕಿಯಾಗುವ ಕನಸನ್ನು ಹೊತ್ತ ಪತ್ನಿ ದೊರಕಿದ್ದು, ಅವರು ಮಾವ ಅಶೋಕ ಅವರನ್ನು 'ಅಪ್ಪಾಜಿ' ಎಂದು ಕರೆಯುತ್ತಾ ಅವರಿಗೆ ಮೂರನೇ ಮಗಳಾಗಿ ಅತ್ತೆ ಮಾವ ಇಬ್ಬರನ್ನು ತನ್ನ ಎರಡು ಕಣ್ಣುಗಳಂತೆ ನೋಡಿಕೊಳ್ಳುತ್ತಾ ಚಿತ್ರದುರ್ಗದ ಮನೆಗೆ ಬಂದ ಅಶೋಕ ಬಾದರದಿನ್ನಿ ಅವರ ಅಭಿಮಾನಿ ಅತಿಥಿಗಳನ್ನು ಸದಾ ಸತ್ಕರಿಸುವ ಕೈಂಕರ್ಯದಲ್ಲಿ ತೊಡಗಿದ್ದಾರೆ.

ಹೀಗೆ ಅಶೋಕ ಬಾದರದಿನ್ನಿಯವರ ಮನೋಬಲದ, ಇಚ್ಛಾಶಕ್ತಿಯಿಂದ ದೈಹಿಕ ಅಶಕ್ತತೆಯಲ್ಲೂ ಪ್ರಧಾನವಾಗಿ ಬಲಗೈ, ಬಲಗಾಲುಗಳ ಅತಂತ್ರ ಸ್ಥಿತಿಯಲ್ಲೂ ಎಲ್ಲ ಚಟುವಟಿಕೆಗಳನ್ನು ನಿರ್ವಹಿಸುತ್ತಾ ನಾಟಕ ನಿರ್ದೇಶನ, ಶಿಬಿರ, ಸಂಯೋಜನೆ

ಎಂದು ಈ ೬೫ರ ಇಳಿವಯಸ್ಸಿನಲ್ಲಿ ಇನ್ನೂ.. ಇನ್ನೂ ಕೆಲಸ ಮಾಡಬೇಕು ಎಂದು ಅಣ್ಣ ಬಸವಣ್ಣ ಹೇಳಿದ 'ಕಾಯಕವೇ ಕೈಲಾಸ' ಎನ್ನುವ ಮಾತಿನಲ್ಲಿ ನಂಬಿಗೆ ಇರಿಸಿಕೊಂಡು ದೈಹಿಕ ಅಸಮರ್ಥತೆಯ ನಡುವೆ ಆ ಕುರಿತಂತೆ ಮಾತನಾಡಿಸಿದರೆ 'ನನ್ನ ಧರ್ಮಪತ್ನಿ ಹೇಗೆ ಇಡೀ ನನ್ನ ಜೀವನದ ಸಹಭಾಗಿತ್ವವನ್ನು ಪಡೆದಿದ್ದಾಳೋ ಅಂತೆಯೇ ಈ ಕಾಲು ನೋವು–ದೈಹಿಕ ನ್ಯೂನ್ಯತೆಗಳು ನನ್ನ ಸಂಗಾತಿಗಳು' ಎಂದು ಅದೇ ಆತ್ಮವಿಶ್ವಾಸದ ಧ್ವನಿಯಲ್ಲಿ ಭವಿಷ್ಯದ ರಂಗಕ್ಷೇತ್ರದ ಬೆಳವಣಿಗೆಯ ಬಗೆಗೆ ಭರವಸೆಯ ಮಾತುಗಳನ್ನಾಡುತ್ತಾರೆ. ಅದಕ್ಕೆ ಸಾಕ್ಷಿಯಾಗಿ ಈಗಲೂ ೨೦೧೪ರ ಜನೇವರಿ, ಫೆಬ್ರುವರಿಯಲ್ಲಿ ವಿಜಾಪುರದ ಗೆಳೆಯರಿಗಾಗಿ 'ಪಾರಿಜಾತ'ದ ಖ್ಯಾತೀಯ ಕಲಾವಿದ ಲೋಕಾಪೂರದ ಶ್ರೀ ಕೃಷ್ಣ ದೇಶಪಾಂಡೆ ಅವರ ಜೀವನ ಆಧರಿತ ಡಾ ಶ್ರೀರಾಮ ಇಟ್ಟಣ್ಣನವರು ರಚಿಸಿದ 'ಪಾರಿಜಾತದವರು' ನಾಟಕವನ್ನು 'ಪಾರಿಜಾತ'ದ ಶೈಲಿಯಲ್ಲಿಯೇ ನಿರ್ದೇಶಿಸುತ್ತಾರೆ. ಇದು ಇಷ್ಟಕ್ಕೆ ಇನ್ನಿಲ್ಲದೇ ಅದೇ ದಿ. ಪಿ.ಲಂಕೇಶ ಅವರ 'ಸಂಕ್ರಾಂತಿ' ನಾಟಕವನ್ನು ಧ್ವನಿಮುದ್ರಿತ ಶೈಲಿಯಲ್ಲಿ ಕೂಡಲಸಂಗದಮ ಉತ್ಸವಕ್ಕಾಗಿ ಹಿಂದಿನ ರೀತಿಗಿಂತಲೂ ಬೇರೊಂದು ಬಗೆಯಲ್ಲಿ ನಿರ್ದೇಶಿಸುತ್ತಾರೆ. ಅಲ್ಲದೇ ಜೈನ ತೀರ್ಥಂಕರ ಶ್ರೀ ಬಾಹುಬಲಿಯ ತ್ಯಾಗದ ಕಥೆಯನ್ನು ಆಧರಿಸಿದ ಶ್ರೀ ಜಿ.ಟಿ. ಸ್ವಾಮಿ ರಚಿಸಿದ 'ವೀತರಾಗ ವೈಭವ' ನಾಟಕವನ್ನು ಈತ್ತೀಚಗೆ ನಿರ್ದೇಶಿಸಿರುವದು ಗಮನಿಸುವ ಅಂಶ. ಇವೆಲ್ಲವನ್ನೂ ಒಳಗೊಂಡಂತೆ ಗೆಳೆಯರೆಲ್ಲ ಕೂಡಿ ಮತ್ತಷ್ಟು ಜೀವನ, ನಾಟಕ, ಬದುಕು ಕುರಿತಂತೆ ಮಾತಿಗೆ ತೊಡಗಿದರೆ

**ತನ್ನ ತಾನರಿತು ತಾನಾರೆಂದು**
**ತಿಳಿದೊಡನೆ ತಾ ದೇವನೆಂದ**

ಎನ್ನುವ ಶರಣರ ಸಾಲಿನಂತೆ ಮೊದಲು ನಮ್ಮನ್ನು ನಾವು ಅರಿಯಬೇಕು, ಅರಿತು ಜೀವನದ ಸಾರ್ಥಕ್ಯತೆ ಪುರುಷತ್ವಕ್ಕೆ ಒಳಗಾಗಬೇಕು. ವಚನ ಸಾಹಿತ್ಯದಲ್ಲಿ ಶರಣರು ಹೇಳಿದಂತೆ ಮಾಯೆಯ ಗೆಲಿದೊಡೆ, ತನ್ನ ತಾನರಿತೊಡೆ, ತಾನೇ ದೇವ. . . ಎನ್ನುವ ಆ ಮನೋಭೂಮಿಕೆ ಇಂದಿನ ಜನರಲ್ಲಿ ಒಡಮೂಡಬೇಕು ಎಂದು ಆಶಾಭಾವದಿಂದ ಮಾತನಾಡುವದರೊಂದಿಗೆ ಈವರೆಗಿನ ತಮ್ಮ ಬದುಕಿನ ರೀತಿ ನೀತಿ ಭರವಸೆ ಸಾಧನೆಗಳ ಬಗ್ಗೆ ತೃಪ್ತಿಯ ನಗೆ ಬೀರುತ್ತಾರೆ.

ಈ ಸ್ಥಿತಿಯಲ್ಲಿ ಇನ್ನೂ ನೀವು ಎಂದು ಪ್ರಶ್ನಿಸ ಹೊರಟರೆ ಮಾತನ್ನು ಅರ್ಧಕ್ಕೆ ತುಂಡರಿಸುತ್ತ ಮೇಲಿನ ಉಕ್ತಿಯ ಜೊತೆ ಜೊತೆಗೆ ರಂಗಭೂಮಿಯೇ ನನ್ನ ಜೀವಾಳ. ನಾಟಕವೇ ನನ್ನ ಉಸಿರು. ಈ ರಂಗ ಭೂಮಿಯ ಅರ್ಥವಂತಿಕೆಯ ಹುಡುಕಾಟದಲ್ಲಿ ನನ್ನನ್ನು ನಾನು ತೊಡಗಿಸಿಕೊಂಡಿದ್ದೇನೆ. ಅಲ್ಲಿ ನನ್ನನ್ನು ನಾನು ಅರ್ಥೈಸುವಿಕೆಗಾಗಿ ಹುಡುಕುತ್ತಿದ್ದೇನೆ. ಆ ಅರ್ಥವಂತಿಕೆಯೆ ತೃಪ್ತಿಯ ಸೋಪಾನ ಎಂದು ಅದೇ ಗಡ್ಡ

ಕೆರೆದುಕೊಳ್ಳುವ ಶೈಲಿಯಲ್ಲಿ ಎಡಗೈಯ್ಯನ್ನು ಕೆನ್ನೆಯ ಮೇಲೆ ಒಯ್ಯುತ್ತಾ ಏನನ್ನೋ ಮರೆತಂತೆ ದೊಗಲೆ ಅಂಗಿಯಿಂದ ಸಿಗರೇಟ ಹೊರತೆಗೆದು ಧೂಮ್ರವಲಯಿಯಾಗಲು ಹೋಗುತ್ತಾರೆ. ತಕ್ಷಣವೇ. ನಮ್ಮಂಥ ಅಭಿಮಾನಿಗಳು ಸರ್.. . . ಏನಿದು. . .? ಎಂದರೆ ಅದೇ ಹುಡುಗಾಟದ ಗಂಡು ಶೈಲಿಯಲ್ಲಿ 'ಏನದು,. ಏನದು., ಎಂದರೇ, ಇದನ್ನು ಏನನ್ನಬೇಕು. . .'ಕತ್ತೆಬಾಲ ಕುದುರೆ ಜುಟ್ಟು' ಎಂದು ತಮ್ಮದೇ ಆದ ಹುಡುಗಾಟದ ಶೈಲಿಯಲ್ಲಿ ಅದೇ ಸಂತೃಪ್ತ ಜೀವನದ ನಗೆಯನ್ನು ಮತ್ತೆ ಮತ್ತೆ ಬೀರುತ್ತಾರೆ ಅಶೋಕ ಬಾದರದಿನ್ನಿ.

* * *

# ಅನುಬಂಧಗಳು
# ಅಶೋಕ ಬಾದರದಿನ್ನಿಅವರ ಕುರಿತಾದ ಸ್ವ ವಿವರಗಳು

ಹೆಸರು : ಅಶೋಕ ಬಾದರದಿನ್ನಿ

ಧರ್ಮಪತ್ನಿ : ಶ್ರೀಮತಿ ಅನಸೂಯಮ್ಮ

ತಂದೆ : ಶ್ರೀ ರುದ್ರಗೌಡ್ರು

ತಾಯಿ : ಶ್ರೀಮತಿ ಗೌರಮ್ಮ

ಜನ್ಮದಿನಾಂಕ : ೦೬/೦೨/೧೯೫೧

ಜನ್ಮಸ್ಥಳ : ಅಚನೂರ (ಬಾಗಲಕೋಟ ಜಿಲ್ಲಾ)

ವಿದ್ಯಾರ್ಹತೆ : ಅ) ಎಸ್.ಎಸ್.ಎಲ್.ಸಿ ರಾಜ್ಯ ಮಟ್ಟದಲ್ಲಿ

ಬ)ಬಿ.ಎಸ್.ಸಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ


ಕ) ಅಡ್ವಾನ್ಸ್ ಡ್ರಾಮಾ ಡಿಪ್ಲೋಮಾ – ಎನ್.ಎಸ್.ಡಿ. (ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ)ನವ ದೆಹಲಿ


ತಿಳಿದ ಭಾಷೆಗಳು : ಕನ್ನಡ, ಹಿಂದಿ, ಮರಾಠಿ, ಇಂಗ್ಲೀಷ

ಹವ್ಯಾಸಿ ವೃತ್ತಿತಂಡ ಅನುಭವ : 'ಶಿವ ಸಂಚಾರ' ಸಾಣೇಹಳ್ಳಿ –ಏಳು ವರ್ಷ

ವಿಳಾಸ : 'ಅವ್ವ–ಅಪ್ಪ' ಮನೆ ನಂ. ೬೩.
೧೧ನೇ ಮುಖ್ಯ ರಸ್ತೆ, ಐ.ಯು.ಡಿ.ಪಿ. ಲೇಔಟ್, ಚಿತ್ರದುರ್ಗ

# ಶ್ರೀ ಅಶೋಕ ಬಾದರದಿನ್ನಿ ಅವರ ವಂಶಾವಳಿ



## ಶ್ರೀ ಅಶೋಕ ಬಾದರದಿನ್ನಿ ಅವರಿಗೆ ದೊರಕಿದ ಕೆಲವು ಪ್ರಶಸ್ತಿಗಳು ಮತ್ತು ಗೌರವಗಳು

- ಕರ್ನಾಟಕದ ಸರ್ಕಾರದಿಂದ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ– ೧೯೯೦
- ಕಲೆ ಮತ್ತು ರಂಗಭೂಮಿಯಲ್ಲಿ ಸಲ್ಲಿಸಿದ ಸೇವೆಗಾಗಿ ಪ್ರಥಮ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕರ್ನಾಟಕ ಸರ್ಕಾರದಿಂದ ಗೌರವ.
- ಮಂಡ್ಯದ ಧೀಮಂತ ರಾಜಕಾರಣಿ ದಿವಂಗತ ಸಚಿವ ಕೆ.ವ್ಹಿ. ಶಂಕರೇಗೌಡರ ಹೆಸರಿನಲ್ಲಿ ನೀಡುವ ವರ್ಷದ ರಾಜ್ಯಮಟ್ಟದ ರಂಗಭೂಮಿ ಪ್ರಶಸ್ತಿ – ೨೦೦೬
- ಸಾಣೇಹಳ್ಳಿಯ ಜನಪ್ರಿಯ ಪ್ರಶಸ್ತಿ 'ಶ್ರೀ ಶಿವಕುಮಾರ ಪ್ರಶಸ್ತಿ' –೨೦೦೭
- ಕರ್ನಾಟಕ ಘನ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ –೨೦೦೮ರ
- ೨೦೧೨ರಲ್ಲಿ ಶಂಕರ್ ಟಿ.ವಿ ಅವರಿಂದ ಶಂಕರ್ ಪ್ರಶಸ್ತಿ – ೨೦೦೮ರ
- ಚಿತ್ರದುರ್ಗ ಶ್ರೀಮಠದ 'ಮುರುಘಶ್ರೀ ಪ್ರಶಸ್ತಿ'.–೨೦೧೪
- ರಂಗಭೂಮಿ ನಿರ್ದೇಶಕನಾಗಿ ಸಲ್ಲಿಸಿದ ಸೇವೆಗಾಗಿ ತರಳಬಾಳು ಬೃಹನ್ಮಠದಿಂದ ಗೌರವ.
- ಕಲೆ ಮತ್ತು ರಂಗಭೂಮಿಯಲ್ಲಿ ಸಲ್ಲಿಸಿದ ಸೇವೆಗೆ ಯಡೆಯೂರು ಶ್ರೀ ಸಿದ್ದಲಿಂಗೇಶ್ವರ ಬೃಹನ್ಮಠ, ಇವರಿಂದ ಗೌರವ.
- ರಂಗಭೂಮಿಯ ವಿವಿಧ ಚಟುವಟಿಕೆಗಳಲ್ಲಿ ಸಲ್ಲಿಸಿದ ಸೇವೆಗಾಗಿ ಉತ್ತಮ ನಿರ್ದೇಶಕ ಮತ್ತು ಉತ್ತಮ ನಟನಾಗಿ ೨೦೦ಕ್ಕೂ ವಿವಿಧ ಸ್ಥಳಗಳಲ್ಲಿ ಸಂದಿರುವ ಗೌರವ.

ಸದಸ್ಯತ್ವ

೧. ಮೈಸೂರು ರಂಗಾಯಣದ ರಂಗ ಸಮಾಜದ ಸದಸ್ಯತ್ವ – ೨ ಅವಧಿ.

೨. ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಸಮಿತಿ ಸದಸ್ಯ – ೨ ಅವಧಿ.

೩. ೨೦೧೧ ರಿಂದ ೨೦೧೩ರವರೆಗೆ ಕೇಂದ್ರ ಸರ್ಕಾರದ ಮಿನಿಸ್ಟರಿ ಆಫ್ ಕಲ್ಚರ್‌ನಿಂದ ಎಕ್ಸ್‌ಪರ್ಟ್ ಕಮಿಟಿ. ಸದಸ್ಯ.

**ಡ್ರಾಮ ಸ್ಕೂಲ್, ಸಿನಿಮಾ ಥಿಯೇಟರ್, ಟೆಲಿವಿಜನ್ ಸಂಬಂಧಿಸಿದ ಚಟುವಟಿಕೆಗಳು :**

- ಪುಟ್ಟಣ್ಣ ಕಣಗಾಲ್ ಮತ್ತು ಎ.ಎಸ್. ಮೂರ್ತಿಯವರೊಂದಿಗೆ ಬೆಂಗಳೂರಿನಲ್ಲಿ "ಅಭಿನಯ ತರಂಗ" ಎಂಬ ಡ್ರಾಮಾ ಸ್ಕೂಲ್ ಸ್ಥಾಪನೆ. (ಬೆಂಗಳೂರಿನಲ್ಲಿ)

- ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಎಸ್.ಜೆ.ಎಮ್. ಸ್ಕೂಲ್ ಆಫ್ ಡ್ರಾಮ ಸ್ಥಾಪನೆ (ಚಿತ್ರದುರ್ಗ)

- ಕನ್ನಡ ಚಿತ್ರ ನಿರ್ದೇಶನ

- ೩೦೦ ಟೆಲಿವಿಜನ್ ಕಾರ್ಯಕ್ರಮಗಳಲ್ಲಿ ಅಭಿನಯ

- ಚಿತ್ರದುರ್ಗದ ಬಾಪೂಜಿ ಅಂಗವಿಕಲ ಸೇವಾ ಸಂಸ್ಥೆಯ ಬಾಪೂಜಿ ಪಬ್ಲಿಕ್ ಸ್ಕೂಲ್, ಕೆ.ಎಂ.ಎಸ್. ಪದವಿಪೂರ್ವ ಕಾಲೇಜು, ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ(ಡಿ.ಇಡಿ ಮತ್ತು ಬಿ.ಈಡಿ) ಮತ್ತು ಎಸ್.ಎಂ. ಐ.ಟಿ.ಐ. ಕಾಲೇಜು–ಈ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸಾಂಸ್ಕೃತಿಕ ನಿರ್ದೇಶಕರಾಗಿ ಕಾರ್ಯನಿರ್ವಹಣೆ.

## ಕೆಲವು ಪ್ರಮುಖ ಮಹನೀಯರೊಂದಿಗೆ ಸೇವೆ:

ರಂಗಭೂಮಿ

೧. ದಿ. ಬಿ.ವ್ಹಿ.ಕಾರಂತ, ೨. ದಿ. ಶ್ರೀನಿವಾಸ ತಾವರಗೆರೆ, ೩. ದಿ. ಶಂಕರ್‌ನಾಗ್. ೪. ದಿ. ಕೆ.ವ್ಹಿ.ಶಂಕರೇಗೌಡ್ರು, ೫. ದಿ. ಶ್ರೀರಂಗ, ೬. ದಿ. ಜಿ.ವ್ಹಿ.ಜೋಷಿ. ೭. ದಿ. ಪಿ.ಲಂಕೇಶ ೮. ಶ್ರೀ ಡಾ. ಗಿರೀಶ್ ಕಾರ್ನಾಡ್ ೯. ಡಾ. ಚಂದ್ರಶೇಕರ ಕಂಬಾರ, ೧೦. ಡಾ. ಚಂದ್ರಶೇಖರ ಪಾಟೀಲ, ೧೧. ಡಾ. ಪಂಡಿತಾರಾಧ್ಯ ಸ್ವಾಮೀಜಿ, ಸಾಣೇಹಳ್ಳಿ ೧೨. ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಿರಿಗೆರೆ. ೧೩. ಡಾ. ಶಿವಮೂರ್ತಿ ಶರಣರು, ಚಿತ್ರದುರ್ಗ. ೧೪. ಶ್ರೀ ಗುರು ಮಹಾಂತಸ್ವಾಮೀಜಿ ಇಲಕಲ್ಲ, ೧೫. ಡಾ. ರಾಜಶೇಖರಯ್ಯ, ವಿ.ಟಿ.ಯು, ೧೬. ಶ್ರೀ ಕೆ.ಎಮ್. ವೀರೇಶ್, ಬಾಪೂಜಿ ವಿದ್ಯಾಸಂಸ್ಥೆ, ಚಿತ್ರದುರ್ಗ, ೧೭. ಡಿ.ಹೆಚ್.ಗುರುಮೂರ್ತಿ, ಸಿಂಡಿಕೇಟ್ ಮೆಂಬರ್,ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ. ೧೮. ಪ್ರೊ. ರುದ್ರಪ್ಪ, ಕೋ–ಆರ್ಡಿನೇಟರ್, ಬಾಪೂಜಿ ದೂರ ಶಿಕ್ಷಣ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ೧೯. ಜಿ.ಟಿ ವಿರೂಪಾಕ್ಷಪ್ಪ, ಕೋ–ಆರ್ಡಿನೇಟರ್, ಬಾಪೂಜಿ ದೂರ ಶಿಕ್ಷಣ ವಿಭಾಗ, ಕೆ.ಎಸ್.ಓ.ಯು

ಚಲನಚಿತ್ರ ರಂಗದಲ್ಲಿ ಕೆಲವು ಪ್ರಮುಖ ಮಹನಿಯರೊಂದಿಗೆ ಸೇವೆ

೧. ದಿ. ಡಾ. ರಾಜ್‌ಕುಮಾರ, ದಿ. ಬಾಲಕೃಷ್ಣ, ದಿ. ವಜ್ರಮುನಿ, ದಿ. ದಿನೇಶ್, ದಿ.ಶಂಕರನಾಗ್, ದಿ. ಪ್ರಭಾಕರ್, ಶ್ರೀ ರವಿಚಂದ್ರನ್, ಶ್ರೀ ಶಿವರಾಜ್‌ಕುಮಾರ್, ಶ್ರೀ ಅನಂತ್‌ನಾಗ್ ಹಾಗೂ ಮುಂತಾದವರು.

## ಅಶೋಕ ಬಾದರದಿನ್ನಿ ಅವರು ನಿರ್ದೇಶಿಸಿದ ಕೆಲವು ನಾಟಕಗಳು ಮತ್ತು ತಂಡಗಳು

೧. 'ಹ್ಯಾಮ್ಲೆಟ್' – ಬೆನಕ, ಬೆಂಗಳೂರು

೨. 'ಸಂಕ್ರಾಂತಿ'

'ಅಪ್ಪ'

'ಟಿಂಗರ ಬುಡ್ಡಣ್ಣ'
'ಕುಂಟ ಕುಂಟ ಕುರವತ್ತಿ' – ಪ್ರತಿಮಾಸಭಾ, ದಾವಣಗೆರೆ

೩. 'ಮರಣವೇ ಮಹಾನವಮಿ'
'ಶರಣ ಸತಿ ಲಿಂಗ ಪತಿ'
'ವಿಶ್ವಬಂಧು ಮರುಳಸಿದ್ಧ'
'ಉದ್ಭವ'
'ದುರ್ಗಾಸ್ತಮಾನ' – ಶ್ರೀ ತರಳಬಾಳು ಕಲಾ ಸಂಘ, ಸಿರಿಗೆರೆ

೪. 'ವಿಧೂಷಕ'
'ಅಪ್ಪ'
'ಟಿಂಗರ ಬುಡಣ್ಣ'
'ಮನೆ'
'ಗೋಕರ್ಣದ ಗೌಡಶಾನಿ'
'ಈಡಿಪಸ್'
'ಬಾಗಿಲು ತಗಿರಪೋ ಬಾಗಿಲಾ' – ಕಲಾಮಾಧ್ಯಮ, ವಿಜಾಪುರ

೫. 'ತುಘಲಕ್'
'ತಲೆದಂಡ,
'ಸಿರಿಸಂಪಿಗೆ'
'ನಾಗಮಂಡಲ'
'ಖರೋಖರ' – ಸ್ನೇಹರಂಗ, ಇಲಕಲ್ಲ

೬. 'ಉದ್ಭವ' – ರಂಗಸಂಪದ, ಬೆಳಗಾವಿ

೭. 'ಮೃಚ್ಛಕಟಿಕ' – ಕಲೋಧ್ಧಾರಕ ಸಂಘ, ದಾರವಾಡ

೮. 'ಮ್ಯಾಕ್ ಬೆಥ್' – ಅಭಿನಯ, ಮಂಗಳೂರು

೯. 'ಸಂಕ್ರಾಂತಿ'
'ದನಿ ಇಲ್ಲದವರು'
'ಮಿಡ್ ಸಮ್ಮರ ನೈಟ್ಸ್ ಡ್ರೀಮ್'
'ಸಾಯೋಆಟ' – ಗೆಳೆಯರ ಬಳಗ, ಮಂಡ್ಯ

೧೦. 'ಮ್ಯಾಕ್‌ಬೆಥ್' – ಸೃಜನವೇದಿಕೆ, ಬಾಗಲಕೋಟ

೧೧. 'ಕಿಂಗ್‌ಲಿಯರ್' – ಗೆಳೆಯರು, ಜಮಖಂಡಿ

೧೨. 'ಮಹಾ ಬೆಳಗು' – ಶಿವಕುಮಾರ ಕಲಾ ಸಂಘ, ಸಾಣೇಹಳ್ಳಿ

೧೩. 'ಅಭಿಜ್ಞಾನ ಶಾಕುಂತಲಂ'

'ಮಾನಿಷಾದ'
'ಸಿಂಗಾರೆವ್ವ ಮತ್ತು ಅರಮನೆ' — ಮಲ್ಲಿಕಾ, ಬೆಂಗಳೂರ
೧೪. 'ಮೃಚ್ಛಕಟಿಕ' – ರಂಗಸಿರಿ, ಹಾಸನ
೧೫. 'ಸನ್ನಿವೇಶ' —ಅಶೋಕ, ಮೈಸೂರು
೧೬. 'ಶರಣಸತಿ ಲಿಂಗಪತಿ' –ನಳಂದ ಕಲಾ ಸಂಘ, ಜಗಳೂರ
೧೭. 'ಜಗಜ್ಯೋತಿ ಬಸವೇಶ್ವರ'
'ಪ್ರಭುಲಿಂಗ ಲೀಲೆ'
'ಉರಿಲಿಂಗ ಪೆದ್ದಿ' —ಜಮುರಾ ಚಿತ್ರದುರ್ಗ
೧೮. 'ಗದ್ದಾಯುದ್ಧ' — ರನ್ನ ಬಳಗ, ಮುಧೋಳ
೧೯. 'ಪಾರಿಜಾತದವರು'
'ಸಂಕ್ರಾಂತಿ' –ಸ್ನೇಹರಂಗ, ವಿಜಾಪುರ
೨೦. 'ವೀತರಾಗ ವೈಭವ' —ಕನ್ನಡ ಕ್ರಿಯಾ ಸಮಿತಿ, ವಾ.ಕ.ರಾ.ರ.ಸಂ. ವಿಜಾಪುರ

ಶ್ರೀ ಅಶೋಕ ಬಾದರದಿನ್ನಿ ಅವರು ನಿರ್ದೇಶಿಸಿದ ಕೆಲವು ರೂಪಕಗಳು

೧. 'ಕಂದಾಚಾರ'
'ಬಸವ ಬೆಳೆ'
'ಭಾವೈಕ್ಯತೆ'
'ಬಾಳುಗೋಳು'
'ವರದಕ್ಷಿಣೆ' —ಜಮುರಾ ಚಿತ್ರದುರ್ಗ
೨. 'ಯುಗ ಸಂಸ್ಕೃತಿ ಯೋಗಾಂಜಲಿ'
'ಸುನಾಮಿ'
'ಅಂಗವಿಕಲರು ನಾವಲ್ಲ ನೀವು'
'ಕಲಾಂ ಸಲಾಂ' –ಬಾಪೂಜಿ ವಿದ್ಯಾಸಂಸ್ಥೆ, ಚಿತ್ರದುರ್ಗ.
೩. 'ಭುವನದ ಬೆಳಗು'
'ಮಹಾಂತ ಜೋಳಿಗೆ'
'ಜೈ ಜವಾನ' –ಶ್ರೀ ವಿಜಯ ಮಹಾಂತ ಕಲಾ ಲೋಕ ಇಲಕಲ್ಲ
೪. 'ಅಕ್ಕಮಹಾದೇವಿ'
'ಶ್ರೀ ಚನ್ನ ಬಸವದೇವರು' – ಹಿರೇಮಠದ ಕಲಾ ತಂಡ ಭಾಲ್ಕಿ

## ಅಶೋಕ ಬಾದರದಿನ್ನಿ ಅವರು ಅಭಿನಯಿಸಿದ ಕೆಲವು ಕನ್ನಡ ಚಲನಚಿತ್ರಗಳು

೧. ಗೀಜಗನಗೂಡು
೨. ಸಾವಿತ್ರಿ
೩. ಗಿದ್
೪. ಸಂಕ್ರಾಂತಿ
೫. ಹೊಸನೀರು
೬. ಅಮಾನುಷ
೭. ನರಸಿಂಹ
೮. ಶರವೇಗದ ಸರದಾರ
೯. ಮನಮೆಚ್ಚಿದ ಹುಡುಗ
೧೦. ಸಿಡಿದೆದ್ದ ಗಂಡು
೧೧. ಕಿಲಾಡಿತಾತ
೧೨. ಪ್ರೇಮಕ್ಕೂಸೈ
೧೩. ಬಾಳ ಚೆನ್ನಾಗಿದೆ
೧೪. ಅಂಜದ ಗಂಡು
೧೫. ನೀ ನಕ್ಕರೆ ಹಾಲು ಸಕ್ಕರೆ
೧೬. ಒಂದು ಮುತ್ತಿನ ಕಥೆ
೧೭. ಏಕಲವ್ಯ
೧೮. ವಿಜಯಖಡ್ಗ
೧೯. ಏಳು ಸುತ್ತಿನಕೋಟೆ
೨೦. ಕಿಂದರ ಜೋಗಿ
೨೧. ಬಿಡಲಾರೆ ಹೀಗೆ ನಿನ್ನ
೨೨. ಆಸ್ಫೋಟ
೨೩. ನಾಗಿಣಿ
೨೪. ಟೈಗರ್ ಗಂಗು
೨೫. ಇಂಗಳೆ ಮಾರ್ಗ

ನಿರ್ದೇಶಿಸಿದ ಕನ್ನಡ ಚಲನ ಚಿತ್ರ

೧. ಗೌರಿ ಶಂಕರ

ಅಶೋಕ ಬಾದರದಿನ್ನಿ ಅವರು ಅಭಿನಯಿಸಿದ ಕಿರುತರೆ ಧಾರವಾಹಿಗಳು.

೧. ಮಾಲ್ಗುಡಿ ಡೇಸ್

೨. ಕ್ರೇಜಿ ಕರ್ನಲ್

೩. ಸೈಲೆನ್ಸ್ ಪ್ಲೀಜ್

ಪತ್ರಿಕಾ ವಿಮರ್ಶೆಗಳು:

ಸ್ನೇಹರಂಗ ಇಲಕಲ್ಲ ಇವರು

ಬೆಂಗಳೂರಿನಲ್ಲಿ ಅಭಿನಯಿಸಿದ ತುಘಲಕ್ ನಾಟಕದ ವಿಮರ್ಶೆ

ಭೂಮಂಡದಲ ಮೇಲೆ ಉಜ್ವಲ ರಾಜ್ಯವನ್ನು ಕಟ್ಟಬೇಕೆಂಬ ಕನಸು ಕಂಡ ಕನಸಿಗ ತುಘಲಕ್. ತನ್ನ ಹುಚ್ಚು ದರ್ಬಾರಿನಿಂದಲೇ ಪ್ರಸಿದ್ಧಿ. ರಾಜಕೀಯ ಕುಟಿಲತೆ, ಅಧಿಕಾರದ ಗದ್ದುಗೆಯೇರಿ ಮನಸಾ ಇಚ್ಛೆ ವರ್ತಿಸುವ ತುಘಲಕ್ ನಾಟಕವನ್ನು ಸ್ನೇಹರಂಗ ಇಳಕಲ್ಲ, ತಂಡದವರು ಪ್ರಸ್ತುತ ಪಡಿಸಿದರು. (ನಿ.ಅಶೋಕ್ ಬಾದರದಿನ್ನಿ)

ತುಘಲಕ್ ಎಂದ ಕೂಡಲೇ ಸಿ.ಆರ್.ಸಿಂಹರನ್ನು ಕಾಣುವ ಪ್ರೇಕ್ಷಕರಿಗೆ ಇಲಕಲ್ಲ ತಂಡದವರು ವಿಭಿನ್ನ ಅನುಭವ ನೀಡಿದರು. ನಾಟಕದ ಮುಖ್ಯ ಪಾತ್ರವಾಗುವ ತುಘಲಕ್‌ನ ಪಾತ್ರದಲ್ಲಿ ಸಿಂಹರನ್ನು ಬಿಟ್ಟರೆ ಸಮನಾರಿಲ್ಲ ಎಂಬಂತಾಗಿತ್ತು. ಆದರೂ ಇಲಕಲ್ಲ ತಂಡದವರ ಪ್ರಯತ್ನ ಸ್ತುತ್ಯಾರ್ಹವಾದದ್ದು. ತುಘಲಕ್‌ನ ಪಾತ್ರದಲ್ಲಿ ಮಹಮದ್ ಹನೀಫ್ ಖಾಜಿ ಅದ್ಭುತ, ಅತ್ಯಂತ ಸರಳ ರಂಗಸಜ್ಜಿಕೆ ಪಾತ್ರಧಾರಿಗಳ ಸಂಯಮದ ಅಭಿನಯ, ಸ್ಪಷ್ಟವಾದ ಉಚ್ಛಾರಣೆ, ನಿಖರವಾದ ನಿಲುವು ನಾಟಕದ ಯಶಸ್ಸಿಗೆ ಸಹಾಯ ಮಾಡಿದವು. ನಾಟಕದಲ್ಲಿ ಎದ್ದು ಕಂಡು ಬಂದ ಮತ್ತೊಂದು ಅಂಶವೆಂದರೆ–ಬೆಳಕಿನ ವ್ಯವಸ್ಥೆ.ಸಿ.ಜಿ.ಕೆ. ಪ್ರತಿಯೊಂದು ದೃಶ್ಯವನ್ನು ಜೀವಂತಗೊಳಿಸುತ್ತಿದ್ದ ಬೆಳಕಿನ ವ್ಯವಸ್ಥೆ ಪ್ರೇಕ್ಷಕರನ್ನು ದಿಜ್ಞೂಢರನ್ನಾಗಿ ಮಾಡಿತ್ತು.

ಚಿತ್ರತಾರ

ನವೆಂಬರ್ ೩೦, ೧೯೮೪

ಹುಚ್ಚುದೊರೆಯ ಅಂತರಂಗದ ಸಂದುಗೊಂದುಗಳನ್ನು ತಡಕಾಡಿ, ಅರ್ಥೈಸಿಕೊಂಡು ಪ್ರತಿ ಕಾವ್ಯಮಯ ಶಬ್ಧವನ್ನೂ ಸ್ಫುಟವಾದ ಮಾತುಗಾರಿಕೆಯ ಮೂಲಕ, ಆಂಗಿಕಾಭಿನಯದ ಮೂಲಕ ಅಭಿವ್ಯಕ್ತಿಸಿ, ಪ್ರೇಕ್ಷಕನ ಹೃದಯಕ್ಕೆ ನೇರವಾಗಿ

ತಲುಪಿಸಲು ಯತ್ನಿಸುವ ಸ್ನೇಹರಂಗದ ಕಲಾವಿದರ ಪ್ರೌಢ ಕಲಾವಂತಿಕೆಯನ್ನು ಮೆಚ್ಚದಿರುವವರು ತೀರ ವಿರಳ.

–ಶ್ರೀಮತಿ ಬಿ.ಟಿ. ಲಲಿತಾನಾಯಕ
ಲಂಕೇಶ ಪತ್ರಿಕೆ. ಜನೇವರಿ ೨೦ ೧೯೮೫


## ಬಣ್ಣದ ಕನಸಿನ ತುಘಲಕ್

ಗಿರೀಶ ಕಾರ್ನಾಡರ ತುಘಲಕ್ ನಾಟಕವನ್ನು ಅಭಿನಯಿಸಿದವರು ಸ್ನೇಹರಂಗ ಇಲಕಲ್ಲ ತಂಡದವರು. (ನಿರ್ದೇಶನ : ಅಶೋಕ ಬಾದರದಿನ್ನಿ), ನಾಟಕೋತ್ಸವದ ಶ್ರಮದ ಉತ್ತರವಾಗಿ ಮೂಡಿ ಬಂದ ನಾಟಕ, ತುಘಲಕ್ ಪಾತ್ರಧಾರಿ ಮಹಮ್ಮದ ಹನೀಫ್ ಖಾಜಿ ಅವರ ಅಭಿನಯದೊಂದಿಗೆ ಪ್ರೇಕ್ಷಕನ ಮೇಲೆ ಅಮೋಘ ಪ್ರಭಾವವನ್ನು ಬೀರುವಲ್ಲಿ ಸಫಲವಾಯಿತು. ತುಘಲಕ್ ಅನ್ನು ಪ್ರತಿಪಾದಿಸುವಲ್ಲಿ ತನ್ನದೇ ಆದ ಶೈಲಿಯನ್ನು ಅನುಕರಿಸಿದ ಹನೀಫ್ ಎಲ್ಲರ ಗಮನ ಸೆಳೆದರು. ತಾನೋರ್ವ ಹಿರಿಯ ಮಟ್ಟದ ಸೃಜಶೀಲ ನಿರ್ದೇಶಕ ಎನ್ನುವುದನ್ನು ಅಶೋಕ ಸಾಬೀತು ಮಾಡಿದ್ದಾರೆ. ಸರಳ ರಂಗ ಸಜ್ಜಿಕೆ ನಾಟಕದ ಮತ್ತೊಂದು ಗಮನೀಯ ಅಂಶವಾದರೆ, ಒಟ್ಟಾರೆ ನಾಟಕವು ಪ್ರೇಕ್ಷಕನ ಮನಸ್ಸಿನಲ್ಲಿ ಆಳವಾದ ಪರಿಣಾಮವನ್ನು ಬೀರುವಂತೆ ಮಾಡುವಲ್ಲಿ ನಾಟಕದ ಬೆಳಕು ತನ್ನ ಧೀಮಂತ ಕೊಡಿಗೆಯನ್ನು ಕೊಟ್ಟಿದೆ.

–ಚಿತ್ರ ದೀಪ
ನವೆಂಬರ ೨೩,೧೯೮೮

***

## ಶ್ರೀ ಅಶೋಕ ಬಾದರದಿನ್ನಿ- ಕೆಲವು ಛಾಯಾಚಿತ್ರಗಳು



ಶ್ರೀ ಅಶೋಕ ಬಾದರದಿನ್ನಿ



ಧರ್ಮಪತ್ನಿ ಶ್ರೀಮತಿ ಅನಸೂಯಮ್ಮನವರೊಂದಿಗೆ



ಶ್ರೀ ಅಶೋಕ ಬಾದರದಿನ್ನಿ ಮತ್ತು ಕುಟುಂಬ ಹೆಣ್ಣುಮಕ್ಕಳು ಹಾಗೂ ಅಳಿಯಂದಿರು


## ಶ್ರೀ ಅಶೋಕ ಬಾದರದಿನ್ನಿ ಅವರು ನಿರ್ದೇಶಿಸಿದ ನಾಟಕಗಳು




ಮಲ್ಲಿಕಾ ಬೆಂಗಳೂರು -
ಸಿಂಗಾರೆವ್ವ ಮತ್ತು
ಅರಮನೆ
ನಾಟಕದಲ್ಲಿ ಗೌಡನಾಗಿ
ಶ್ರೀ ಅಶೋಕ ಬಾದರದಿನ್ನಿ




1983 ಹೊಸ ದಿಲ್ಲಿಯಲ್ಲಿ ದಿ. ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರೊಂದಿಗೆ
ಗೆಳೆಯರ ಬಳಗ ಮಂಡ್ಯ : ಮೃಚ್ಛಕಟಿಕ ನಾಟಕದ ಕಲಾವಿದರು



ಗೆಳೆಯರ ಬಳಗ ಮಂಡ್ಯ-ಸಂಕ್ರಾಂತಿ ನಾಟಕ ಸಾಂದರ್ಭಿಕ ಚಿತ್ರ.




ಸ್ನೇಹರಂಗ ಇಲಕಲ್ಲ- 'ತುಘಲಕ್' ನಾಟಕದ ದೃಶ್ಯ



ಸ್ನೇಹರಂಗ ಇಲಕಲ್ಲ- 'ತುಘಲಕ್' ನಾಟಕದ ಕಲಾವಿದರು




ಶ್ರೀ ಶಿವಕುಮಾರ ಕಲಾ ಸಂಘ ಸಿರಿಗೆರೆ –'ದುರ್ಗಾಸ್ತಮಾನ' ನಾಟಕದ ದೃಶ್ಯ



ಸ್ನೇಹರಂಗ ಇಲಕಲ್ಲ- 'ಸಿರಿಸಂಪಿಗೆ' ನಾಟಕದ ದೃಶ್ಯದಲ್ಲಿ ಲೇಖಕ ಮತ್ತು ನಿರ್ದೇಶಕರು



ಸ್ನೇಹರಂಗ ಇಲಕಲ್ಲ- 'ತಲೆದಂಡ' ನಾಟಕದ ದೃಶ್ಯಗಳು



ಸ್ನೇಹರಂಗ ಇಲಕಲ್ಲ- 'ತಲೆದಂಡ' ನಾಟಕದ ದೃಶ್ಯಗಳು



1990-ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಅಂದಿನ ಸಂಸ್ಕೃತಿ ಸಚಿವ ಶ್ರೀ ರಮೇಶ ಹಾಗೂ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಚಂದೋಡಿ ಲೀಲಾ



1995 ಚಿತ್ರದುರ್ಗ ಶ್ರೀ ಬೃಹನ್ಮಠದಲ್ಲಿ ಉರಿಲಿಂಗ ಪೆದ್ದಿ ನಾಟಕ
ಸಂದರ್ಭದ ಸತ್ಕಾರ




ಚಿತ್ರದುರ್ಗದಲ್ಲಿ ಚಿತ್ರ ನಿರ್ದೇಶಕ ನಾಗಾಭರಣ ಹಾಗೂ ಹಂಸಲೇಖ
ಅವರೊಂದಿಗೆ



2006 ಮಂಡ್ಯ ದಿ. ಕೆ.ವ್ಹಿ.ಶಂಕರೇಗೌಡ ಪ್ರಶಸ್ತಿ



2007 ತರಳಬಾಳು ಶ್ರೀ ಮಠರದ ಶ್ರೀ ಶಿವಕುಮಾರ ಪ್ರಶಸ್ತಿ



ಜಮಖಂಡಿಯ ಮಧುರಖಂಡಿಯಲ್ಲಿ ಗೌರವ ಪ್ರಶಸ್ತಿ



2007 ಚಿತ್ರದುರ್ಗ ಉತ್ಸವದಲ್ಲಿ ಉಸ್ತುವಾರಿ ಸಚಿವರಾದ ಶ್ರೀ ಬಸವರಾಜ
ಹೊರಟ್ಟಿ ಅವರಿಂದ ಸತ್ಕಾರ